ಬೀದರ • ಕಲಬುರಗಿ • ಯಾದಗಿರಿ • ರಾಯಚೂರ • ಕೊಪ್ಪಳ • ಬಳ್ಳಾರಿ • ಬಾಗಲಕೋಟೆ • ವಿಜಯಪೂರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಸಾರ

Postal Registration No :BDR/ 054/2024-2026 • Email:mallammanudi@gmail.com

# ಮಲ್ಲಮ್ಮ ನುಡಿ

MALLAMMA NUDI REGIONAL NEWSPAPER

ಸಂಪಾದಕರು:ರಮೇಶರಡ್ಡಿ

ಪ್ರಾದೇಶಿಕ ಕನ್ನಡ ದಿನಪತ್ರಿಕೆ
ಮೊ.9448604450

| VOLUME-ಸಂಪುಟ:12 | ISSUE- ಸಂಚಿಕೆ: 327 | PAGE- ಪುಟ 8 | ಶುಕ್ರವಾರ – 27-12-2024, ಬೀದರ | RNI NO:KARKAN/2011/48371 | RS.ಬೆಲೆ 2/– |
|---|---|---|---|---|---|

## ಮಲ್ಲಮ್ಮ ನುಡಿ ಪ್ರಾದೇಶಿಕ ಕನ್ನಡ ದಿನ ಪತ್ರಿಕೆ ಈಗ ಡಿಜಿಟಲೀಕರಣಗೊಂಡಿದೆ..

**ಪ್ರೀಯ ಓದುಗರೇ.......**

**ಜಾ**ಹಿರಾತುದಾರರೇ...

ತಮ್ಮೆಲ್ಲರ ಒತ್ತಾಸೆಯಂತೆ ನಿಮ್ಮ "ಮಲ್ಲಮ್ಮ ನುಡಿ" ಪ್ರಾದೇಶಿಕ ಕನ್ನಡ ದಿನ ಪತ್ರಿಕೆ ಈಗ ಡಿಜಿಟಲೀಕರಣಗೊಂಡಿದೆ ಎಂಬ ವಿಷಯ ತಿಳಿಸಲು ಹರ್ಷಿಸುತ್ತೆನೆ. ಹನ್ನೆರಡು ವಸಂತಗಳನ್ನು ಯಶಸ್ವಿಯಾಗಿ ಪೂರೈಸಿ, ಹದಿಮೂರನೇ ವಸಂತಕ್ಕೆ ಕಾಲಿಡುತ್ತಿರುವ ಈ ಸುಸಂದರ್ಬದಲ್ಲಿ, ರಾಜ್ಯವೇ ಅಲ್ಲದೇ ದೇಶದ ವಿವಿಧಡೆಗಳಿಂದ ಸಹಕಾರ ದೊರೆತ ಹಿನ್ನಲೆಯಲ್ಲಿ ಪತ್ರಿಕೆಯನ್ನು ಡಿಜಿಟಲೀಕರಣಗೊಳಿಸಿ ನೂತನ ವೆಬ್‌ಸೈಟ್ ಲಾಂಚ್ ಮಾಡುವ ಮೂಲಕ onlineನಲ್ಲಿ ಪತ್ರಿಕೆ ವೀಕ್ಷಿಸಲು ಅವಕಾಶವನ್ನು ಕಲ್ಪಿಸಲಾಗಿದೆ. ಈಗ ಪತ್ರಿಕೆಯನ್ನು ನೈಜ ಸುದ್ದಿಯೊಂದಿಗೆ ಹೊಸ ರೂಪದಲ್ಲಿ ನಿಮ್ಮ ಮುಂದಿಡುವ ಪ್ರಯತ್ನ ಮಾಡಲಾಗಿದೆ. ನಮ್ಮ ಈ ಪ್ರಯತ್ನಕ್ಕೆ. ಓದುಗರು, ಚಂದಾದಾರರು, ಹಾಗೂ ಜಾಹೀರಾತುದಾರರಾದ ತಾವುಗಳು ನಿಮ್ಮ ಮನೆಯ ಮಗನಂತೆ ತಮ್ಮ ಪ್ರೋತ್ಸಾಹ ವನ್ನು ಎಂದಿನಂತೆ ನೀಡುವಿರೆಂದು ನಿರೀಕ್ಷಿಸುತ್ತೆವೆ.



ಇಂತಿ
ರಮೇಶರಡ್ಡಿ
ಸಂಪಾದಕ

**www.mallammanudi.in**

## ಕಾಂಗ್ರೆಸ್ ಅಧಿವೇಶನ ಶತಮಾನೋತ್ಸವ

# ವೀರಸೌಧದಲ್ಲಿ ಮಹಾತ್ಮ ಗಾಂಧೀಜಿ ಪುತ್ಥಳಿ ಅನಾವರಣಗೊಳಿಸಿದ ಸಿಎಂ

ಮಲ್ಲಮ್ಮ ನುಡಿ ವಾರ್ತೆ

ಬೆಳಗಾವಿ: ಮಹಾತ್ಮ ಗಾಂಧೀಜಿ ಅಧ್ಯಕ್ಷತೆಯಲ್ಲಿ 1924ರಲ್ಲಿ ಜರುಗಿದ ಕಾಂಗ್ರೆಸ್ ಅಧಿವೇಶನದ ಶತಮಾನೊತ್ಸವ ಅಂಗವಾಗಿ ನಗರದ ಟಿಳಕವಾಡಿಯಲ್ಲಿನ ವೀರಸೌಧದಲ್ಲಿ ಮಹಾತ್ಮ ಗಾಂಧೀಜಿ ನೂತನ ಪ್ರತಿಮೆಯನ್ನು ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಗುರುವಾರ ಅನಾವರಣಗೊಳಿಸಿದರು. ಇದರೊಂದಿಗೆ 'ಗಾಂಧಿ ಭಾರತ' ಕಾರ್ಯಕ್ರಮಗಳಿಗೆ ಚಾಲನೆ ನೀಡಿದರು.


ಇದೇ ವೇಳೆ ವೀರಸೌಧದ ಆವರಣದಲ್ಲಿನ ಗಾಂಧಿ ಸ್ಮಾರಕ ಭವನದಲ್ಲಿನ ನವೀಕೃತ ಫೋ–ಟೊ ಗ್ಯಾಲರಿಯನ್ನು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಉದ್ಘಾಟಿಸಿದರು. ಬಳಿಕ ವೀರಸೌಧ (ಕಾಂಗ್ರೆಸ್ ಬಾವಿ) ಆವರಣದಲ್ಲಿ ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿ ಜಂಟಿಯಾಗಿ ಸಸಿ ನೆಟ್ಟು ನೀರೆರೆದರು. ಈ ಸಂದರ್ಭದಲ್ಲಿ ಸಚಿವರಾದ ಎಚ್.ಕೆ.ಪಾಟೀಲ, ಎಂ.ಬಿ.ಪಾಟೀಲ, ಎಚ್.ಸಿ.ಮಹದೇವಪ್ಪ, ಲಕ್ಷ್ಮೀ ಹೆಬ್ಬಾಳಕರ, ಶರಣಬಸಪ್ಪ ದರ್ಶನಾಪುರ, ಕೆ.ಎಚ್. ಮುನಿಯಪ್ಪ, ಶಾಸಕರಾದ ಆಸಿಫ್ (ರಾಜು) ಸೇಠ್, ಪರಿಷತ್ ಸದಸ್ಯ ಚನ್ನರಾಜ್ ಹಟ್ಟಿಹೊಳಿ, ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿ, ಮಾಜಿ ಆರ್.ವಿ.ದೇಶಪಾಂಡೆ, ಸರಕಾರದ ಮುಖ್ಯ ಸಚೇತಕ ಅಶೋಕ ಪಟ್ಟಣ, ಬುಡಾ ಅಧ್ಯಕ್ಷ ಲಕ್ಷ್ಮಣರಾವ ಚಿಂಗಳೆ, ವಾರ್ತಾ ಇಲಾಖೆಯ ಕಾರ್ಯದರ್ಶಿ ಕಾವೇರಿ ಬಿ.ಬಿ., ಆಯುಕ್ತರಾದ ಹೇಮಂತ್ ನಿಂಬಾಳ್ಕರ್, ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್, ಜಿಪಂ ಸಿಇಓ ರಾಹುಲ್ ಶಿಂಧೆ, ವಾರ್ತಾ ಇಲಾಖೆಯ ಜಂಟಿ ನಿರ್ದೇಶಕರಾದ ಮಂಜುನಾಥ ಡೊಳ್ಳಿನ, ಉಪ ನಿರ್ದೇಶಕರಾದ ಗುರುನಾಥ ಕಡಬೂರ ಮತ್ತಿತರರು ಉಪಸ್ಥಿತರಿದ್ದರು.



## ಸರಕಾರಿ ಶಾಲೆಯಲ್ಲಿ ಕೊಳೆತ ಮೊಟ್ಟೆ ವಿತರಣೆ ಆರೋಪ; ವಿದ್ಯಾರ್ಥಿಗಳಿಗೆ ಹೊಟ್ಟೆನೋವು

ಮಲ್ಲಮ್ಮ ನುಡಿ ವಾರ್ತೆ

ಬೀದರ. ಡಿ. 26 :– ಸರಕಾರಿ ಶಾಲೆಯಲ್ಲಿ ಕೊಳೆತ ಮೊಟ್ಟೆ ವಿತರಣೆ ಮಾಡಿದ್ದರಿಂದಾಗಿ ಮೊಟ್ಟೆ ಸೇವನೆ ಮಾಡಿದ ವಿದ್ಯಾರ್ಥಿಗಳಲ್ಲಿ ಹೊಟ್ಟೆನೋವು ಕಾಣಿಸಿಕೊಂಡ ಘಟನೆ ಖಾಸಿಂಪುರ್ (ಸಿ) ಗ್ರಾಮದಲ್ಲಿ ನಡೆದಿದೆ.



ಮಕ್ಕಳಲ್ಲಿ ಪೌಷ್ಠಿಕಾಂಶ ಹೆಚ್ಚಿಸುವ ಉದ್ದೇಶದಿಂದ ರಾಜ್ಯದ ಸರಕಾರಿ ಶಾಲೆಗಳಲ್ಲಿ ವಾರದ ಆರು ದಿನಗಳು ಮೊಟ್ಟೆಗಳನ್ನು ವಿತರಿಸಲಾಗುತ್ತಿದೆ.

ಆದರೆ ಬೀದರ್ ತಾಲ್ಲೂಕಿನ ಖಾಸಿಂಪುರ್ (ಸಿ) ಗ್ರಾಮದಲ್ಲಿ ಕಳೆದ ಕೆಲವು ದಿನಗಳಿಂದ ಕೊಳೆತ ಮೊಟ್ಟೆಗಳು ವಿತರಿಸುತ್ತಿದ್ದರಿಂದ ಮಕ್ಕಳ ಹೊಟ್ಟೆಯಲ್ಲಿ ನೋವು ಕಾಣಿಸಿಕೊಂಡಿದೆ.

ಕಳೆದ ಒಂದು ತಿಂಗಳಿನಿಂದ ನಮಗೆ ಕೊಳೆತ, ರಬ್ಬರ್ ನಂತಿರುವ ಮೊಟ್ಟೆಗಳು ವಿತರಿಸಲಾಗುತ್ತಿದೆ. ಇದನ್ನು ನಾವು ಮುಖ್ಯೋಪಾಧ್ಯಯರಿಗೆ ತಿಳಿಸಿದರೆ ಅವರು ಏನೂ ಆಗುವುದಿಲ್ಲ ಅದನ್ನೇ ತಿನ್ನಿ ಎಂದು ತಾಕಿತು ಮಾಡುತ್ತಾರೆ ಎಂದು ವಿದ್ಯಾರ್ಥಿಗಳು ಆರೋಪಿಸಿದ್ದಾರೆ.

> ಕೆಲ ದಿನಗಳಿಂದ ನನ್ನ ಮಗಳ ಹೊಟ್ಟೆ ನೋವಾಗುತ್ತಿತ್ತು. ಸ್ಕ್ಯಾನಿಂಗ್ ಮಾಡಿದರೆ ಯಾವುದೇ ರೀತಿಯ ರೋಗಗಳು ಕಂಡುಬಂದಿಲ್ಲ. ಕೊನೆಗೆ ವೈದ್ಯರು ಫುಡ್ ಪಾಯಿಸನ್ (ವಿಷಹಾರ) ಆಗಿದೆ ಎಂದು ಹೇಳಿದರು. ಮೊನ್ನೆ ನನ್ನ ಮಗ ಶಾಲೆಯಿಂದ ಮೊಟ್ಟೆ ತಂದು ತೋರಿಸಿದನು. ಅದು ಸಂಪೂರ್ಣವಾಗಿ ಕೆಟ್ಟು ವಾಸನೆ ಬರುತಿತ್ತು. ನಾನು ಶಾಲೆಗೆ ಭೇಟಿ ನೀಡಿ, ಇದರ ಬಗ್ಗೆ ಮುಖ್ಯೋಪಾಧ್ಯಯರಿಗೆ ತಿಳಿಸಿದ್ದೇನೆ. ಆದರೆ ಅವರು ಇದರ ಬಗ್ಗೆ ಗಮನ ಹರಿಸಲಿಲ್ಲ. ಶಾಲೆಯಲ್ಲಿ ಇನ್ನು 350 ಮೊಟ್ಟೆಗಳಿದ್ದು, ಅವೆಲ್ಲ ಸಂಪೂರ್ಣವಾಗಿ ಕೆಟ್ಟು ರಬ್ಬರ್ ನಂತಾಗಿವೆ.
> **– ಎಂ ಡಿ ಮೋಸಿನ್ ಪಟೇಲ್, ಎಸ್ಡಿಎಂಸಿ ಅಧ್ಯಕ್ಷ.**

ಮೊಟ್ಟೆಗಳು ಕೆಟ್ಟ ವಾಸನೆ

(2ನೇ ಪುಟ ನೋಡಿ...)

## ಫೋಟೋ ಗ್ಯಾಲರಿ ಉದ್ಘಾಟಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ



ಮಲ್ಲಮ್ಮ ನುಡಿ ವಾರ್ತೆ

ಬೆಳಗಾವಿ / ಬೆಂಗಳೂರು, ಡಿಸೆಂಬರ್ 26–ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮಹಾನಗರ ಪಾಲಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ಬೆಳಗಾವಿಯ ರಾಮತೀರ್ಥ ನಗರದಲ್ಲಿರುವ ಗಂಗಾಧರ ರಾವ್ ದೇಶಪಾಂಡೆ ಸ್ಮಾರಕ ಭವನ ಹಾಗೂ ಫೋಟೋ ಗ್ಯಾಲರಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗುರುವಾರ ಉದ್ಘಾಟಿಸಿದರು.

ನಂತರ ಮುಖ್ಯಮಂತ್ರಿಗಳು ಗಂಗಾಧರ ರಾವ್ ದೇಶಪಾಂಡೆ ಸ್ಮಾರಕ ಭವನ ಸುತ್ತಾಡಿದರು ಹಾಗೂ ಭವನದಲ್ಲಿ ಅಳವಡಿಸಲಾಗಿರುವ ಫೋಟೋ ಗ್ಯಾಲರಿಯನ್ನು ವೀಕ್ಷಿಸಿದರು.

ಈ ಸಂದರ್ಭದಲ್ಲಿ ಶತಮಾನೋತ್ಸವ ಸಮಿತಿ ಅಧ್ಯಕ್ಷರು ಹಾಗೂ ಸಚಿವರಾದ ಎಚ್.ಕೆ.ಪಾಟೀಲ್, ಸಚಿವರುಗಳಾದ ಸತೀಶ್ ಜಾರಕಿಹೊಳಿ, ಲಕ್ಷ್ಮೀ ಹೆಬ್ಬಾಳ್ಕರ್, ಶಿವರಾಜ್ ತಂಗಡಗಿ, ದಿನೇಶ್ ಗುಂಡೂರಾವ್, ಭೈರತಿ ಸುರೇಶ, ಶಾಸಕರಾದ ಅಶೋಕ್ ಪಟ್ಟಣ ಸೇರಿದಂತೆ ಸಚಿವರು, ಶಾಸಕರು, ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

ಅಕ್ರಮ ಪಡಿತರ ಜೋಳ ಸಂಗ್ರಹಣೆ ಹಿನ್ನೆಲೆ:

## ಹೂವಿನಹಳ್ಳಿ ಎಫ್.ಪಿ.ಎಸ್. ಸಂಖ್ಯೆ–58 ಲೈಸೆನ್ಸ್ ಅಮಾನತ್ತು



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಡಿ.26– ಪಡಿತರದಾರರಿಗೆ ವಿತರಿಸಲಾಗುವ ಜೋಳವನ್ನು ಅಕ್ರಮವಾಗಿ ಕೊಠಡಿಯಲ್ಲಿ ಸಂಗ್ರಹಿಸಿರುವ ಆರೋಪ ಹಿನ್ನೆಲೆಯಲ್ಲಿ ಅಫಜಲಪೂರ ತಾಲೂಕಿನ ಹೂವಿನಹಳ್ಳಿ ಗ್ರಾಮದ ನ್ಯಾಯಬೆಲೆ ಅಂಗಡಿ ಸಂಖ್ಯೆ 58ರ (ಕಾರ್ಯದರ್ಶಿ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘ ಹೂವಿನಹಳ್ಳಿ) ಲೈಸೆನ್ಸ್ ಸಂಖ್ಯೆ 1277/98ನ್ನು ಮುಂದಿನ ವಿಚಾರಣೆ ಕಾಯ್ದಿರಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತ್ತುಗೊಳಿಸಿ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಕಲಬುರಗಿ ಉಪನಿರ್ದೇಶಕ ಭೀಮರಾಯ ಎಂ. ಆದೇಶ ಹೊರಡಿಸಿದ್ದಾರೆ.

ಅಕ್ರಮ ಜೋಳ ಸಮುಗ್ರಹಣೆ ಹಿನ್ನೆಲೆಯಲ್ಲಿ ಡೀಲರ್ ವಿರುದ್ಧ ಅಗತ್ಯ ವಸ್ತುಗಳ ಕಾಯ್ದೆ–1955 ರಡಿ ದೇವಲ

(2ನೇ ಪುಟ ನೋಡಿ...)

## ದಿ|| ಪಂತರತ್ನ ಶಿರೋಮಣಿ ಸರದಾರ ಜೋಗಾಸಿಂಗರ ಜನ್ಮ ದಿನಾಚರಣೆ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಡಿ. 26 :– ನಗರದ ಪ್ರಸಿದ್ಧ ಗುರು ನಾನಕ ಝಿರಾ ಫೌಂಡೇಶನ ಪೂರ್ವ ಅಧ್ಯಕ್ಷರಾಗಿದ್ದ ಸ್ವರ್ಗಿಯ ಪಂತ ರತ್ನ ಸರದಾರ ಜೋಗಾಸಿಂಗ್ ಅವರ ಜನ್ಮ ದಿನಾಚರಣೆಯನ್ನು ಜೋಗಾಸಿಂಗ್ ಸ್ಮಾರಕ ಉದ್ಯಾನದಲ್ಲಿ ಗುರುವಾರದಂದು ಬೆಳಿಗ್ಗೆ 8:30 ಕ್ಕೆ ಆಚರಿಸಲಾಯಿತು. ಈ ಸಂದರ್ಭದಲ್ಲಿ ಅವರ ಪುತ್ರ ಸರದಾರ ಬಲಬೀರಸಿಂಗ್ ಮತ್ತು ರೇಷ್ಮಾ ಕೌರ ಅಲ್ಲದೆ ಅವರ ಅಪಾರ ಬಂಧು ಮಿತ್ರರು ಮತ್ತು ಗುರು ನಾನಕ ಗ್ರುಪ್ ಆಫ್ ಇಂನ್ಸಿಟಿಟುಷನ್ಸನ ಸಿಬ್ಬಂದಿ ವರ್ಗದವರು ಸ್ಮಾರಕ್ಕೆ ಪುಷ್ಪಗುಚ್ಚ ವಿರಿಸಿ ನಮನ ಸಲ್ಲಿಸಿದರು.

ಸ್ವರ್ಗಿಯ ಪಂತ ರತ್ನ ಶಿರೋಮಣಿ ಸರದಾರ ಜೋಗಾಸಿಂಗರ ನೆನಪಾರ್ಥ ಗುರು ನಾನಕ ಝಿರಾ ಸಾಹೇಬ ಗುರುದ್ವಾರದಲ್ಲಿ ಅಖಂಡ ಪಾಠ ಆಯೋಜನೆ ಮತ್ತು ಲಂಗರ್ ವ್ಯವಸ್ಥೆ ಮಾಡಲಾಗಿತ್ತು.

ಈ ಸಂದರ್ಭದಲ್ಲಿ ಸರದಾರ ಮನಪ್ರೀತ ಸಿಂಗ್, ಸರದಾರ ಪುನಿತ್ ಸಿಂಗ್, ಸರದಾರ ಪವಿತ್ ಸಿಂಗ್ ಮತ್ತು ಅಪಾರ ಬಂಧು ಮಿತ್ರರರು

ನಾಳಿಣಿ ಡಿ.ಜಿ. ಉಪಸ್ಥಿತರಿದ್ದರು.

ಮಾಜಿ ಪ್ರಧಾನಿ ಡಾ.ಮನ್‌ಮೋಹನಸಿಂಗ್ ನಿಧನ;

## ಆರ್ಥಿಕ ಸುಧಾರಣೆಯ ಹರಿಕಾರ ಇನ್ನಿಲ್ಲ!



ಮಲ್ಲಮ್ಮ ನುಡಿ ವಾರ್ತೆ

ದೆಹಲಿ:ಡಿ. 26 : ಮಾಜಿ ಪ್ರಧಾನಿ ಮನಮೋಹನ್ ಸಿಂಗ್ (92) ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ಇಂದು ದೆಹಲಿಯ ಏಮ್ಸ್ ಆಸ್ಪತ್ರೆಯಲ್ಲಿ ನಿಧನರಾದರು. ತುರ್ತು ಚಿಕಿತ್ಸಾ ವಿಭಾಗಕ್ಕೆ ಮನಮೋಹನ್ ಸಿಂಗ್ ಅವರನ್ನು ದಾಖಲಿಸಲಾಗಿತ್ತು.

ಮನಮೋಹನ್ ಸಿಂಗ್ ಅವರ ನಿಧನದ ಹಿನ್ನೆಲೆಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ವಿಪಕ್ಷ ನಾಯಕ ರಾಹುಲ್ ಗಾಂಧಿ ಬೆಳಗಾವಿಯಿಂದ ದೆಹಲಿಗೆ ವಿಶೇಷ ವಿಮಾನದಲ್ಲಿ ತೆರಳಿದ್ದಾರೆ.

ರಾಷ್ಟ್ರಪತಿ ಚುನಾವಣೆ; ವ್ಹೀಲ್ ಚೇರ್ ನಲ್ಲಿ ಬಂದು ಮತದಾನ ಮಾಡಿದ ಮಾಜಿ ಪ್ರಧಾನಿ ಮನಮೋಹನ್ ಸಿಂಗ್

ಡಾ.ಮನಮೋಹನ್ ಸಿಂಗ್ ರಾಜಕೀಯ ಜೀವನ

2004 ರಿಂದ 2014 ರವರೆಗೆ ಪ್ರಧಾನಿಯಾಗಿ ಸೇವೆ ಸಲ್ಲಿಸಿದ ಮನಮೋಹನ್ ಸಿಂಗ್ ಅವರು ಈ ವರ್ಷದ ಆರಂಭದಲ್ಲಿ ರಾಜ್ಯಸಭೆಯಿಂದ ನಿವೃತ್ತರಾಗಿದ್ದರು. ಸಿಂಗ್ ಅವರು ಮೇ 22, 2004 ರಂದು ಪ್ರಧಾನ ಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದರು ಮತ್ತು 2009ರಲ್ಲಿ ಅದೇ ದಿನಾಂಕದಂದು ಮತ್ತೊಮ್ಮೆ ಪ್ರಧಾನಿಯಾಗಿ 2 ನೇ ಅವಧಿಗೆ ಪ್ರಮಾಣವಚನ ಸ್ವೀಕರಿಸಿದ್ದರು.

ಸಿಂಗ್ ಅವರ ರಾಜಕೀಯ ಜೀವನು 1991ರಲ್ಲಿ ಅವರು ರಾಜ್ಯಸಭೆಗೆ ಪ್ರವೇಶಿಸಿದಾಗ ಪ್ರಾರಂಭವಾಯಿತು. ಕೇವಲ ನಾಲ್ಕು ತಿಂಗಳ ನಂತರ, ಅಂದಿನ ಪ್ರಧಾನಿ ಪಿವಿ ನರಸಿಂಹ ರಾವ್ ಸರ್ಕಾರದಲ್ಲಿ ಕೇಂದ್ರ ಹಣಕಾಸು ಸಚಿವರಾಗಿ ನೇಮಕಗೊಂಡರು, ಇದು ಭಾರತದ ಆರ್ಥಿಕತೆಯಲ್ಲಿ ಪರಿವರ್ತನೆಗೆ ಕಾರಣವಾಗಿತ್ತು.

1990ರಲ್ಲಿ ಆರ್ಥಿಕ ಸುಧಾರಣೆಗಳು, ಉದಾರೀಕರಣ ನೀತಿಗಳನ್ನು ಜಾರಿಗೆ ತರುವ ಮೂಲಕ ಭಾರತದ ಅರ್ಥ ವ್ಯವಸ್ಥೆಗೆ ಮನಮೋಹನ್ ಸಿಂಗ್ ಹೊಸ ದಿಕ್ಕು ತೋರಿಸಿದ್ದರ ಕೀರ್ತಿ ಮನಮೋಹನ್ ಸಿಂಗ್ ಅವರಿಗೆ ಸಲ್ಲುತ್ತದೆ.

6 ಅವಧಿಗೆ ರಾಜ್ಯಸಭಾ

(2ನೇ ಪುಟ ನೋಡಿ...)

ಶ್ರೀ ಗುರು ಪುಟ್ಟರಾಜ ಪುಟಾಣಿಗಳ ಕಲಾತಂಡದಿಂದ

## ಜನಪದ ಸಂಭ್ರಮ ಮನ ತಣಿಸಿದ ಜನಪದ ಸಂಗೀತ ಕಾರ್ಯಕ್ರಮ



(ಮಲ್ಲಿಕಾರ್ಜುನ್ ಮಳಿಕೇರಿ)

ಮಲ್ಲಮ್ಮ ನುಡಿ ವಾರ್ತೆ

ಶಹಾಪುರ: ಜನಪದ ಕಲೆಗಳು ನಶಿಸುತ್ತಿರುವ ಇಂದಿನ ದಿನಮಾನಗಳಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಜಾನಪದ ಸಂಗೀತೋತ್ಸವ ಸಮಾರಂಭವನ್ನು ಹಮ್ಮಿಕೊಳ್ಳುವ ಮೂಲಕ ಜನಪದ ಕಲೆಗಳನ್ನು ಉಳಿಸಿ ಬೆಳೆಸುವ ಪ್ರಯತ್ನ ಶ್ಲಾಘನೀಯ ಎಂದು ಪೂಜ್ಯ ಷ.ಬ್ರ.ಗುರುಲಿಂಗ ಶಿವಾಚಾರ್ಯ ಯಲಗೋಡ ತಿಳಿಸಿದರು.

ಬಾಪುಗೌಡ ನಗರದ ಶ್ರೀ ಬನ್ನಿ ಭ್ರಮರಾಂಬಿಕ ದೇವಿ ದೇವಸ್ಥಾನದ ಆವರಣದಲ್ಲಿ ಶ್ರೀ ಗುರು ಪುಟ್ಟರಾಜ ಪುಟಾಣಿಗಳ ಕಲಾತಂಡ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಇವರು ಆಯೋಜಿಸಿದ ಜಾನಪದ ಸಂಗೀತ ಕಾರ್ಯಕ್ರಮದ ಸಾನಿಧ್ಯವಹಿಸಿ ಮಾತನಾಡಿ, ಗ್ರಾಮೀಣ ಪ್ರದೇಶದಲ್ಲಿ ಕಲೆಗಳು ಜೀವಂತವಾಗಿವೆ, ಅವುಗಳನ್ನು

(2ನೇ ಪುಟ ನೋಡಿ...)

ಕಾಂಗ್ರೆಸ್ ಅಧಿವೇಶನ ವಿರೋಧಿಸಿ

## ನಾಳೆ ಗಾಂಧಿ ಪ್ರತಿಮೆ ಮುಂದೆ ಬಿಜೆಪಿಯಿಂದ ಧರಣಿ : ವಿಜಯೇಂದ್ರ




ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು : ದೇಶ, ರಾಜ್ಯದಲ್ಲಿರುವುದು ಅಸಲಿ ಕಾಂಗ್ರೆಸ್ ಪಕ್ಷವಲ್ಲ, ಇದು ನಕಲಿ ಕಾಂಗ್ರೆಸ್ ಪಕ್ಷ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ ಅವರು ಟೀಕಿಸಿದ್ದಾರೆ. ಗುರುವಾರ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಾತ್ಮಾ ಗಾಂಧೀಜಿ ಮತ್ತು ಡಾ.ಅಂಬೇಡ್ಕರ್ ಅವರ ತತ್ವಗಳನ್ನು ಕಾಂಗ್ರೆಸ್ ಪಕ್ಷ ಗಾಳಿಗೆ ತೂರಿದೆ. ಗಾಂಧೀಜಿ ಮತ್ತು ಅಂಬೇಡ್ಕರ್ ಅವರ

(2ನೇ ಪುಟ ನೋಡಿ...)

## ಹಾಲಹಳ್ಳಿ (ಕೆ) ಮಹಾದ್ವಾರ ನಿರ್ಮಾಣಕ್ಕೆ ಚಾಲನೆ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಡಿ. 26 :ಜಿಲ್ಲೆಯ ಪ್ರಸಿದ್ಧ ಪುಣ್ಯಕ್ಷೇತ್ರಗಳಲ್ಲೊಂದಾಗಿರುವ ಹಾಲಹಳ್ಳಿ (ಕೆ) ಯ ಕೊಳ್ಳದ ಶ್ರೀ ಸಂಗಮೇಶ್ವರ ದೇವಸ್ಥಾನಕ್ಕೆ ಮಹಾದ್ವಾರ ನಿರ್ಮಿಸುವ ಬಹುದಿನದ ಸತ್ ಸಂಕಲ್ಪವು ಕೈಗೊಡುವ ಕಾಲ ಕೂಡಿ ಬಂದಂತಾಗಿದೆ. ಕಳೆದ ಜಾತ್ರೆಯಲ್ಲಿ ಘೋಷಣೆ ಮಾಡಿರುವ ಹಾಗೆ ಇಂದು ಬೀದರ ಹುಮನಾಬಾದ ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ಕೊಳ್ಳಕ್ಕೆ ಹೋಗುವ ದಾರಿಗೆ ಬೇಮಳಖೇಡ ಗೋರಟಾ ಬೀದರ ಮಠದ ಶ್ರೀ ಷ.ಬ್ರ. ಡಾ|| ರಾಜಶೇಖರ ಶಿವಾಚಾಯರ್ಯರು ಮಹಾದ್ವಾರ ನಿರ್ಮಾಣಕ್ಕೆ ಭೂಮಿ ಪೂಜೆಯನ್ನು ನೆರವೇರಿಸಿದರು. ಬರುವ ಸಂಕ್ರಾತಿಯಲ್ಲಿ ನಡೆಯುವ ಜಾತ್ರೆಯೊಳಗೆ ಮಹಾದ್ವಾರದ ಕಾಮಗಾರಿಯನ್ನು ಪೂರ್ಣಗೊಳಿಸಿ ಮಹಾದ್ವಾರದ ಉದ್ಘಾಟನೆಯನ್ನು ನೆರವೇರಿಸುವ ಸಂಕಲ್ಪವನ್ನು ಈ ಸಂದರ್ಭದಲ್ಲಿ ಕೈಗೊಳ್ಳಲಾಗಿದೆ ಎಂದು ಸಂಗವೇಶ್ವರ ದೇವಸ್ಥಾನದ ಪಂಚ ಕಮಿಟಿಯವರು ಹೇಳಿದರು. ಈ ಸಂದರ್ಭದಲ್ಲಿ ಬಸವರಾಜ ಪಾಟೀಲ, ಶಿವು ಪೂಜಾರಿ, ಬಸವರಾಜ ಹಾಲಹಳ್ಳಿ, ಕುಬೇಂದ್ರಪ್ಪ ಚಿತ್ರದುರ್ಗ, ಗುರು ಕಿರಣ, ಅಮರ ಧೋತ್ರೆ, ಅಭಿಷೇಕ ನಿಂಗಬಾಶೆಟ್ಟಿ ಮುಂತಾದ ಗಣ್ಯರು ಇದ್ದರು.

# ಒಂದನೆ ಪುಟದಿಂದ...

## ಹೂವಿನಹಳ್ಳಿ ಎಫ್.ಪಿ.ಎಸ್. ಸಂಖ್ಯೆ–58 ಲೈಸೆನ್ಸ್ ಅಮಾನತ್ತು

ಠಾಣೆಯಲ್ಲಿ ಗುನ್ನೆ ಸಂಖ್ಯೆ.0089/2024 ರಂತೆ ಇದೇ ಡಿಸೆಂಬರ್ 20 ರಂದು ಪ್ರಕರಣ ದಾಖಲಿಸಿರುವುದರಿಂದ ಸದರಿ ಅಂಗಡಿ ವಿರುದ್ಧ ಕ್ರಮ ಕೈಗೊಂಡು ಪಡಿತರದಾರರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸುವಂತೆ ಅಫಜಲಪೂರ ತಹಶೀಲ್ದಾರ ಪ್ರಸ್ತಾವನೆ ಸಲ್ಲಿಸಿದರು.

ಎಫ್.ಪಿ.ಎಸ್. ಮೇಲಿನ ಪ್ರಕರಣ ದಾಖಲಾದ ಹಿನ್ನೆಲೆಯಲ್ಲಿ ಡೀಲರ್ ಗೆ ನೋಟಿಸ್ ಜಾರಿಗೊಳಿಸಿ 24 ಗಂಟೆಯಲ್ಲಿ ಲಿಖಿತ ಹೇಳಿಕೆ ನೀಡುವಂತೆ ಸೂಚಿಸಿದ್ದರು ಯಾವುದೇ ಸಮಜಾಯಿಷಿ ಹೇಳಿಕೆ ನೀಡದ ಕಾರಣ ಕರ್ನಾಟಕ ಅಗತ್ಯ ವಸ್ತುಗಳ ಸಾರ್ವಜನಿಕ ವಿತರಣಾ ಪದ್ಧತಿ (ನಿಯಂತ್ರಣ) ಆದೇಶ–2016ರ ಕ್ಲಾಜ್ 12(1) ಮತ್ತು ತಿದ್ದುಪಡಿ ಆದೇಶ–2017ರ 2(ಇ) ರಂತೆ ಹೂವಿನಳ್ಳಿ ಗ್ರಾಮದ ನ್ಯಾಯಬೆಲೆ ಅಂಗಡಿ ಸಂಖ್ಯೆ 58ರ ಪ್ರಾಧಿಕಾರ ಸಂ–ಖ್ಯೆ:1277/98 ನ್ನು ಅಮಾನತ್ತುಗೊಳಿಸಲಾಗಿದೆ ಎಂದು ಆದೇಶದಲ್ಲಿ ಸ್ಪಷ್ಟಪಡಿಸಲಾಗಿದೆ.

ಅಮಾನತ್ತು ಹಿನ್ನೆಲೆಯಲ್ಲಿ ಎಫ್.ಪಿ.ಎಸ್. 58ರ ಪಡಿತರದಾರರನ್ನು ಹತ್ತಿರದ ಸೂಕ್ತ ನ್ಯಾಯ ಬೆಲೆ ಅಂಗಡಿಗೆ ವರ್ಗಾಯಿಸಿ ಪಡಿತರ ಆಹಾರ ಧಾನ್ಯ ವಿತರಣಕ್ಕೆ ಕ್ರಮ ವಹಿಸಬೇಕೆಂದು ಅಫಜಲಪೂರ ತಹಶೀಲ್ದಾರ ಅವರಿಗೆ ಆದೇಶದಲ್ಲಿ ತಿಳಿಸಲಾಗಿದೆ.

## ಸರಕಾರಿ ಶಾಲೆಯಲ್ಲಿ ಕೊಳೆತ ಮೊಟ್ಟೆ ವಿತರಣೆ ಆರೋಪ; ವಿದ್ಯಾರ್ಥಿಗಳಿಗೆ ಹೊಟ್ಟೆನೋವು

ಬರುತ್ತಿದ್ದರಿಂದ ಕೆಲ ವಿದ್ಯಾರ್ಥಿಗಳು ಮೊಟ್ಟೆ ತಿನ್ನುವುದು ಬಿಟ್ಟಿದ್ದೇವೆ. ಆದರೆ ಮೊಟ್ಟೆ ಸೇವನೆ ಮಾಡಿದ ವಿದ್ಯಾರ್ಥಿಗಳಲ್ಲಿ ಹೊಟ್ಟೆ ನೋವು ಕಾಣಿಸಿಕೊಂಡಿದೆ ಎಂದು ವಿದ್ಯಾರ್ಥಿಗಳು ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ.

ಇವತ್ತು ಬೆಳಿಗ್ಗೆ 10:30 ಕ್ಕ ಎಸ್ ಡಿ ಎಂ ಸಿ ಅಧ್ಯಕ್ಷರು ನನಗೆ ಕರೆ ಮಾಡಿ ಮಾಹಿತಿ ತಿಳಿಸಿದರು. ತಕ್ಷಣವೇ ನಾನು ಖಾಸಿಂಪುರ್ (ಸಿ) ಗ್ರಾಮದ ಶಾಲೆಗೆ ಭೇಟಿ ಅಲ್ಲಿನ ವಿದ್ಯಾರ್ಥಿಗಳ ಜೊತೆ ಮಾತಾಡಿದ್ದೇನೆ. ಮೊಟ್ಟೆಯಲ್ಲಿ ವಾಸನೆ ಬರುತ್ತಿದೆ ಎಂದು ವಿದ್ಯಾರ್ಥಿಗಳು ಹೇಳಿದರು. ತಕ್ಷಣವೇ ಬೇರೆ ಮೊಟ್ಟೆಗಳು ತಂದು ವಿದ್ಯಾರ್ಥಿಗಳ ಜೊತೆ ನಾನು ಕೂಡ ಮೊಟ್ಟೆ ಸೇವನೆ ಮಾಡಿ ಬಂದಿದ್ದೇನೆ. ಇನ್ನು ಮುಂದೆ ಮೊಟ್ಟೆಗಳು ಬದಲಾವಣೆ ಮಾಡಿ ಚೆನ್ನಾಗಿರುವ ಮೊಟ್ಟೆಗಳು ವಿತರಣೆ ಮಾಡಬೇಕು ಎಂದು ಮುಖ್ಯೋಪಾಧ್ಯಯರಿಗೆ ಹೇಳಿದ್ದೇನೆ. ಈಗ ಅಲ್ಲಿ ಯಾವುದೇ ಸಮಸ್ಯೆ ಇಲ್ಲ.

**– ಝೂಕೀರ್ ಹುಸೈನ್, ಮಧ್ಯಾಹ್ನ ಉಪಹಾರ ಯೋಜನೆ ತಾಲ್ಲೂಕು ಅಧಿಕಾರಿ.**

## ಜನಪದ ಸಂಭ್ರಮ ಮನ ತಣಿಸಿದ ಜನಪದ ಸಂಗೀತ ಕಾರ್ಯಕ್ರಮ

ಮುಂದಿನ ಪೀಳಿಗೆಗೆ ಉಳಿಸಿ ಬೆಳೆಸಬೇಕಿದೆ. ತಂದೆತಾಯಿ ಗುರು ಹಿರಿಯರನ್ನು ಗೌರವಿಸುವ ಮೂಲಕ ಸಮಾಜದಲ್ಲಿ ಉತ್ತಮ ಪ್ರಜೆಗಳಾಗಿ ರೂಪುಗೊಳ್ಳುವ ಪ್ರತಿಯೊಬ್ಬರಿಗೂ ಸಂಸ್ಕಾರ ಮುಖ್ಯವಾಗಿದ್ದು, ಗ್ರಾಮೀಣ ಸೊಗಡು ನಮ್ಮೆಲ್ಲರ ಜನಮಾನಸದಲ್ಲಿ ಉಳಿಯಬೇಕು, ಎಲೆಮರೆಕಾಯಿಯಂತಿರುವ ಸಂಗೀತ ಕಲಾವಿದರನ್ನು ಗುರುತಿಸುವ ಮಹತ್ವ ಕಾರ್ಯ ನಿರಂತರ ನಡೆಯಲಿ ಎಂದು ತಿಳಿಸಿದರು.

ಕರವೇ ಉತ್ತರ ಕರ್ನಾಟಕದ ಶರಣು.ಬಿ.ಗದ್ದುಗೆ ಚಾಲನೆ ನೀಡಿ ಮಾತನಾಡಿದರು. ದತ್ತರಾಜ ಕಲಶೆಟ್ಟಿ ಗವಾಯಿಗಳ ನೇತೃತ್ವದಲ್ಲಿ ಕಾರ್ಯಕ್ರಮ ಜರುಗಿದವು.

ಈ ಸಂದರ್ಭದಲ್ಲಿ ನಿವೃತ್ತ ಡಿಡಿಪಿಐ ಶಾಂತಗೌಡ ಪಾಟೀಲ್, ಹಿರಿಯ ಉದ್ಯಮಿ ಫೇವರ ಚಂದ ಜೈನ್, ಜಿಲ್ಲಾ ಯೂನಿಯನ್ ಸಹಕಾರ ಒಕ್ಕೂಟದ ಅಧ್ಯಕ್ಷ ವಿಶ್ವನಾಥರೆಡ್ಡಿ ದರ್ಶನಾಪುರ, ಪ್ರಮುಖರಾದ ಚೆನ್ನಪ್ಪ ಆನೆಗುಂದಿ, ಮಹಾದೇವಪ್ಪ ಸಾಲಿಮನಿ, ಶಿವುಕುಮಾರ ತಳವಾರ, ಗುರುಮಣೀಕಂಠ, ರಾಮಬಾಬು, ಕೆಂಚಪ್ಪ ನಗನೂರು, ಬಸವರಾಜ ಹಿರೇಮಠ, ಎಂ.ನಾರಾಯಣ, ರವೀಂದ್ರನಾಥ ಆರ್.ಎಂ.ಹೊನ್ನಾರೆಡ್ಡಿ, ಮುತ್ತು ಕೊಲ್ಲೂರು, ಸೇರಿದಂತೆ ಅನೇಕರು ಇದ್ದರು. ವಿವಿಧ ಕ್ಷೇತ್ರದಲ್ಲಿ ಸೇವೆ ಮಾಡಿದ ಗಣ್ಯರಿಗೆ ಗೌರವಿಸಿ ಸನ್ಮಾನಿಸಲಾಯಿತು. ಹೆಸರಾಂತ ಕಲಾವಿದರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ತಮ್ಮ ಕಲೆ ಪ್ರದರ್ಶಿಸಿದರು.

## ಮಾಜಿ ಪ್ರಧಾನಿ ಡಾ.ಮನ್‌ಮೋಹನಸಿಂಗ್ ನಿಧನ; ಆರ್ಥಿಕ ಸುಧಾರಣೆಯ ಹರಿಕಾರ ಇನ್ನಿಲ್ಲ!

ಸದಸ್ಯರಾಗಿ ಸೇವೆ ಸಲ್ಲಿಸಿದ್ದ ಸಿಂಗ್, ಒಮ್ಮೆಯೂ ಲೋಕಸಭೆ ಸದಸ್ಯರಾಗಿ ಆಯ್ಕೆಯಾಗಲಿಲ್ಲ. 1999 ರಲ್ಲಿ ದಕ್ಷಿಣ ದೆಹಲಿ ಲೋಕಸಭಾ ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸಿದ್ದ ಸಿಂಗ್, ಬಿಜೆಪಿಯ ವಿಜಯ್ ಕುಮಾರ್ ಮಲ್ಹೋತ್ರ ವಿರುದ್ಧ ಪರಾಭವಗೊಂಡಿದ್ದರು.

ಅಸ್ಸಾಂ ನಿಂದ 5 ಬಾರಿ ಹಾಗೂ ಅಲ್ಪಾವಧಿಗೆ ರಾಜಸ್ಥಾನದಿಂದ ರಾಜ್ಯಸಭೆಗೆ ಆಯ್ಕೆಯಾಗಿದ್ದರು. 1998 ರಿಂದ 2004 ರವರೆಗೆ ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕನ ಸ್ಥಾನವನ್ನು ಹೊಂದಿದ್ದರು.

ಖಃಖ ಗವರ್ನರ್ ಆಗಿ ಸೇವೆ ಸಲ್ಲಿಸಿದ್ದ ಮನಮೋಹನ್ ಸಿಂಗ್

1932 ರ ಸೆ.26 ರಂದು ಅಂದಿನ ಅವಿಭಜಿತ ಭಾರತದಲ್ಲಿ ಜನಿಸಿದ ಡಾ. ಮನಮೋಹನ್ ಸಿಂಗ್, 1972 ರಲ್ಲಿ ಹಣಕಾಸು ಸಚಿವಾಲಯದಲ್ಲಿ ಮುಖ್ಯ ಆರ್ಥಿಕ ಸಲಹೆಗಾರರಾಗಿ ಸೇವೆ ಸಲ್ಲಿಸಿದ್ದರು. ಅಷ್ಟೇ ಅಲ್ಲದೇ 1982–1985 ಅವಧಿಯಲ್ಲಿ ಆರ್ ಬಿಐ ಗವರ್ನರ್ ಆಗಿಯೂ ಕಾರ್ಯನಿರ್ವಹಿಸಿದ್ದರು.

ಅಸಾಧಾರಣ ಶೈಕ್ಷಣಿಕ ಹಿನ್ನೆಲೆಯೊಂದಿಗೆ, ಸಿಂಗ್ ಃ೦ ಮತ್ತು ಒಂ ಎರಡರಲ್ಲೂ ಪಂಜಾಬ್ ವಿಶ್ವವಿದ್ಯಾಲಯದಲ್ಲಿ ಅಗ್ರಸ್ಥಾನ ಪಡೆದಿದ್ದರು. ಕೇಂಬ್ರಿಡ್ಜ್‌ನಲ್ಲಿ ಹೆಚ್ಚಿನ ಅಧ್ಯಯನವನ್ನು ಪಡೆದ ಅವರು, ಆಕ್ಸ್‌ಫರ್ಡ್‌ನಿಂದ ಡಾಕ್ಟರೇಟ್ ಪದವಿ ಗಳಿಸಿದರು. ಹಣಕಾಸು ಸಚಿವರಾಗಿ, ಅವರು ಭಾರತವನ್ನು ಖಾಸಗೀಕರಣ, ಉದಾರೀಕರಣ ಮತ್ತು ಜಾಗತೀಕರಣದತ್ತ ಮುನ್ನಡೆಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಈ ವರ್ಷದ ಆರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿಯವರಿಂದ ಪ್ರಶಂಸೆ ಗಳಿಸಿದ್ದರು. ಇನ್ನೊಂದು ಸದನದಲ್ಲಿ ಮತದಾನದ ವೇಳೆ ಎದುರಾಳಿಗಳು ಗೆಲ್ಲುತ್ತದೆ ಎಂದು ಗೊತ್ತಿದ್ದರೂ ಡಾ.ಮನಮೋಹನ್ ಸಿಂಗ್ ಅವರು ಗಾಲಿಕುರ್ಚಿಯಲ್ಲಿ ಬಂದು ಮತ ಚಲಾಯಿಸಿದ್ದು ನೆನಪಿದೆ' ಎಂದು ಮೋದಿ ನೆನಪಿಸಿಕೊಂಡಿದ್ದು ಗಮನಾರ್ಹ

ಡಾ.ಮನಮೋಹನ್ ಸಿಂಗ್ ನಿಧನಕ್ಕೆ ಪ್ರಧಾನಿ ನರೇಂದ್ರ ಮೋದಿ, ಸಿಎಂ ಸಿದ್ದರಾಮಯ್ಯ, ಡಿಕೆ ಶಿವಕುಮಾರ್ ಸೇರಿದಂತೆ ಗಣ್ಯರು ಸಂತಾಪ ಸೂಚಿಸಿದ್ದಾರೆ.

## ನಾಳೆ ಗಾಂಧಿ ಪ್ರತಿಮೆ ಮುಂದೆ ಬಿಜೆಪಿಯಿಂದ ಧರಣಿ : ವಿಜಯೇಂದ್ರ

ಹೆಸರು ಹೇಳುವ ನೈತಿಕತೆ, ಯೋಗ್ಯತೆ ಕಾಂಗ್ರೆಸ್ಸಿಗರಿಗೆ ಇಲ್ಲ ಎಂದು ಆಕ್ಷೇಪಿಸಿದರು. ಕಾಂಗ್ರೆಸ್ ಪಕ್ಷದವರಿಗೆ ಈ ದೇಶದ ಬಗ್ಗೆ, ಅಖಂಡತೆ, ಸಮಗ್ರತೆ ಬಗ್ಗೆ ಬದ್ಧತೆ ಇಲ್ಲ. ದೇಶ ಒಡೆಯುವ ಕೆಲಸವನ್ನು ಕಾಂಗ್ರೆಸ್ಸಿಗರೇ ಮಾಡಿದ್ದಾರೆ ಎಂದು ಹೇಳಿದರು. ಬಾಬಾ ಸಾಹೇಬರಿಗೆ ಸಂಬಂಧಿಸಿದ 5 ಪ್ರಮುಖ ಸ್ಥಳಗಳನ್ನು ಪ್ರಧಾನಿ ನರೇಂದ್ರ ಮೋದಿಜೀ ಅವರು ಪಂಚತೀರ್ಥಗಳನ್ನಾಗಿ ಅಭಿವೃದ್ಧಿಪಡಿಸಿದ್ದಾರೆ ಎಂದು ವಿವರಿಸಿದರು. ಕಾಂಗ್ರೆಸ್ ಪಕ್ಷವು ರಾಜ್ಯದ ಜನರ ತೆರಿಗೆ ಹಣವನ್ನು ಬಳಸಿಕೊಂಡು ಬೆಳಗಾವಿಯಲ್ಲಿ ಮಹಾಧಿವೇಶನ ಮಾಡಲು ಹೊರಟಿರುವುದು ಸರಿಯಲ್ಲ . ನಕಲಿ ಕಾಂಗ್ರೆಸ್ಸಿನ ಈ ನೀತಿಯ ವಿರುದ್ಧ ಬೆಳಗಾವಿಯಲ್ಲಿ ಕಾಂಗ್ರೆಸ್ ಮಹಾಧಿವೇಶನವನ್ನು ವಿರೋಧಿಸಿ ನಾಳೆ ಬೆಳಿಗ್ಗೆ 10.30ಕ್ಕೆ ಬೆಂಗಳೂರಿನ ಮಹಾತ್ಮ ಗಾಂಧಿ ಪ್ರತಿಮೆ ಮುಂದೆ ಧರಣಿ ನಡೆಸಲಿದ್ದೇವೆ. ವಿಧಾನಸಭೆ–ವಿಧಾನಪರಿಷತ್ತಿನ ಸದಸ್ಯರು ಇದರಲ್ಲಿ ಭಾಗವಹಿಸುವರು ಎಂದು ತಿಳಿಸಿದರು.

ಜಾಹೀರಾತಿಗಾಗಿ ಇಂದೇ ಸಂಪರ್ಕಿಸಿರಿ:9449732000

## ಅಂಬೇಡ್ಕರ್ ವಿರುದ್ಧ ಅಮಿತ ಶಾ ಹೇಳಿಕೆ ಖಂಡಿಸಿ 28 ರಂದು ವಿಜಯಪುರ ಬಂದ್



**ಮಲ್ಲಮ್ಮ ನುಡಿ ವಾರ್ತೆ**

ವಿಜಯಪುರ,ಡಿ.26:ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ರಾಜೀನಾಮೆಗೆ ಒತ್ತಾಯಿಸಿ ಅಹಿಂದ, ದಲಿತ ಸಂಘಟನೆಗಳ ಒಕ್ಕೂಟ ಹಾಗೂ ಡಾ.ಅಂಬೇಡ್ಕರ್ ವಿಚಾರವಾದಿಗಳ ಬಳಗದಿಂದ ಡಿ, 28ರಂದು ವಿಜಯಪುರ ಬಂದ್ ಗೆ ಕರೆ ನೀಡಲಾಗಿದೆ ಎಂದು ಮಾಜಿ ಶಾಸಕ ರಾಜು ಆಲಗೂರ ಹೇಳಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು,

ಅಂದು ಬೆಳಿಗ್ಗೆ 8ರಿಂದ ಸಂಜೆ 6ರವರೆಗೆ ಜಿಲ್ಲೆಯಾದ್ಯಂತ ಬಸ್, ಅಟೊ ಸೇರಿದಂತೆ ಸಾರಿಗೆ ಸಂಚಾರ ಸಂಪೂರ್ಣ ಬಂದ್ ಮಾಡಲಾಗುವುದು. ಇದಲ್ಲದೇ ಹೋಟೆಲ್, ಅಂಗಡಿ, ಮಳಿಗೆ, ಶಾಲಾ, ಕಾಲೇಜು, ಬ್ಯಾಂಕ್ ಕೂಡ ಬಂದ್ ಆಗಲಿವೆ ಎಂದರು.

ಬಿಜೆಪಿಯು ಅಂಬೇಡ್ಕರ್ ಬಗ್ಗೆ ಅಪಮಾನಕಾರಿ ಹೇಳಿಕೆ ನೀಡಿ, ಇದರ ಪ್ರತಿಕ್ರಿಯೆ ನೋಡಿಕೊಂಡು ಸಂವಿಧಾನ ಬದಲಾವಣೆ ಸಾಹಸಕ್ಕೆ ಕೈಹಾಕಲು ಚಿತಾವಣೆ ನಡೆಸಿದೆ. ಇದಕ್ಕೆ ನಾವು ಎಂದೂ ಅವಕಾಶ ಕೊಡುವುದಿಲ್ಲ ಎಂದರು.

ಇದು ಪಕ್ಷಾತೀತ ಬಂದ್ ಆಗಿದೆ. ವಿಜಯಪುರ ಬಂದ್‌ಗೆ ಜಿಲ್ಲೆಯ ಪ್ರತಿಯೊಬ್ಬರೂ ಸ್ವಯಂ ಪ್ರೇರಿತವಾಗಿ ಬೆಂಬಲ ಸೂಚಿಸುವ ಮೂಲಕ ಶಾಂತಿಯುತವಾಗಿ ಬಂದ್ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಸಿದ್ದೇಶ್ವರ ದೇವಸ್ಥಾನದಿಂದ ಆರಂಭವಾಗುವ ಬೃಹತ್ ಪ್ರತಿಭಟನಾ ರ್‍ಯಾಲಿ ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ, ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ ಸಮಾರೋಪಗೊಳ್ಳಲಿದೆ. 10 ಸಾವಿರ ಜನರು ಈ ರ್‍ಯಾಲಿಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

ಕೆಪಿಸಿಸಿ ಸದಸ್ಯ ಅಬ್ದುಲ್ ಹಮೀದ ಮುಶ್ರೀಫ್ ಮಾತನಾಡಿ, ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರಿಗೆ ಅಪಮಾನ ಮಾಡಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಕೂಡಲೇ ದೇಶದ ಕ್ಷಮೆಯಾಚಿಸಿ, ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು.

ಅಹಿಂದ ಮುಖಂಡ ಸೋಮನಾಥ ಕಳ್ಳಿಮನಿ, ಚಂದ್ರಶೇಖರ ಕೊಡಬಾಗಿ, ಎಂ.ಸಿ. ಮುಲ್ಲಾ ಮತ್ತಿತರರು ಮಾತನಾಡಿದರು.

ರಮೇಶ ಆಸಂಗಿ, ಬೀರಪ್ಪ ಜುಮನಾಳ, ಫಯಾಜ್ ಕಲಾದಗಿ, ನಾಗರಾಜ ಲಂಬು, ಸಿದ್ದು ರಾಯಣ್ಣವರ, ಶ್ರೀನಾಥ ಪೂಜಾರಿ, ಅನಿಲ ಹೊಸಮನಿ, ಮಹಾದೇವಿ ಗೋಕಾಕ, ಆರತಿ ಶಹಪೂರ, ಅಡಿವೆಪ್ಪ ಸಾಲಗಲ್, ಸಂಗಮೇಶ ಸಗರ, ಮಲ್ಲಿಕಾರ್ಜುನ ಬಟಗಿ, ಡಾ. ರವಿ ಬಿರಾದಾರ ಮತ್ತಿತರರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ಅಮಿತ್ ಶಾ ಹೇಳಿಕೆ ವಿರೋಧಿಸಿ ದಸಂಸದಿಂದ ಪ್ರತಿಭಟನೆ; ಅಮಿತ್ ಶಾ ಪ್ರತಿಕೃತಿ ದಹನ



**ಮಲ್ಲಮ್ಮ ನುಡಿ ವಾರ್ತೆ**

ಉಡುಪಿ: ಸಂಸತ್ತಿನಲ್ಲಿ ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಅಂಬೇಡ್ಕರ್ರರ ಕುರಿತು ಅವಹೇಳನಕಾರಿಯಾಗಿ ಮಾತನಾಡಿರುವ ಕೇಂದ್ರ ಸಚಿವ ಅಮಿತ್ ಶಾ ವಿರುದ್ಧ ದಲಿತ ಸಂಘರ್ಷ ಸಮಿತಿ (ರಿ) ಅಂಬೇಡ್ಕರ್ ವಾದದ ವತಿಯಿಂದ ಅಜ್ಜರಕಾಡಿನ ಹುತಾತ್ಮ ಸ್ಮಾರಕ ಬಳಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು.

ಈ ಸಂದರ್ಭದಲ್ಲಿ ಮಾತನಾಡಿದ ಸುಂದರ್ ಮಾಸ್ತರ್, ಅಂಬೇಡ್ಕರ್ ಹೆಸರು ಉಲ್ಲೇಖಿಸಿ ಅವಹೇಳನಕಾರಿ ಹೇಳಿಕೆ ನೀಡಿದ ಕಾರಣ ಅಮಿತ್ ಶಾ ವಿರುದ್ಧ ಪ್ರತಿಭಟನೆ ಹೊತ್ತಿ ಉರಿಯುತ್ತಿದೆ. 2014 ರಿಂದ ಕೇಂದ್ರದಲ್ಲಿ ಆಡಳಿತ ಹಿಡಿದಿರುವ ಬಿಜೆಪಿ, ಸಂವಿಧಾನ ಬದಲಾವಣೆಯ ಕುರಿತು ಮಾತನಾಡುತ್ತಿದೆ. ಅನಂತ್ ಕುಮಾರ್ ಹೆಗಡೆ ಆರಂಭದಲ್ಲಿ ಹೇಳಿಕೆ ನೀಡಿದನಂತರ ಒಬ್ಬೊಬ್ಬರು ಸಂಸದರಿಂದ ಅಂಬೇಡ್ಕರ್ ಅವರ ಕುರಿತು ಹಾಗೂ ಸಂವಿಧಾನದ ಆಶಯ ಧ್ವಂಸ ಮಾಡುವ ಹೇಳಿಕೆ ಬರುತ್ತಿದೆ. ಪೇಜಾವರ ಶ್ರೀ ನಮ್ಮನ್ನು ಗೌರವಿಸುವ ಸಂವಿಧಾನ ಬರಲಿ ಎಂಬ ಹೇಳಿಕೆ ನೀಡಿದ್ದರು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮನುವಾದಿಗಳ ದೇಶವನ್ನು ಆಳಲು ಆರಂಭಿಸಿ ಹತ್ತು ವರ್ಷ ಆಗಿದೆ. ಹಲವಾರು ಸಮಸ್ಯೆ ಇದ್ದರೂ ಬಹುತ್ವವನ್ನು ಒಳಗೊಳ್ಳುವ ಸಂವಿಧಾನ ಬದಲಾಯಿಸುವ ಮಾತು ಹೇಳುತ್ತಿದ್ದಾರೆ. ಆದರೆ ದಲಿತರ ಮೇಲೆ ನಡೆಯುತ್ತಿರುವ ಹಲ್ಲೆ ದೌರ್ಜನ್ಯದ ಕುರಿತು ಮಾತನಾಡುತ್ತಿಲ್ಲ. ಪ್ರಧಾನಿ ನರೇಂದ್ರ ಮೋದಿ ಕೂಡ ಪ್ರತಿಕ್ರಿಯಿಸುವುದಿಲ್ಲ. ಅವರಿಗೆ ಸಂವಿಧಾನ ಬದಲಾವಣೆ ಮಾತ್ರ ಮುಖ್ಯವಾಗಿದೆ. ಕೊಳಕು, ನೀಚ ಮನಸ್ಸಿನ ಗೃಹ ಮಂತ್ರಿಯಾದ ನಂತರ ಹಲವು ಘಟನೆ ನಡೆದಿದೆ. ಅವರು ಗೃಹ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಲಿ ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಮಂಜುನಾಥ್ ಗಿಳಿಯಾರ್, ಪ್ರೊ.ಫಣಿರಾಜ್ ಅವರು ಮಾತನಾಡಿದರು.

ನಂತರ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಪ್ರತಿಕೃತಿಯ ಮೆರವಣಿಗೆ ನಡೆಸಿ ದಹನ ಮಾಡಿ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಶ್ಯಾಮ್ರಾಜ್ ಬಿರ್ತಿ, ಸಂಜೀವ ಬಳ್ಕೂರು, ಮಂಜುನಾಥ್ ಬಾಳ್ಕುದ್ರು, ಇದ್ರಿಸ್ ಹೂಡೆ, ಶಿವನಂದ ಎಸ್, ಅಝೀಜ್ ಉದ್ಯಾವರ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಶಿವಲೀಲಾ ಬಂಡೆ ಅವರಿಗೆ ಬೀಳ್ಕೊಡುಗೆ ಸಮಾರಂಭ.



(ವರದಿ.ಡಿ.ಕೆ. ಪ್ರಹ್ಲಾದ.)

**ಮಲ್ಲಮ್ಮ ನುಡಿ ವಾರ್ತೆ,** ಬಸವಕಲ್ಯಾಣ : – ನಗರಸಭೆ ಮಲ್ಟಿ ಟಾಸ್ಕಿಂಗ್ ಆಫೀಸರ್ ಆಗಿ ಮೂರು ವರ್ಷಗಳ ಕಾಲ ಸೇವೆ ಸಲ್ಲಿಸಿದ ಶಿವಲೀಲಾ ಜಗದೀಶ್ ಬಂಡೆ ಅವರು ಬೀದರ್ ನಗರ ಸಭೆಗೆ ವರ್ಗಾವಣೆಯಾಗಿದ ಪ್ರಯುಕ್ತ ನಗರಸಭೆಯಲ್ಲಿ ಇತ್ತೀಚೆಗೆ ಬೀಳ್ಕೊಡುಗೆ ಸಮಾರಂಭ ಜರುಗಿತು. ಈ ವೇಳೆ

ನಗರಸಭೆ ಪೌರಾಯುಕ್ತ ರಾಜು ಡಿ ಬಣಕಾರ್ ಮಾತನಾಡಿ ಸರ್ಕಾರಿ ಅಧಿಕಾರಿಗಳ ಜೀವನದಲ್ಲಿ ವರ್ಗಾವಣೆ, ನಿವೃತ್ತಿ, ಒಂದು ಅನಿವಾರ್ಯ ಕಾಲಘಟ್ಟ. ಶಿವಲೀಲಾ ಜಗದೀಶ್ ಬಂಡೆ ಅವರು ನಗರದ ಬೀದಿ ಬದಿ ವ್ಯಾಪಾರಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಗುರುತಿಸಿ ಅವರ ಸಂಘ ರಚಿಸಲು ಮತ್ತು ಅವರಿಗೆ ಬ್ಯಾಂಕ್ ಮುಖಾಂತರ ಸಾಲ ತೆಗದುಕೊಳ್ಳಲು ಸಹಾಯ ಮಾಡಿದರು, ರಾಜ್ಯದಲ್ಲಿ ಅತಿ ಹೆಚ್ಚು ಬೀದಿ ಬದಿ ವ್ಯಾಪಾರಿಗಳನ್ನು ಗುರುತಿಸಿದ್ದರಿಂದ ನಗರ ಸಭೆಗೆ ಪಿಎಂ ಸ್ವ–ನಿಧಿ ಸಮ್ಮಾನ್ ಪ್ರಶಸ್ತಿ ಪ್ರಾಪ್ತಿಯಾಯಿತು, ಇದಲ್ಲದೆ ನಗರದ ಮಹಿಳಾ (ಎಸ್‌ಎಚ್ ಜಿ) ಗಳನ್ನು ಹೆಚ್ಚಿನ ಸಂಖ್ಯೆ ಯಲ್ಲಿ ರಚಿಸಿ ಅವುಗಳಿಗೆ ಬ್ಯಾಂಕ್ ಮುಖಾಂತರ ಸಾಲಗಳನ್ನು ಕೊಡಿಸಿ ವಿವಿಧ ರೀತಿ ಸ್ವ ಉದ್ಯೋಗ ಕೈ ಗೊಳ್ಳಲು ತರಬೇತಿಗಳನ್ನು ನಡೆಸಿಕೊಟ್ಟು ಸರ್ಕಾರದ ಯೋಜನೆಗಳು ಸಾರ್ವಜನಿಕರಿಗೆ ಮುಟ್ಟಿಸುವ ಪ್ರಾಮಾಣಿಕ ಪ್ರಯತ್ನ ಶಿವಲೀಲಾ ಬಂಡೆ ಅವರಿಂದ ಆಗಿದೆ ಎಂದರು. ಈ ಸಂದರ್ಭದಲ್ಲಿ ನಗರಸಭೆ ಅಧಿಕಾರಿಗಳಾದ ಶಿವಕುಮಾರ. ಮನೋಜ ಕಾಂಬಳೆ. ಸಿಆರ್ಪಿ ಜ್ಯೋತಿ, ರಾಣಿಮಾ, ಸರಸ್ವತಿ, ನಗರ ಸಭೆ ಶಿಬ್ಬಂದಿಗಳು ಪ್ರಮುಖರು ಪಾಲ್ಗೊಂಡಿದ್ದರು.

## ತಾಳಂಪಳ್ಳಿಯ ಫೌಂಡೇಶನ್ ವತಿಯಿಂದ ಆಯೋಜಿಸಿದ್ದ ನೈಟ್ ಕ್ರಿಕೆಟ್ ಟೂರ್ನಮೆಂಟ್.

(ವರದಿ.ಡಿ.ಕೆ. ಪ್ರಹ್ಲಾದ.)

**ಮಲ್ಲಮ್ಮ ನುಡಿ ವಾರ್ತೆ**



ಬಸವಕಲ್ಯಾಣ_:– ನಗರದ ಖಿಲ್ಲಾ ಗಲ್ಲಿಯ ಮೈದಾನದಲ್ಲಿ "ತಾಳಂಪಳ್ಳಿಫೌಂಡೇಶನ್"ವತಿಯಿಂದ ಆಯೋಜಿಸಿದ್ದ ನೈಟ್ ಕ್ರಿಕೆಟ್ ಟೂರ್ನಮೆಂಟ್ ನ ಅಂತಿಮ ಫೈನಲ್ ಪಂದ್ಯವನ್ನು ಕಾಂಗ್ರೆಸ್ ಮುಖಂಡರಾದ ಧನರಾಜ್ ತಾಳಂಪಳ್ಳಿ"ರವರು ಉದ್ಘಾಟಿಸಿದರು ಅಂತಿಮ ಕ್ರಿಕೆಟ್ ಪಂದ್ಯವು ಈಗಲ ಟೀಮ್ vs ARK ಟೀಮ್ ತಂಡಗಳ ಫೈನಲ್ ಪಂದ್ಯವನ್ನು ವೀಕ್ಷಿಸಿ ಫೈನಲ್ ವಿಜೇತ ಈಗಲ ಟೀಮ್ ತಂಡಕ್ಕೆ ಟ್ರೋಫಿ ಜೊತೆಗೆ ಇಪ್ಪತ್ತೊಂದು ಸಾವಿರ (21,000) ಬಹುಮಾನ ಹಾಗೂ ರನ್ನರ್ ಅಪ್ ಆದ ಂಖಏ ತಂಡಕ್ಕೆ ಟ್ರೋಫಿ ಜೊತೆಗೆ ಹನ್ನೊಂದು ಸಾವಿರ (11,000) ನಗದು ಬಹುಮಾನ ನೀಡಿ ಅಭಿನಂದಿಸಿದರು. ಈ ಸಂದರ್ಭದಲ್ಲಿ ಅಬ್ದುಲ್ ವಾಹಿದ್ ಅಬ್ದುಲ್, ಅಜೀಮ್, ಯಾಹಿಯಾ ಪಾಶ, ನೂರ್, ನಮ್ಮ ಕಾಂಗ್ರೆಸ್ ಪಕ್ಷದ ಮುಖಂಡರಾದ ಬಂಡೆಪ್ಪ ಮೇತ್ರೆ, ಸದಾನಂದ್ ಹಳ್ಳೆ, ಖಾಜಾ, ಸುರೇಶ ಹಿರನಾಗಾಂವ್, ಸೇರಿದಂತೆ ಅಪಾರ ಸಂಖ್ಯೆಯಲ್ಲಿ ಯುವಕರು ಭಾಗವಹಿಸಿದ್ದರು.

## ಪಿಕೆಪಿಎಸ್ ಚುನಾವಣೆ; ನಾಮಪತ್ರ ಸಲ್ಲಿಕೆ




(ರಾಜಕುಮಾರ ಆರ್.ಹಡಪದ)


**ಮಲ್ಲಮ್ಮ ನುಡಿ ವಾರ್ತೆ**

ಚಿಟಗುಪ್ಪ:–ಇಲ್ಲಿಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಚುನಾವಣೆ ಅಂಗವಾಗಿ ಗುರುವಾರ ಪಾಂಡುರಂಗ ಮನೋಹರರಾವ ಸಾಮಾನ್ಯ ಸ್ಥಾನಕ್ಕೆ 2 ಅರ್ಜಿ ಸಲ್ಲಿಸಿದ್ದಾರೆ, ಅಮೃತ ಶಿವಪ್ಪ ಎಸ್.ಟಿ., ಅಪ್ಪಣ್ಣ ವೀರಪ್ಪ ಸಾಮಾನ್ಯ, ಯಲ್ಲಪ್ಪ ಲಕ್ಷ್ಮಣ ಎಸ್.ಸಿ., ಮಡೇಪ್ಪಾ ನರಸಪ್ಪ, ಸಾಮಾನ್ಯ, ಶಾಂತಬಾಯಿ ವಿಶ್ವನಾಥ ಮಹಿಳೆ, ಜ್ಯೋತಿ ಹಣಮಂತ ಮಹಿಳೆ, ಇಸ್ಮಾಯಿಲ್ ಮೈನೋದ್ದಿನ ಸಾಮಾನ್ಯ ಸ್ಥಾನಕ್ಕೆ ಒಟ್ಟು 12 ಸ್ಥಾನಗಳ 9 ನಾಮಪತ್ರ ಅರ್ಜಿ ಸಲ್ಲಿಕೆ ಬಂದಿವೆ ಎಂದು ಚುನಾವಣಾಧಿಕಾರಿ ಕೆರೆಸಿದ್ದ ಮೋರಾಟಗಿ ತಿಳಿಸಿದ್ದಾರೆ.

## ಶಹಾಪುರಕ್ಕೆ ಜಾನಪದ ಲೋಕ/ಸಂಶೋಧನಾ ಕೇಂದ್ರ: ಸಚಿವ ದರ್ಶನಾಪುರ

**ಮಲ್ಲಮ್ಮ ನುಡಿ ವಾರ್ತೆ**

ಕಲಬುರಗಿ,ಡಿ.26–ಕಲ್ಯಾಣ ಕರ್ನಾಟಕ ಭಾಗದಲ್ಲಿ ಜಾನಪದ ಸಂಶೋಧನಾ ಕೇಂದ್ರ ಹಾಗೂ ಸ್ನಾತಕೋತ್ತರ ಕೇಂದ್ರ ಸ್ಥಾಪಿಸುವ ವಿಚಾರವಿದ್ದು, ಇದಕ್ಕಾಗಿ ಶಹಾಪುರ ತಾಲ್ಲೂಕಿನಲ್ಲಿ 10 ಎಕರೆ ಭೂಮಿ ಕೊಡಿಸುವುದಾಗಿ ಸಣ್ಣ ಕೈಗಾರಿಕೆ ಸಚಿವ ಶರಣಬಸಪ್ಪ ದರ್ಶನಾಪೂರ ತಿಳಿಸಿದ್ದಾರೆ.



ಈ ಸಂಬಂಧ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಕುಲಪತಿ ಡಾ.ಟಿ.ಎಂ.ಭಾಸ್ಕರ್ ಅವರೊಂದಿಗೆ ಅವರು ಚರ್ಚೆ ನಡೆಸಿದ್ದಾರೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಜಾನಪದ ಲೋಕ, ಸಂಶೋಧನಾ ಕೇಂದ್ರ ಆರಂಭಿಸುವುದರಿಂದ ಈ ಭಾಗದ ವಿದ್ಯಾರ್ಥಿಗಳಿಗೆ, ಜಾನಪದ ಕಲಾವಿದರಿಗೆ ಅನುಕೂಲವಾಗಲಿದೆ.

ಕರ್ನಾಟಕ ಜಾನಪದ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ನೀಡಿದ ಹಿನ್ನೆಲೆಯಲ್ಲಿ ಲೇಖಕ ಡಾ.ಸಿದ್ದರಾಮ ಹೊನ್ಕಲ್ ಅವರು ಜಾನಪದ ವಿಶ್ವವಿದ್ಯಾಲಯದ ಕುಲಪತಿ ಡಾ.ಟಿ.ಎಂ.ಭಾಸ್ಕರ್ ಅವರಿಗೆ ಶಾಲು ಹೊದಿಸಿ ಸನ್ಮಾನಿಸಿ ಗೌರವಿಸಿದರು. ಕನ್ನಡ ಪುಸ್ತಕ ಪ್ರಾಧಿಕಾರದ ಸದಸ್ಯ ಬಿ.ಹೆಚ್.ನಿರಗುಡಿ ಉಪಸ್ಥಿತರಿದ್ದರು.

## ಉದ್ಯೋಗ,ಮತ್ತು ಶಿಕ್ಷಣದಲ್ಲಿ ಮಾತ್ರ ಬೆಳವಣೆಗೆ ಕೈಗಾರಿಕಾ ಕ್ಷೇತ್ರದಲ್ಲಿ ಬದಲಾವಣೆ ಕಾಣಬೇಕು:ಅಧ್ಯಕ್ಷ ಶಶಿಕಾಂತ್ ಜಿ. ಪಾಟೀಲ್




ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಡಿ.26-ಜಿಲ್ಲೆಯಾದ್ಯಂತ ಉದ್ಯೋಗ ಮತ್ತು ಶಿಕ್ಷಣದಲ್ಲಿ ಮಾತ್ರ ಬೆಳವಣೆಯಾಗುತ್ತಿದ್ದು,ಕೈಗಾರಿಕಾ ಕ್ಷೇತ್ರದಲ್ಲಿ ಬದಲಾವಣೆಯನ್ನು ಕಾಣುತ್ತಿಲ್ಲ ಪ್ರತ್ಯೇಕ ಕಲ್ಯಾಣ ಕರ್ನಾಟಕ ಕೈಗಾರಿಕಾ ನೀತಿಯನ್ನು ಜಾರಿಗೊಳಿಸಬೇಕು ಎಂದು ಕಲ್ಯಾಣ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷರಾದ ಶಶಿಕಾಂತ್ ಜಿ. ಪಾಟೀಲ್ ಅವರು ಹೇಳಿದರು.

ಸೋಮವಾರದಂದು ಕಲ್ಯಾಣ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕೆ ಸಂಸ್ಥೆಯ ಸಭಾಂಗಣದಲ್ಲಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಕರ್ನಾಟಕ ಸರ್ಕಾರ, ಜಿಲ್ಲಾ ಕೈಗಾರಿಕಾ ಕೇಂದ್ರ ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನಾ ಕೇಂದ್ರ (ವಿ.ಟಿ.ಪಿ.ಸಿ) ಹಾಗೂ ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ ಸಹಯೋಗದಲ್ಲಿ"ಎಂ.ಎಸ್.ಎಂ.ಇ.ಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸುವುದು ಮತ್ತು ವೇಗಗೊಳಿಸುವುದು" (ಆರ್‌ಎಎಂಪಿ)ಯೋಜನೆಯಡಿಯಲ್ಲಿ ಲೀನ್ ಯೋಜನೆ ಮತ್ತು ಝಡ್.ಇ.ಡಿ. ಹಾಗೂ ರಫ್ತು ಕುರಿತು ಒಂದು ದಿನದ ಅರಿವು ಮೂಡಿಸುವ ಕಾರ್ಯಕ್ರಮಕ್ಕೆ ಉದ್ಘಾಟಿಸಿ ಮಾತನಾಡಿದರು.

ಪಿ.ಎಂ. ಮಿತ್ರ ಅಡಿಯಲ್ಲಿ ಟೇಕ್ಸಟೈಲ್ ಪಾರ್ಕ ಸ್ಥಾಪಿಸಬೇಕಾಗಿತ್ತು. ಒಂದೂವರೆಗೆ ವರ್ಷ ಅಯಿತ್ತು ರಾಜ್ಯ ಸರ್ಕಾರದಿಂದ ಅಭಿವೃದ್ಧಿ ಕಾಣುತ್ತಿಲ್ಲ ಕೈಗಾರಿಕಾ ಜಾಗೃತಿ ಕಾರ್ಯಕ್ರಮಗಳು ಮಾಡಿದರೆ ಸಾಲದು ಎಂದರು.

ಮುಂದಿನ ನಮ್ಮ ಕೈಗಾರಿಕೆ ವಲಯದಲ್ಲಿ ಆಗಲಿ ವಾಣಿಜ್ಯ ವಲಯದಲ್ಲಿ ಒತ್ತನ್ನ ಕೊಡಬೇಕು ಯಾವ ರೀತಿ ದೇಶಕ್ಕೆ ರೈತರು ಬೆಳವಣೆಯಾಗುತ್ತಾರೆ ಅದೇ ರೀತಿಯಾಗಿ ಕೈಗಾರಿಕಾ ಕ್ಷೇತ್ರದಲ್ಲಿ ಬೆಳೆವಣಿಯಾಗಬೇಕು ಎಂದು ಅವರು ಹೇಳಿದರು.

ಜಿಲ್ಲಾ ಕೈಗಾರಿಕಾ ಕೇಂದ್ರ ಜಂಟಿ ನಿರ್ದೇಶಕ ಸುರೇಖಾ ಮುನೋಳ್ಳಿ ಮಾತನಾಡಿ,ಕಲಬುರಗಿ ಜಿಲ್ಲೆಯಿಂದ ಸ್ಥಳೀಯ ತಯಾರಿಸಿದ ವಸ್ತುಗಳನ್ನು ಮತ್ತು ಸ್ಥಳೀಯವಾಗಿ ಬೆಳೆಯುವ ಉತ್ಪಾದನೆಗಳು ರಫ್ತು ಮಾಡಲು ಮತ್ತು ಅದನ್ನು ಹೆಚ್ಚಿನ ಪ್ರಮಾಣದಲ್ಲಿ ರಫ್ತು ಮಾಡಲು ಹೆಚ್ಚಿಸುವ ನಿಟ್ಟಿನಲ್ಲಿ ಇಲಾಖೆ ಕೈಗಾರಿಕೆ ಉದ್ದಿಮೆದಾರರು ಶ್ರಮಿಸಬೇಕಾಗುತ್ತದೆ ಎಂದರು.

ಕಲಬುರಗಿ ಶಾಖಾ ಕಛೇರಿ ವಿ.ಟಿ.ಪಿ.ಸಿ. ಸಹಾಯಕ ನಿರ್ದೇಶಕ ಜಾಫರ್ ಖಾಸಿಂ ಅನ್ಸಾರಿ ಅವರು ಮಾತನಾಡಿ, ವಿಟಿಪಿಸಿಯ ಶಾಖಾ ಕಛೇರಿಯನ್ನು ಸರ್ಕಾರವು ಸ್ಥಾಪಿಸು ತ್ತಿದೆ, ಇತ್ತೀಚೆಗೆ ಕಲ್ಯಾಣ ಕರ್ನಾಟಕ ಕಂದಾಯ ಭಾಗದ ಶಾಖಾ ಕಛೇರಿಯ ಕಲಬುರಗಿಯಲ್ಲಿ ಪ್ರಾರಂಭಿಸಿದೆ ಈ ಭಾಗದ ಜನರಿಗೆ ವಿಶೇಷವಾಗಿ ರಫ್ತುದಾರರಿಗೆ ಸಹಾಯವಾಗಲಿದೆ ಎಂದು ಹೇಳಿದರು.

ಕೈಗಾರಿಕಾ ಉಪನಿರ್ದೇಶಕ ಅಬ್ದುಲ್ ಅಜೀಮ್ ಜಿಲ್ಲಾ ಕೈಗಾರಿಕಾ ಕೇಂದ್ರ ಇವರ ಆರ್‌ಎಎಂಪಿ ಯೋಜನೆ ಬಗ್ಗೆ ವಿವರಿಸಿದರು.

ಅಧ್ಯಕ್ಷತೆಯನ್ನು ಕಾಸಿಯಾ ಅಧ್ಯಕ್ಷರಾದ ಎಂ.ಜಿ. ರಾಜಗೋಪಾಲ್ ವಹಿಸಿ ಎಂ.ಎಸ್.ಎಂ.ಇ. ಕೈಗಾರಿಕೆಗಳು ತಮ್ಮ ಲಾಭವನ್ನು ಹೆಚ್ಚಿಸಲು ರಫ್ತುಗಳು ರಫ್ತುಗೆ ಒತ್ತು ನೀಡಬೇಕೆಂದು ಪ್ರಾಸ್ತಾವಿಕವಾಗಿ ಮಾತನಾಡಿದರು.

ಲೀನ್ ಯೋಜನೆ ಬಗ್ಗೆ ಡಾ ಜಗದೀಶ ಅವರು ವಿಶೇಷ ಉಪನ್ಯಾಸ ನೀಡಿದರು. ಝಡ್.ಇ.ಡಿ, ಬಗ್ಗೆ ಈರಪ್ಪಾ ಉಪನ್ಯಾಸ ನೀಡಿದರು. ರಫ್ತು ಬಗ್ಗೆ ಸತೀಶ ಕೋಟಾ ಅವರು ಉಪನ್ಯಾಸ ನೀಡಿದರು.

ಈ ಕಾರ್ಯಾಗಾರದಲ್ಲಿ ಗೌರವ ಪ್ರಧಾನ ಸುರೇಶ ಎನ್ ಸಾಗರ್, ಕಲಬುರಗಿ ಗ್ರಾಮೀಣ ಜಂಟಿಕಾರ್ಯದರ್ಶಿ ಸತೀಶ್ ಎನ್., ಜಿಲ್ಲಾಭಿವೃದ್ಧಿ ಸಮಿತಿ ಉಪಸಮಿತಿ ಅಧ್ಯಕ್ಷ ಚನ್ನಬಸ್ಸಯ್ಯ ಜಿ. ನಂದಿಕೋಲ್ ಸೇರಿದಂತೆ ಕಲ್ಯಾಣ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕ ಸಂಸ್ಥೆ, ಸಣ್ಣ ಕೈಗಾರಿಕೆಗಳ ಮಾಲೀಕರ ಸಂಘ ಗುಲಬರ್ಗ ದಾಲಾ ಮಿಲ್ಲರ್ಸ್, ಅಸೋಸಿಯೇಷನ್, ಗುಲಬರ್ಗ ಇಂಡಿಸ್ಟ್ರೀಯಲ್ ಎಸ್ಟೇಟ್ ಮ್ಯಾನುಫ್ಯಾಕ್ಚರ್ಸ್, ಅಸೋಸಿಯೇಷನ್, ಗುಲಬರ್ಗ ಕೈಗಾರಿಕಾ ವಸಾಹತು ಮಾಲೀಕರ ಸಂಘ, ಕಲಬುರಗಿ ಲೇಡಿಸ್ ಅಸೋಸಿಯೇಷನ್ ಮ್ಯಾನುಫ್ಯಾಕ್ಚರ್ಸ್ ಮ್ಯಾನುಫ್ಯಾಕ್ಚರ್ಸ ಪಾರ್ಕ್‌ದಲ್ಲಿ ಭಾಗವಹಿಸಿದ್ದರು.

## ಆಹಾರ ಉತ್ಪಾದನೆ ರೈತನ ಕೊಡುಗೆ



ಮಲ್ಲಮ್ಮ ನುಡಿ ವಾರ್ತೆ

ಬೀದರ:ದೇಶಕೃಷಿಪ್ರಧಾನವಾಗಿದ್ದು, ರಾಷ್ಟ್ರದ ಅಭಿವೃದ್ಧಿ ಜೊತೆಗೆ ಆಹಾರ ಉತ್ಪಾದನೆ ರೈತನ ಬಹು ದೊಡ್ಡ ಕೊಡುಗೆ. ರೈತ ಮುನಿದರೆ ಜೀವನವೆ ಸಂಕಷ್ಟ ಎಂದು ಪ್ರೊ. ಕೆ.ಸಿ.ವೀರಣ್ಣ ನುಡಿದರು.

ವಚನ ಚಾರಿಟೇಬಲ್ ಸೊಸೈಟಿವತಿಯಿಂದ ಪೋಲಾ ಕನ್‌ವೆನ್ಷನ್ ಹಾಲ್‌ನಲ್ಲಿ ರೈತ ದಿನಾಚರಣೆ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿದ ಕರ್ನಾಟಕ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ.ಕೆ.ಸಿ.ವೀರಣ್ಣ ಮಾತನಾಡುತ್ತ ರೈತನ ಸ್ಥಿತಿಗೆ ಮರಗುವದಕ್ಕಿಂತ ಸಹಕರಿಸುವ ಮನೋಭಾವನೆ ಬೆಳೆಯಬೇಕು. ಪರಿಸರ ವೈಪರಿತ್ಯ, ಕೂಲಿಕಾರರ ಸಮಸ್ಯೆ, ಹಣಕಾಸಿನ ಸಂಕಷ್ಟ ಕೊನೆಗೆ ಬೆಳೆದ ಬೆಳೆಗೆ ಬೆಂಬಲ ಬೆಲೆಯಿಲ್ಲದೆ ನರಳಾಡುವ ಪರಸ್ಥಿತಿ ಬಂದೊದಗಿದೆ.

ರೈತನಬಗ್ಗೆ ಸಾವಿರಾರು ದಿಸೆಯಲ್ಲಿ ಚರ್ಚೆಯಾದರು ಅನುಷ್ಠಾನ ಮಾತ್ರ ಕಗ್ಗಂಟಾಗುತ್ತಿರುವುದು ನೋವಿನ ಸಂಗತಿ. ರೈತರು ಉದ್ಯಮಿಗಳಾಗಿ ಕೌಶಲ್ಯ ಕಲಿಯಬೇಕು. ಇದು ಕೃಷಿ ಸುಸ್ಥಿರ ಜೊತೆಗೆ ಗುಣಮಟ್ಟ ಹೊರಹೊಮ್ಮಲು ಸಾಧ್ಯ. ಸಮಸ್ಯೆಗಳು ಸಹಜ, ಕೈಕಟ್ಟಿ ಕುಳಿತರೆ ಸಂಕಷ್ಟ ತಪ್ಪಿದಲ್ಲ. ತಂತ್ರಜ್ಞಾನ ನಮೊಂದಿಗಿದೆ, ವೈಜ್ಞಾನಿಕ ತಳಹದಿ ಅನಿವಾರ್ಯವಾಗಿ ಬೆಳೆಸಿಕೊಂಡು ಮುನ್ನಡೆದರೆ ರೈತರ ಜೀವನ ಬಂಗಾರವಾಗುವುದರಲ್ಲಿ ಸಂದೇಹವಿಲ್ಲವೆಂದು ನುಡಿದರು.

ಕಾರ್ಯಕ್ರಮದ ಸಾನಿಧ್ಯ ವಹಿಸಿರುವ ಹಿರೇಮಠ ತಡೋಳದ ಮೇಹಕರನ ಪೂಜ್ಯ ಶ್ರೀ ಷ.ಬ್ರ. ರಾಜೇಶ್ವರ ಶಿವಾಚಾರ್ಯ ಸ್ವಾಮಿಗಳು ಆಶೀರ್ವಚನ ನೀಡುತ್ತ ನೆಲದ ಸೇವಕನಿಗೆ ನಿರ್ಲಕ್ಷವಾಗುತ್ತಿದೆ. ರೈತನಿಗೆ ನೋಡುವುದಕ್ಕಿಂತ ಬೆಳೆಗಳ ಅಭಿವೃದ್ಧಿಗೆ ಸಹಕರಿಸಬೇಕು. ರೈತನ ಜೊತೆಗೆ ಬಾಂಧವ್ಯ ಬೆಳೆಸಿಕೊಂಡು ಸಹಭಾಗಿತ್ವರಾಗಿರಬೇಕು. ಇಂದು ಪುನಃ ದೇಶ ದಾಸ್ಯದ ಸಂಕೇತಕ್ಕೆ ಒಳಗಾಗುತ್ತಿದೆ ಎಂಬ ಭಾಸ ಕಾಣುತ್ತಿದೆ. ಸಜ್ಜನರು ಇಂದು ಮೂಕ ವಿಸ್ಮತರಾಗುತ್ತಿರುವುದು ದುರಂತವೇ ಸರಿ.

ಎಲ್ಲೆಡೆ ವಿಷಯುಕ್ತ ಆಹಾರದಿಂದಾಗಿ ವಿಚಿತ್ರರೋಗಗಳು ಉಲ್ಬಣಗೊಳ್ಳುತ್ತಿವೆ. ಅದನ್ನು ತಹಬದಿಗೆ ತರುವವರಾರು?. ವ್ಯಕ್ತಿ ಸಧೃಡವಾಗಲು ಸಾವಯವ ಕೃಷಿ ಬೆಳೆ ಅನಿವಾರ್ಯ. ಇದು ಇಲ್ಲದಿದ್ದರೆ ಕೆಲವೆ ವರ್ಷಗಳಲ್ಲಿ ನಮ್ಮ ದೇಹದ ಎಲುಬುಗಳು ಪುಡಿ ಪುಡಿಯಾಗಿ ಉದುರಿ ಹೋಗಬಹುದಾಗಿವೆ. ಇಂದು ಹಿಂದೆಂದಿಗಿಂತಲು ಪ್ರತಿಯೊಬ್ಬರಲ್ಲಿ ಎಲುಬು ರೋಗಗಳು ಕಾಣಿಸಿ ಕೊಳ್ಳುತ್ತಿವೆ. ನಮ್ಮ ಅಡುಗೆ ಮನೆ ಔಷಧ ಅಂಗಡಿಯಂತಿದೆ. ಇದರ ಪರಿ ಕಲ್ಪನೆಯಿಲ್ಲದೆ ಅಂಗಡಿ ಔಷಧ ತಿಂದು ಬದುಕುತ್ತಿರುವುದು ವಿಪರ್ಯಾಸದ ಸಂಗತಿ. ಎಲ್ಲರು ಕನಿಷ್ಠ ಸಿರಿ ಧಾನ್ಯ ಬಳಕೆ ಮಾಡಿಕೊಂಡರೆ ತಕ್ಕ ಮಟ್ಟಿಗೆ ಆರೋಗ್ಯ ಸುಧಾರಣೆ-ಯಾಗುತ್ತದೆಂದು ತಮ್ಮ ಅನುಭವ ಹಂಚಿಕೊಂಡರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಸಂಘದ ಅಧ್ಯಕ್ಷರಾದ ಡಾ. ಸುರೇಶ ಪಾಟೀಲ ಮಾತನಾಡಿ ಸಮಾನ ಮನಸ್ಸುಳ್ಳ ಮಿತ್ರರು ಸೇರಿ ಸಾಮಾಜಿಕ ಕೆಲಸ ಮಾಡಲಾಗುತ್ತಿದೆ. ಜಿಲ್ಲೆಯ ಅನೇಕ ಪ್ರತಿಭಾವಂತ ಹಾಗೂ ಪ್ರಗತಿ ಪರ ರೈತರನ್ನು ಗೌರವಿಸಿ ಅವರ ಕ್ಷಮತೆಗೆ ಪ್ರೋತ್ಸಾಹ ಮಾಡಿ ಉಳಿದವರಿಗೆ ಮಾದರಿಯಾಗಲು ಇಂತಹ ಕಾರ್ಯಕ್ರಮ ಹಮ್ಮಿಕೊಳಲಾಗುತ್ತಿದೆ.

ಬಸವಕಲ್ಯಾಣ ಪ್ರಗತಿಪರ ರೈತರಾದ ನಾಮದೇವ ಗೊಗ್ಗ, ಸಂತಪುರ ಪ್ರಗತಿ ಪರ ರೈತರು ಹಾಗೂ ಮಾಜಿ ಸೈನಿಕರಾದ ಬಾಪುರಾವ ಪಾಟೀಲ ಹಾಗೂ ಮಿರ್ಜಾಪುರ ಯುವ ರೈತೆ ರಾಧಿಕಾ ಹಣಮಂತ ಇವರನ್ನು ಒಕಲಿಗ ಮುದ್ದಣ್ಣ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪ್ರೊ.ಸಿ.ಆರ್. ಕೊಂಡ, ಹಾಗೂ ಸಿರಿ ಧಾನ್ಯ ವಿತರಕರಾದ ಸಂಗಪ್ಪ ನಾವದಗೇರೆ, ಸತ್ಯವಾನ ಪಾಟೀಲ ಕಂದಗೂಳ ಉಪಸ್ಥಿತರಿದ್ದರು. ಪ್ರೊ. ಶೀಲವಂತ ನಾವದಗೇರೆ ಪ್ರಾಸ್ತಾವಿಕವಾಗಿ ಮಾತನಾಡಿದರು. ವೈಜಿನಾಥ ಸಜ್ಜನಶೆಟ್ಟಿ ರೈತ ಗೀತೆ ಪ್ರಸ್ತುತ ಪಡಿಸಿದರೆ, ಸಂಜುಕುಮಾರ ಬಿರಾದಾರ ಚಿಲ್ಲರ್ಗೆ ಸ್ವಾಗತಿಸಿದ ಕಾರ್ಯಕ್ರಮ ಡಾ. ಚನ್ನಪ್ಪ ಗೌಡ ಬಿರಾದಾರ ನಿರೂಪಣೆಯೊಂದಿಗೆ ವೀರಪ್ಪ ಜಿರಗೆ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಕೊನೆಗೊಂಡಿತು. ಇದೆ ಸಂದರ್ಭದಲ್ಲಿ ಹಿರಿಯ ಚಿತ್ರಕಲಾ ಶಿಕ್ಷಕರಾದ ಚ.ಭಿ. ಸೋಮಶೆಟ್ಟಿ ಅವರಿಗೆ ವಿಶೇಷ ಸತ್ಕಾರ ಮಾಡಲಾಯಿತು.

## ಜೋಗೊರನಲ್ಲಿ ಶ್ರೀ ಮಹಾಲಕ್ಷ್ಮೀ ಜಾತ್ರಾ ಮಹೋತ್ಸವ




ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ, ಸುಕ್ಷೇತ್ರ ಜೊಗೋರನಲ್ಲಿ ಪ್ರತಿ ವರ್ಷದಂತೆ ಈ ವರ್ಷವು ಶ್ರೀ ಮಹಾಲಕ್ಷ್ಮೀ ಜಾತ್ರಾ ಮಹೋತ್ಸ ವವು ಅತಿ ವಿಜ್ರಂಭಣೆಯಿಂದ ಆಚರಣೆ ಮಾಡಲಾಗುತ್ತಿದೆ ಎಂದು ಸಮಿತಿಯವರು ತಿಳಿಸಿದ್ದಾರೆ. ಗುರುವಾರ ರಾತ್ರಿ ದೇವಿಯ ಮೂಲ ಸ್ಥಳದಿಂದ ವಾದ್ಯ ಸಂಗೀತ ದೊಂದಿಗೆ ಭವ್ಯ ಮೇರವಣಿಗೆ ನಡೆಸಲಾಗುವುದು. ಶುಕ್ರವಾರ ಮುಂಜಾನೆಯಿಂದ ಸಾಯಂಕಾಲದವರೆಗೆ ಗ್ರಾಮದ ಹಾಗೂ ಪರಸ್ಥಳದಿಂದ ಬಂದ ಭಕ್ತಾದಿಗಳು ಸೀರೆ ಉಡಿಸಿ ಉಡಿ ತುಂಬುವರು. ಧೀರ್ಗ ದಂಡ ನಮಸ್ಕಾರ ಗಳು ನಡೆಯುತ್ತವೆ. ಅದೇ ದಿನ ರಾತ್ರಿ 9 ಗಂಟೆಯಿಂದ ಬೆಳಗ್ಗೆ ಜೊಗೊರ ಗ್ರಾಮದ ಲ್ಲಿ ಸಂಗಿತ,ನ್ರತ್ಯ ನಡೆಸಲಾಗುವುದು. ಶನಿವಾರ ಬೆಳಗ್ಗೆ ಗ್ರಾಮದ ಹಿರೇಮಠದಿಂದ ಪಲ್ಲಕ್ಕಿಯೊಂದಿಗೆ ತೆರಳಿ ಶ್ರೀ ವೀರಭದ್ರೇಶ್ವರ ದೇವಸ್ಥಾನದ ಕ್ಕೆ ತಲಪುತ್ತದೆ. ಹಾಗಾಗಿ ಸಕಲ ಭಕ್ತಾದಿಗಳು ತಾಯಿಯ ಆಶೀರ್ವಾದ ಪಡೆದು ಪುನಿತರಾಗಬೇಕೆಂದು ಜಾತ್ರಾ ಉತ್ಸವ ಸಮಿತಿಯವರು ಮನವಿ ಮಾಡಿದ್ದಾರೆ.

## ಶಿಷ್ಯವೇತನಕ್ಕಾಗಿ ಮಾಜಿ ಸೈನಿಕರ ಮಕ್ಕಳಿಂದ ಅರ್ಜಿ ಸಲ್ಲಿಕೆ ಕೊನೆಯ ದಿನಾಂಕ ವಿಸ್ತರಣೆ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಡಿ.26-ಪ್ರಸಕ್ತ 2024-25ನೇ ಸಾಲಿಗೆ ಪ್ರಧಾನಮಂತ್ರಿ ಶಿಷ್ಯವೇತನ ಯೋಜನೆಯಡಿ ಭಾರತೀಯ ಸೇನೆಯ ಜೆ.ಸಿ.ಓ. ರ‍್ಯಾಂಕವರೆಗಿನ ಅಥವಾ ವಾಯು ಸೇನೆ, ನೌಕಾ ಸೇನೆಯ ತತ್ಸಮಾನ ರ‍್ಯಾಂಕವರೆಗಿನ ಮಾಜಿ ಸೈನಿಕರ ಮಕ್ಕಳು, ದ್ವಿತೀಯ ಪಿ.ಯು.ಸಿಯಲ್ಲಿ ಶೇ. 60 ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದು, ವೃತ್ತಿಪರ ಶಿಕ್ಷಣದಲ್ಲಿ ಪದವಿ ವ್ಯಾಸಂಗಕ್ಕಾಗಿ 2024-25ನೇ ಸಾಲಿನಲ್ಲಿ ಪ್ರವೇಶಾತಿ ಪಡೆದವರಿಂದ ಶಿಷ್ಯವೇತನಕ್ಕಾಗಿ ಅರ್ಜಿ ಸಲ್ಲಿಕೆ ಕೊನೆಯ ದಿನಾಂಕವನ್ನು 2025ರ ಜನವರಿ 3 ರವರೆಗೆ ವಿಸ್ತರಿಸಲಾಗಿದೆ.

ಅದರೆ ಕೆಲವು ಪ್ರವೇಶಾತಿ ವಿಳಂಬವಾಗಿರುವುದರಿಂದ ಕೋರಿಕೆಯ ಮೇರೆಗೆ ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕವನ್ನು 2024ರ ಡಿಸೆಂಬರ್ 30 ರಿಂದ 2025ರ ಜನವರಿ 3 ರವರೆಗೆ ಒಂದು ಬಾರಿ ಮಾತ್ರ ವಿಸ್ತರಿಸಲಾಗಿದೆ. ಅರ್ಹ ಮಾಜಿ ಸೈನಿಕರ ಮಕ್ಕಳು ಕೇಂದ್ರೀಯ ಸೈನಿಕ ಮಂಡಳಿಯ ಃಣಣಠಿ:// ಠಿಟಿಚಿಟಿಜ.ಞಛ.ಡಿಠಿ.ಟಿ ವೆಬ್‌ಸೈಟ್‌ದಲ್ಲಿ ಮೇಲ್ಕಂಡ ಕೊನೆಯ ದಿನಾಂಕದೊಳಗಾಗಿ ಅರ್ಜಿ ಸಲ್ಲಿಸಬೇಕು. ಕೊನೆಯ ದಿನಾಂಕದ ನಂತರ ಯಾವುದೇ ದಿನಾಂಕ ವಿಸ್ತರಣೆ ಮಾಡಲಾಗುವುದಿಲ್ಲ. ಈ ಹಿಂದೆ ಅರ್ಜಿ ಸಲ್ಲಿಕೆ ಕೊನೆಯ ದಿನಾಂಕವನ್ನು 2024ರ ನವೆಂಬರ್ 30 ರಂದು ನಿಗದಿಪಡಿಸಲಾಗಿತ್ತು.

ಹೆಚ್ಚಿನ ಮಾಹಿತಿಗಾಗಿ ಕೇಂದ್ರೀಯ ಸೈನಿಕ ಮಂಡಳಿಯ ಃಣಣಠಿ:// ಠಿಟಿಚಿಟಿಜ.ಞಛ.ಡಿಠಿ.ಟಿ ವೆಬ್‌ಸೈಟ್‌ನ್ನು ಅಥವಾ ಕಲಬುರಗಿ ಸೈನಿಕ ಕಲ್ಯಾಣ ಮತ್ತು ಪುರ್ನವಸತಿ ಇಲಾಖೆ ಉಪನಿರ್ದೇಶಕರ ಕಚೇರಿಯನ್ನು ಹಾಗೂ ಕಚೇರಿ ದೂರವಾಣಿ ಸಂಖ್ಯೆ 08472-225003 ಗೆ ಕಚೇರಿ ವೇಳೆಯಲ್ಲಿ ಸಂಪರ್ಕಿಸಬೇಕೆಂದು ಕಲಬುರಗಿ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

## ಸೇಡಂ: ಫಲಾನುಭವಿಗಳ ತಾತ್ಕಾಲಿಕ ಪಟ್ಟಿ ಪ್ರಕಟ: ಆಕ್ಷೇಪಣೆ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಡಿ.26-ಸೇಡಂ ಪುರಸಭೆ ವತಿಯಿಂದ 2024-25ನೇ ಸಾಲಿನ ಎಸ್.ಎಫ್.ಸಿ. ಯೋಜನೆ ಶೇ.7.25 ರ ಅನುದಾನದಲ್ಲಿ ಇತರೆ ಹಿಂದುಳಿದ ವರ್ಗದವರಿಗೆ ಪಿ.ಜಿ. ಓದುತ್ತಿರುವ ವಿದ್ಯಾರ್ಥಿಗಳಿಗೆ ಸಹಾಯಧನ ನೀಡಲು ಹಾಗೂ 2023-24 ಮತ್ತು 2024-25ನೇ ಸಾಲಿನ ಶೇ.5ರ ಅನುದಾನದಲ್ಲಿ ಅಂಗವಿಕಲರಿಗೆ ತ್ರೀಚಕ್ರ ಮೋಟಾರು ವಾಹನ ನೀಡಲು ಫಲಾನುಭವಿಗಳನ್ನು ತಾತ್ಕಾಲಿಕ ಆಯ್ಕೆ ಮಾಡಿ, ಆಯ್ಕೆ ಮಾಡಲಾದ ಫಲಾನುಭವಿಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಸೇಡಂ ಪುರಸಭೆಯ ಕಾರ್ಯಾಲಯದ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ ಎಂದು ಸೇಡಂ ಪುರಸಭೆಯ ಮುಖ್ಯಾಧಿಕಾರಿಗಳು ತಿಳಿಸಿದ್ದಾರೆ.

ಈ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಲಿಖಿತವಾಗಿ ಪೂರಕ ದಾಖಲೆಗಳೊಂದಿಗೆ ಸೇಡಂ ಪುರಸಭೆ ಕಚೇರಿಯಲ್ಲಿ 2025ರ ಜನವರಿ 4 ರೊಳಗಾಗಿ ಆಕ್ಷೇಪಣೆ ಸಲ್ಲಿಸಬೇಕು. ಕೊನೆಯ ದಿನಾಂಕದ ನಂತರ ಬಂದ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಅವರು ತಿಳಿಸಿದ್ದಾರೆ.

### ಕೆ.ಆರ್.ಐ.ಡಿ.ಎಲ್. ಕಲಬುರಗಿ ವಿಭಾಗ-2ರ

## ಕಾರ್ಯಪಾಲಕ ಅಭಿಯಂತರರಾಗಿ ರಾಹುಲ್ ಅಧಿಕಾರ ಸ್ವೀಕಾರ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಡಿ.26-ಕಲಬುರಗಿ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತ (ಕೆ.ಆರ್.ಐ.ಡಿ.ಎಲ್.) ಕಲಬುರಗಿ ವಿಭಾಗ-2ರ ಕಚೇರಿಯ ಕಾರ್ಯಪಾಲಕ ಅಭಿಯಂತರರಾಗಿ ರಾಹುಲ್ ಅವರು 2024ರ ಡಿಸೆಂಬರ್ 16 ರಂದು ಅಧಿಕಾರ ವಹಿಸಿಕೊಂಡಿರುತ್ತಾರೆ. ಈ ಉಪವಿಭಾಗ-02ರ ವ್ಯಾಪ್ತಿಗೆ ಕಲಬುರಗಿ ಉಪವಿಭಾಗ-2ರ ಸಹಾಯಕ ಕಾರ್ಯಪಾಲಕ ಅಭಿಯಂತರರು ಬರಲಿದ್ದು, ಇವರ ವ್ಯಾಪ್ತಿಗೆ ಆಳಂದ, ಅಫಜಲಪುರ ಮತ್ತು ಚಿಂಚೋಳಿ ಮತಕ್ಷೇತ್ರಗಳು ಬರಲಿವೆ. ಅದೇ ರೀತಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಸೇಡಂ ಉಪವಿಭಾಗಕ್ಕೆ ಸೇಡಂ ಮತ್ತು ಗುಲಬರ್ಗಾ ಗ್ರಾಮೀಣ ಮತಕ್ಷೇತ್ರಗಳು ಬರಲಿವೆ ಎಂದು ಕಲಬುರಗಿ ಕೆ.ಆರ್.ಐ.ಡಿ.ಎಲ್. ಕಲಬುರಗಿ ಉಪವಿಭಾಗದ-02ರ ಕಾರ್ಯಪಾಲಕ ಅಭಿಯಂತರರು ತಿಳಿಸಿದ್ದಾರೆ.

## ಡಿಸೆಂಬರ್ 27 ರಂದು ಫೋನ್ - ಇನ್ ಕಾರ್ಯಕ್ರಮ

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು, ಡಿಸೆಂಬರ್ 26-ಬೆಂಗಳೂರು ಜಲಮಂಡಳಿಯ ಅಧ್ಯಕ್ಷರೊಂದಿಗೆ ಡಿಸೆಂಬರ್ 27 ರಂದು ಶುಕ್ರವಾರ ಬೆಳಿಗ್ಗೆ 9.30 ಗಂಟೆಯಿಂದ 10.30 ಗಂಟೆಯವರೆಗೆ ನೇರ ಫೋನ್ ಇನ್ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಸಾರ್ವಜನಿಕರು ತಮ್ಮ ವಲಯ / ಪ್ರದೇಶಗಳಲ್ಲಿನ ಕುಡಿಯುವ ನೀರಿನ ಸಮಸ್ಯೆ ಮತ್ತು ಒಳ ಚರಂಡಿ, ಕೊಳವೆ, ಇಳಿ ಗುಂಡಿಯಿಂದ ತ್ಯಾಜ್ಯ ನೀರು ಹೊರಬರುತ್ತಿರುವ ಬಗ್ಗೆ ಜಲಮಾಪನ ಹಾಗೂ ನೀರಿನ ಬಿಲ್ಲಿನಲ್ಲಿ ಸಮಸ್ಯೆಯ ಬಗ್ಗೆ ನೇರವಾಗಿ ಮಾತನಾಡಿ ಕುಂದು - ಕೊರತೆಗಳನ್ನು ಬಗೆಹರಿಸಿಕೊಳ್ಳಲು ಈ ಪೋನ್ ಇನ್ ಕಾರ್ಯಕ್ರಮವನ್ನು ಸದುಪಯೋಗಪಡಿಸಿಕೊಳ್ಳಬಹುದು.

# ಅಮಿತ್ ಶಾ ವಿರುದ್ಧ ಪ್ರತಿಭಟನಾ ರ‍್ಯಾಲಿ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಡಿ. 24 :- ಡಾ.ಬಿ.ಆರ್. ಅಂಬೇಡ್ಕರ್ ವಿರುದ್ಧ ಅವಹೇಳನಕಾರಿ ಮಾತನಾಡಿರುವ ಕೇಂದ್ರ ಗೃಹಸಚಿವ ಅಮಿತ್ ಶಾ ವಿರುದ್ಧ ದೇಶದ್ರೋಹ ಪ್ರಕರಣ ದಾಖಲಿಸಿ, ಅವರನ್ನು ಸಂಪುಟದಿಂದ ವಜಾಗೊಳಿಸಬೇಕೆಂದು ಆಗ್ರಹಿಸಿ ಸ್ವಾಭಿಮಾನಿ ಡಾ.ಬಿ.ಆರ್. ಅಂಬೇಡ್ಕರ್ ವಾದಿಗಳ ಹೋರಾಟ ಸಮಿತಿ ಬೀದರ್ ಜಿಲ್ಲಾ ಘಟಕದಿಂದ ನಗರದಲ್ಲಿ ಮಂಗಳವಾರ ರಸ್ತೆತಡೆ ನಡೆಸಿ, ಪ್ರತಿಭಟನಾ ರ‍್ಯಾಲಿ ನಡೆಸಲಾಯಿತು.

ನಗರದ ಜನವಾಡ ರಸ್ತೆಯ ಡಾ.ಬಿ.ಆರ್. ಅಂಬೇಡ್ಕರ್ ಭವನದಿಂದ ಆರಂಭಗೊಂಡ ರ‍್ಯಾಲಿ ಅಂಬೇಡ್ಕರ್ ವೃತ್ತ ತಲುಪಿದಾಗ ಅಲ್ಲಿ ಅಮಿತ್ ಶಾ ವಿರುದ್ಧ ದಿಕ್ಕಾರ ಎಂದು ಸಮಿತಿಯ ಕಾರ್ಯಕರ್ತರು ಘೋಷಣೆಗಳನ್ನು ಕೂಗಿದರು. ಮಾನವ ಸರಪಳಿ ನಿರ್ಮಿಸಿ ಸುಮಾರು ಅರ್ಧಗಂಟೆಗೂ ಹೆಚ್ಚು ಕಾಲ ರಸ್ತೆತಡೆ ನಡೆಸಿದರು. ಬಳಿಕ ಬಸವೇಶ್ವರ ವೃತ್ತ, ಭಗತ್ ಸಿಂಗ್ ವೃತ್ತ, ಛತ್ರಪತಿ ಶಿವಾಜಿ ಮಹಾರಾಜ ವೃತ್ತದ ಮೂಲಕ ಜಿಲ್ಲಾಧಿಕಾರಿ ಕಚೇರಿ ತಲುಪಿಸಿದರು. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಹೆಸರಿಗೆ ಬರೆದ ಮನವಿ ಪತ್ರವನ್ನು ಹೆಚ್ಚುವರಿ ಜಿಲ್ಲಾಧಿಕಾರಿ ಶಿವಕುಮಾರ ಶೀಲವಂತ ಅವರಿಗೆ ಸಲ್ಲಿಸಿದರು. ಅಮಿತ್ ಶಾ ಅವರನ್ನು ಸಂಪುಟದಿಂದ ತೆಗೆದು ಹಾಕದಿದ್ದರೆ ಬೀದರ್ ಬಂದ್‌ಗೆ ಕರೆ ಕೊಡಲಾಗುವುದು ಎಂದು ತಿಳಿಸಿದರು. ವಿವಿಧ ಕಡೆಗಳಿಂದ ಬಂದಿದ್ದ ಸಮಿತಿಯ ಕಾರ್ಯಕರ್ತರು ಅಂಬೇಡ್ಕರ್ ಅವರ ಭಾವಚಿತ್ರ ಹಿಡಿದುಕೊಂಡು ಹೆಜ್ಜೆ ಹಾಕಿದರು. ಅವರ ಪರ ಘೋಷಣೆಗಳನ್ನು ಕೂಗಿದರು. ಮುಸ್ಲಿಂ ಮಹಿಳೆಯರೂ ಅಂಬೇಡ್ಕರ್ ಭಾವಚಿತ್ರದೊಂದಿಗೆ ಪ್ರತಿಭಟನಾ ರ‍್ಯಾಲಿಯಲ್ಲಿ ಭಾಗವಹಿಸಿದ್ದರು.

> ಒಂದು ವಾರದೊಳಗೆ ಸಂಪುಟದಿಂದ ಅಮಿತ್ ಶಾ ಅವರನ್ನು ವಜಾಗೊಳಿಸಬೇಕು. ಇಲ್ಲವಾದರೆ ಬೀದರ್ ಬಂದ್‌ಗೆ ಕರೆ ಕೊಡಲಾಗುವುದು.
>
> -ಮಹೇಶ ಗೋರನಾಳಕರ್, ಪ್ರಧಾನ ಕಾರ್ಯದರ್ಶಿ, ಸ್ವಾಭಿಮಾನಿ ಅಂಬೇಡ್ಕರ್ ವಾದಿಗಳ ಹೋರಾಟ ಸಮಿತಿ
>
> ಈ ದೇಶದ ಸಂವಿಧಾನದಿಂದಲೇ ಅಮಿತ್ ಶಾ ಗೃಹಮಂತ್ರಿ ಆಗಿದ್ದಾರೆ. ಇಲ್ಲದಿದ್ದರೆ ಗುಜರಿ ವ್ಯಾಪಾರ ಮಾಡುತ್ತಿದ್ದರು.
>
> **-ವಿಠಲದಾಸ್ ಪ್ಯಾಗೆ, ಹೋರಾಟ ಸಮಿತಿ ಮುಖಂಡ**

ಸಮಿತಿಯ ಅಧ್ಯಕ್ಷ ಉಮೇಶ ಸ್ವಾರಳ್ಳಿಕರ್ ಮಾತನಾಡಿ, ಅಮಿತ್ ಶಾ ಅವರನ್ನು ತಕ್ಷಣವೇ ಕೇಂದ್ರ ಸಂಪುಟದಿಂದ ವಜಾಗೊಳಿಸಬೇಕು. ಅವರ ವಿರುದ್ಧ ದೇಶದ್ರೋಹದ ಪ್ರಕರಣ ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಪ್ರಧಾನ ಕಾರ್ಯದರ್ಶಿ ಮಹೇಶ ಗೋರನಾಳಕರ್ ಮಾತನಾಡಿ, ಅಮಿತ್ ಶಾ ಅವರು ಅಂಬೇಡ್ಕರ್ ಅವರನ್ನು ಅಪಮಾನಿಸಿ ದೊಡ್ಡ ತಪ್ಪು ಎಸಗಿದ್ದಾರೆ. ಅವರನ್ನು ಸಂಪುಟದಿಂದ ವಜಾಗೊಳಿಸುವವರೆಗೆ ಹೋರಾಟ ಮುಂದುವರಿಯಲಿದೆ ಎಂದು ಹೇಳಿದರು.

ಸಮಿತಿ ಮುಖಂಡ ವಿಠಲದಾಸ್ ಪ್ಯಾಗೆ ಮಾತನಾಡಿ, ಸಂವಿಧಾನ ಜಾರಿಗೆ ಬಂದ ದಿನದಿಂದಲೂ ಮನುಸ್ಮೃತಿ ನಂಬುವವರು ಅದನ್ನು ವಿರೋಧಿಸಿಕೊಂಡೇ ಬಂದಿದ್ದಾರೆ. ಮನುವಾದ ಮುಂದುವರೆಸುವ ಹುನ್ನಾರವಿದು. ಅಮಿತ್ ಶಾ ಅವರ ಹೇಳಿಕೆ ಅದರ ಭಾಗ. ಈ ದೇಶದ ಶೇ 80ರಷ್ಟು ದಲಿತರು, ಅಲ್ಪಸಂಖ್ಯಾತರು, ಹಿಂದುಳಿದವರು ಜಾಗೃತರಾಗಿ ಕೇಂದ್ರದ ವಿರುದ್ಧ ಹೋರಾಟ ಮಾಡಬೇಕು. ಅಮಿತ್ ಶಾ ರಾಜೀನಾಮೆ ಪಡೆಯುವವರೆಗೆ ವಿರಮಿಸಬಾರದು ಎಂದು ಹೇಳಿದರು. ಮುಖಂಡ ಶಿವಶರಣಪ್ಪ ಹುಗ್ಗೆ ಪಾಟೀಲ ಮಾತನಾಡಿ, ಅಮಿತ್ ಶಾ ರಾಜೀನಾಮೆ ಕೊಟ್ಟು ದೇಶದ ಜನರ ಕ್ಷಮೆ ಕೇಳಬೇಕು. ಸಂವಿಧಾನದಿಂದಲೇ ಅಧಿಕಾರ ಪಡೆದಿದ್ದರೂ ಅದನ್ನು ಬರೆದವರ ವಿರುದ್ಧ ಮಾತನಾಡಿರುವುದು ಸರಿಯಲ್ಲ ಎಂದು ಟೀಕಿಸಿದರು.

ಮುಖಂಡ ಬಾಬುರಾವ್ ಹೊನ್ನಾ ಮಾತನಾಡಿ, ಈ ಜಗತ್ತಿನಲ್ಲಿ ಸ್ವರ್ಗ ನೋಡಿದವರೂ ಯಾರೂ ಇಲ್ಲ. ಆದರೆ, ಏಳೇಳು ಜನ್ಮ ಕೂಡ ಅಂಬೇಡ್ಕರ್ ಅವರನ್ನು ನೆನೆಯಬೇಕಾಗುತ್ತದೆ. ಏಕೆಂದರೆ ಈ ದೇಶಕ್ಕೆ ಅವರ ಕೊಡುಗೆ ಅಷ್ಟಿಷ್ಟಲ್ಲ ಎಂದರು.

ಸಮಿತಿ ಗೌರವ ಅಧ್ಯಕ್ಷರಾದ ಚಂದ್ರಕಾಂತ ನಿರಾಟೆ, ಕಲ್ಯಾಣರಾವ್ ಭೋಸ್ಲೆ, ಕಾರ್ಯಾಧ್ಯಕ್ಷರಾದ ವಿಷ್ಣುವರ್ಧನ್ ವಾಲದೊಡ್ಡಿ, ಅಭಿ ಕಾಳೆ, ಉಪಾಧ್ಯಕ್ಷರಾದ ಅಂಬರೀಶ ಕುದುರೆ, ರಾಜಕುಮಾರ ಶಿಂಧೆ, ರಾಜಕುಮಾರ ಡೊಂಗರೆ, ಸಂಜಯ ಭೋಸ್ಲೆ, ಸಂಜುಕುಮಾರ ಮೇತ್ರೆ, ರಾಜಕುಮಾರ ಗುನ್ನಳ್ಳಿ, ರಾಜಕುಮಾರ ಭಾವಿಕಟ್ಟಿ, ಕಾರ್ಯದರ್ಶಿಗಳಾದ ಪವನ್ ಮಿಠಾರೆ, ಪ್ರಕಾಶ ರಾವಣ, ಸಂತೋಷ ಏಣ-ಕೂರೆ, ಹರ್ಷಿತ್ ಪಾಂಡೇಕರ್, ಗೌತಮ ಬಗದಲಕರ್, ಜಗನ್ನಾಥ ಹೊನ್ನಾ, ಪ್ರಕಾಶ ಹಳ್ಳಿಖೇಡ್, ಸಂಘಟನಾ ಕಾರ್ಯದರ್ಶಿ ರಾಹುಲ್ ಡಾಂಗೆ, ಬಾಬುರಾವ್ ಕೌಠಾ, ವಿನೀತ ಗಿರಿ, ಬಿಎಸ್‌ಪಿ ಜಿಲ್ಲಾಧ್ಯಕ್ಷ ಕಪಿಲ ಗೋಡಬಲೆ, ಮುಖಂಡರಾದ ಶ್ರೀಕಾಂತ ಸ್ವಾಮಿ, ಓಂಪ್ರಕಾಶ ರೊಟ್ಟೆ, ಮುಬಶೀರ್ ಶಿಂಧೆ, ಅಮೃತ ಎಸ್. ಮೊಳಕೇರೆ, ಸೈಯದ್ ವಹೀದ್ ಲಖನ್, ಮುನ್ನಾ, ಶಫಿವುಲ್ಲಾ ಬೇಗ್, ಅಮೃತ್ ಮುತ್ತಂಗಿಕರ್, ಜೈಶೀಲ ಮೇತ್ರೆ ಮತ್ತಿತರರು ಪಾಲ್ಗೊಂಡಿದ್ದರು.

## ರಾಜ್ಯದಲ್ಲಿ 2025 ರಲ್ಲಿ ಜರುಗಲಿರುವ ನೀರಾವರಿ ಗಣತಿಗಳಿಗಾಗಿ ಪ್ರಾದೇಶಿಕ ತರಬೇತಿ ಕಾರ್ಯಾಗಾರ

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು, ಡಿಸೆಂಬರ್ 25-ನೀರು ನೈಸರ್ಗಿಕ ಸಂಪನ್ಮೂಲವಾಗಿದೆ. ಆದ್ದರಿಂದ ಅದರ ಪರಿಣಾಮಕಾರಿ ಬಳಕೆ ಮತ್ತು ನೀರಿನ ಸಂಪನ್ಮೂಲಗಳ ನಿರ್ವಹಣೆ ಅತ್ಯಗತ್ಯ, ಭಾರತದ ನೈಋತ್ಯ ಭಾಗದಲ್ಲಿರುವ ಕರ್ನಾಟಕವು ಹೇರಳವಾದ ಮತ್ತು ವಿರಳವಾದ ನೀರಿನ ಸಂಪನ್ಮೂಲಗಳನ್ನು ಹೊಂದಿವೆ. ರಾಜ್ಯದ ಸಂಕೀರ್ಣ ಸ್ಥಳಾಕೃತಿ, ಋತುವಾರು ವ್ಯತ್ಯಾಸ ಮತ್ತು ತ್ತು ಬೆಳೆಯುತ್ತಿರುವ ಜನಸಂಖ್ಯೆಯು ಅದರ ನೀರಿನ ಸಂಪನ್ಮೂಲಗಳನ್ನು ನಿರ್ವಹಿಸುವಲ್ಲಿ ವಿಶಿಷ್ಟ ಸವಾಲುಗಳನ್ನು ಪ್ರಸ್ತುತಪಡಿಸುತ್ತದೆ. ನೀರಿನಾಸರೆಗಳ ಮತ್ತು ನೀರಾವರಿ ಯೋಜನೆಗಳ ಸಮಗ್ರ ದತ್ತಾಂಶಗಳನ್ನು ಸಂಗ್ರಹಿಸಬೇಕಾದುದು ಈಗಿನ ಅಗತ್ಯತೆಯಾಗಿದೆ. ಈ ಹಿನ್ನಲೆಯಲ್ಲಿ ಜಲ ಶಕ್ತಿ ಮಂತ್ರಾಲಯದ ಜಲಸಂಪನ್ಮೂಲ, ನದಿ ವಿಕಾಸ ಮತ್ತು ಗಂಗಾ ಸಂಸ್ಕರಣ ಇಲಾಖೆಯ, ಸಣ್ಣ ನೀರಾವರಿ ಅಂಕಿ-ಅಂಶಗಳ ವಿಭಾಗವು ಪ್ರತಿ 5 ವರ್ಷಗಳಿಗೊಮ್ಮೆ ಕರ್ನಾಟಕವೂ ಸೇರಿ ರಾಷ್ಟ್ರಾದ್ಯಂತ ವಿವಿಧ ನೀರಾವರಿ ಮತ್ತು ನೀರಿನಾಸರೆಗಳ ಗಣತಿಗಳನ್ನು ಹಮ್ಮಿಕೊಳ್ಳಲಾಯಿತು. ಸದರಿ ಗಣತಿಗಳ ದತ್ತಾಂಶಗಳು ನೀರಾವರಿ ಇಲಾಖೆಯ ವಿವಿಧ ಯೋಜನೆಗಳ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನಕ್ಕೆ ಸಾಧನಗಳಾಗಿ ಕಾರ್ಯನಿರ್ವಹಿಸುತ್ತವೆ.

ನೀರಾವರಿ ಗಣತಿಗಳಿಗಾಗಿ ಜರುಗಲಿರುವ ಪ್ರಾದೇಶಿಕ ತರಬೇತಿ ಕಾರ್ಯಾಗಾರದಲ್ಲಿ ದಕ್ಷಿಣ ಭಾಗವಹಿಸಿದ್ದು, ಇದನ್ನು ಭಾರತದ ಎಲ್ಲಾ ರಾಜ್ಯಗಳು ಶಕ್ತಿ ಮಂತ್ರಾಲಯದ ಜಲಸಂಪನ್ಮೂಲ, ನದಿ ವಿಕಾಸ ಮತ್ತು ಗಂಗಾ ಸಂಸ್ಕರಣ ಇಲಾಖೆಯ, ಸಣ್ಣ ನೀರಾವರಿ ಅಂಕಿ-ಅಂಶಗಳ ವಿಭಾಗವು ನಡೆಸಿಕೊಟ್ಟಿತು.

ಪ್ರಾದೇಶಿಕ ತರಬೇತಿ ಕಾರ್ಯಾಗಾರವು ಬೆಂಗಳೂರಿನಲ್ಲಿ ಡಿಸೆಂಬರ್ 11 ರಿಂದ 13 ರ ವರೆಗೆ 3 ದಿನಗಳ ಕಾಲ ಜರುಗಿ, ಇದರಲ್ಲಿ ಮೊಬೈಲ್ ಅಪ್ಲಿಕೇಶನ್ ಮೂಲಕ ಗಣತಿ ಪ್ರಪತ್ರಗಳನ್ನು ತುಂಬುವ ಕುರಿತು ವಿಸ್ತೃತವಾದ ತರಬೇತಿಯನ್ನು ನೀಡಲಾಯಿತು.

ಕರ್ನಾಟಕವೂ ಸೇರಿ ರಾಷ್ಟ್ರಾದ್ಯಂತ ನಾಲ್ಕು ರೀತಿಯ ಗಣತಿಗಳನ್ನು ನಡೆಸಲಾಗುತ್ತದೆ. ಅವುಗಳೆಂದರೆ 7ನೇ ಸಣ್ಣ ನೀರಾವರಿ ಗಣತಿ, 2ನೇ ನೀರಿನಾಸರೆಗಳ ಗಣತಿ, 1ನೇ ಮಧ್ಯಮ ಮತ್ತು ಬೃಹತ್ ನೀರಾವರಿ ಗಣತಿ ಮತ್ತು 1ನೇ ಚಿಲುಮೆಗಳ ಗಣತಿಗಳಾಗಿವೆ.

ಪ್ರಾದೇಶಿಕ ತರಬೇತಿ ಕಾರ್ಯಾಗಾರದಲ್ಲಿ ಮುಖ್ಯ ಅತಿಥಿಗಳಾಗಿ ಭಾರತ ಸರ್ಕಾರದ ಅಜಯ್ ಬಕ್ಸಿ, ಹೆಚ್ಚುವರಿ ಮಹಾನಿರ್ದೇಶಕರು, ಸಣ್ಣ ನೀರಾವರಿ ಅಂಕಿ-ಅಂಶಗಳ ವಿಭಾಗ, ಜಲ ಶಕ್ತಿ ಮಂತ್ರಾಲಯ, ಜಲಸಂಪನ್ಮೂಲ, ನದಿ ವಿಕಾಸ ಮತ್ತು ಗಂಗಾ ಸಂಸ್ಮರಣ ಇಲಾಖೆ, ಇವರು ನವದೆಹಲಿ ಅವರು ಭಾಗವಹಿಸಿದ್ದರು. ಭಾರತ ಸರ್ಕಾರದ ಉನ್ನತ ಅಧಿಕಾರಿಗಳಾದ ಶ್ರೀಮತಿ ಪ್ರಿಯಾಂಕ ಕುಲಕ್ಷೇತ್ರ, ಉಪ ಮಹಾನಿರ್ದೇಶಕರು, ಸಣ್ಣ ನೀರಾವರಿ ಅಂಕಿ-ಅಂಶಗಳ ವಿಭಾಗ, ಜಲ ಶಕ್ತಿ ಮಂತ್ರಾಲಯ, ಜಲಸಂಪನ್ಮೂಲ, ನದಿ ವಿಕಾಸ ಮತ್ತು ಗಂಗಾ ಸಂಸ್ಕರಣ ಇಲಾಖೆ, ಹಾಗೂ ಕರ್ನಾಟಕ ಸರ್ಕಾರದ ಉನ್ನತ ಅಧಿಕಾರಿಗಳಾದ ಶ್ರೀ ಸತೀಶ್ ಎಂ. ಮುಖ್ಯ ಇಂಜಿನಿಯರ್ ಜಲಸಂಪನ್ಮೂಲ ಇಲಾಖೆ, ಬಿ.ಕೆ. ರಾಜೇಂದ್ರ, ಮುಖ್ಯ ಇಂಜಿನಿಯರ್ ಅಂತರ್ಜಲ ಅಭಿವೃದ್ಧಿ ನಿರ್ದೇಶನಾಲಯ, ಪವಿತ್ರ ಬಿ.ಕೆ. ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ, ರಾಜೇಂದ್ರ ಎಸ್. ವಾಲಿಕಾರ್ ಉಪ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಸತೀಶ ರ. ಹುದ್ದಾರ, ಜಂಟಿ ನಿರ್ದೇಶಕರು (ಸಾಂಖ್ಯಿಕ) ಹಾಗೂ ಸಣ್ಣ ನೀರಾವರಿ ಗಣತಿ ನೋಡಲ್ ಅಧಿಕಾರಿಗಳು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ಇವರುಗಳು ಕಾರ್ಯಾಗಾರದಲ್ಲಿ ಉಪಸ್ಥಿತರಿದ್ದರು.

**ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಚಿಟಗುಪ್ಪ ತಾ. ಚಿಟಗುಪ್ಪ ಜಿ. ಬೀದರ**

**ನಮೂನೆ-12**

**ನಿಯಮ 14 (3) ನ್ನು ನೋಡಿ**

**ಚುನಾವಣಾ ಸೂಚನೆ**

ಮಾನ್ಯ ಜಿಲ್ಲಾ ಚುನಾವಣಾಧಿಕಾರಿಗಳು ಮತ್ತು ಸಹಕಾರ ಸಂಘಗಳ ಉಪನಿಬಂಧಕರು ಬೀದರ ಇವರ ಆದೇಶದಂತೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ ಚಿಟಗುಪ್ಪ ತಾ. ಚಿಟಗುಪ್ಪ ಜಿ. ಬೀದರ ಇದರ ಸಾಲಗಾರರ ಮತ್ತು ಸಾಲಗಾರಲ್ಲದ ಮತಕ್ಷೇತ್ರದ ಸಾಮಾನ್ಯ ಪ.ಜಾತಿ ಪ.ಪಂಗಡ ಮಹಿಳಾ, ಹಿಂದುಳಿದ ವರ್ಗಗಳ ಎ ಮತ್ತು ಬಿ ಈ ಕ್ಷೇತ್ರ ನಿರ್ದೇಶಕರ ಸ್ಥಾನಕ್ಕೆ ಚುನಾವಣೆ ಜರುಗಿಸಲು ಈ ಕೆಳಗೆ ಸಹಿ ಮಾಡಿದ ನನ್ನನ್ನು ರಿರ್ಟನಿಂಗ್ ಅಧಿಕಾರಿ ಎಂದು ನೇಮಕ ಮಾಡಿರುತ್ತಾರೆ. ಅದರನ್ವಯ ಈ ಕೆಳಗಿನ ಚುನಾವಣಾ ವೇಳಾ ಪಟ್ಟಿಯನ್ನು ನಿಗದಿ ಪಡಿಸಿ ಪ್ರಕಟಿಸಲಾಗಿದೆ. ಚುನಾವಣಾ ವೇಳಾ ಪಟ್ಟಿಯು ಈ ಕೆಳಗಿನಂತೆ ಇರತಕ್ಕದೆಂದು ಸಹ ನೋಟಿಸ್ ಹೊರಡಿಸಿರುತ್ತೇನೆ.

| ಕ್ರ.ಸಂ. | ವಿವರ ಸಾಲಗಾರರ ಮತಕ್ಷೇತ್ರ | ಆಯ್ಕೆ ಮಾಡಬೇಕಾದ ನಿರ್ದೇಶಕರು |
|---|---|---|
| 01 | ಸಾಮಾನ್ಯ | 05 |
| 02 | ಪರಿಶಿಷ್ಟ ಜಾತಿ | 01 |
| 03 | ಪರಿಶಿಷ್ಟ ಪಂಗಡ | 01 |
| 04 | ಹಿಂದುಳಿದ ವರ್ಗ (ಪ.ವರ್ಗಎ) | 01 |
| 05 | ಹಿಂದುಳಿದ ವರ್ಗ (ಪ. ವರ್ಗ ಬಿ) | 01 |
| 06 | ಮಹಿಳಾ | 02 |
| | ಸಾಲಗಾರಲ್ಲದ ಮತಕ್ಷೇತ್ರ | |
| 01 | ಸಾಲರಹಿತ ಮತಕ್ಷೇತ್ರ ಸಾಮಾನ್ಯ | 01 |
| | ಒಟ್ಟು ಸ್ಥಾನಗಳು | 12 |

| ಕ್ರ.ಸಂ. | ಚುನಾವಣಾ ಕಾರ್ಯಸೂಚಿ | ದಿನಾಂಕ ವಾರ, ಸಮಯ | ನಿಯಮ | ವಿವರ/ಸ್ಥಳ |
|---|---|---|---|---|
| 01 | ಇಚ್ಛೆಯುಳ್ಳ ಅಭ್ಯರ್ಥಿಗಳಿಂದ ನಾಮಪತ್ರ ಸಲ್ಲಿಸಲು ಪ್ರಾರಂಭ ಮತ್ತು ಕೊನೆಯ ದಿನಾಂಕ | 21-12-2024 ರಿಂದ 28-12-2024ರ ವರೆಗೆ ಬೆಳಿಗ್ಗೆ 11 ರಿಂದ ಮಧ್ಯಾಹ್ನ 3.00 ಗಂಟೆಯವರೆಗೆ | 14 (ಎ) | ಸಂಘದ ಕಛೇರಿಯಲ್ಲಿ |
| 02 | ನಾಮ ಪತ್ರಗಳ ಪರಿಶೀಲನೆ | ದಿನಾಂಕ 29-12-2024 ಬೆಳಿಗ್ಗೆ 11 ಗಂಟೆಯಿಂದ ಪರಿಶಿಲನೆ ಪ್ರಕ್ರಿಯೆ ಮುಕ್ತಯಗೊಳ್ಳುವ ವರೆಗೆ | 14 (ಬಿ) | ಸಂಘದ ಕಛೇರಿಯಲ್ಲಿ |
| 03 | ನಾಮ ಪತ್ರ ಪರಿಶೀಲನೆಯ ನಂತರ ನಿಯಮಾನುಸಾರವಾಗಿ ಚುನಾವಣಾ ಕಣದಲ್ಲಿ ಉಳಿದ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ | ದಿನಾಂಕ 29-12-2024 ನಾಮ ಪತ್ರ ಪರಿಶೀಲನೆಯ ನಂತರ | 14 (ಬಿ) | ಸಂಘದ ಸೂಚನಾ ಫಲಕದಲ್ಲಿ |
| 04 | ಸ್ಪರ್ಧಿಸಿರುವ ಅಭ್ಯರ್ಥಿಗಳಿಂದ ಉಮೇದುವಾರಿಕೆ ಅರ್ಜಿಯನ್ನು ವಾಪಸ್ಸು ಪಡೆಯಲು ಕೊನೆಯ ದಿನಾಂಕ | 30-12-2024 ಮುಂಜಾನೆ 11 ರಿಂದ ಮಧ್ಯಾಹ್ನ 3.00 ಗಂಟೆಯವರೆಗೆ | 14 (ಸಿ) | ಸಂಘದ ಕಛೇರಿಯಲ್ಲಿ |
| 05 | ಉಮೇದುವಾರಿಕೆಯನ್ನು ವಾಪಸ್ಸು ಪಡೆದ ನಂತರ ಚುನಾವಣೆಗೆ ಸ್ಪರ್ಧಿಸಲು ಕಣದಲ್ಲಿ ಉಳಿದ ಅಭ್ಯರ್ಥಿಗಳ ಅಂತಿಮ ಪಟ್ಟಿ ಪ್ರಕಟಣೆ | ದಿನಾಂಕ 30-12-2024 ಮಧ್ಯಾಹ್ನ 3.00 ಗಂಟೆಯ ನಂತರ | 14 (ಡಿ) | ಸಂಘದ ಸೂಚನಾ ಫಲಕದಲ್ಲಿ |
| 06 | ಅಭ್ಯರ್ಥಿಗಳಿಗೆ ಚುನಾವಣಾ ಚಿಹ್ನೆಗಳನ್ನು ಹಂಚಿಕೆ ಮಾಡುವುದು. | ದಿನಾಂಕ 30-12-2024 ಮಧ್ಯಾಹ್ನ 4.30 ಗಂಟೆಗೆ ನಂತರ | 14 (ಇ) | ಸಂಘದ ಕಛೇರಿಯ ಸೂಚನಾ ಫಲಕದಲ್ಲಿ |
| 07 | ಅರ್ಹ ನ್ಯಾಯಯುತ ಸ್ಪರ್ದಿ ಅಭ್ಯರ್ಥಿಗಳ ಪಟ್ಟಿಯನ್ನು ಚುನಾವಣಾ ಚಿಹ್ನೆಯೊಂದಿಗೆ ಪ್ರಕಟಿಸುವುದು | ದಿನಾಂಕ 01-01-2025 ಮಧ್ಯಾಹ್ನ 4.30 ಗಂಟೆಗೆ ನಂತರ | 14 (ಇ) (ಎಫ್) | ಸಂಘದ ಕಛೇರಿಯಲ್ಲಿ |
| 08 | ಮತದಾನದ ದಿನಾಂಕ ಮತ್ತು ಸಮಯ | ದಿನಾಂಕ 05-01-2025 ಬೆಳಗ್ಗೆ 09-00 ರಿಂದ ಮಧ್ಯಾಹ್ನ 04-00 ಘಂಟೆಯವರೆಗೆ | | ಸಂಘದ ಕಛೇರಿಯಲ್ಲಿ |
| 09 | ಮತಗಳ ಎಣಿಕೆ ದಿನಾಂಕ ಮತ್ತು ಸಮಯ ದಿನ | ದಿನಾಂಕ 05-01-2025 ರಂದು ಮತದಾನ ಅವಧಿ ಮುಗಿದ ನಂತರ | | |
| 10 | ಫಲಿತಾಂಶ ಘೋಷಣೆ | ಮತದಾನ ದಿನಾಂಕ05-01-2025 ಮತ ಎಣಿಕೆ ಮುಗಿದ ನಂತರ | | ಸಂಘದ ಸೂಚನಾ ಫಲಕದಲ್ಲಿ ಅಳವಡಿಸಲಾಗುವುದು |

ಸಹಿ/-

ಕೆರೆಸಿದ್ದ ಮೋರಟಗಿ
ರಿಟರ್ನಿಂಗ್ ಅಧಿಕಾರಿ, ಪ್ರಾಥಮಿಕ ಕೃಷಿ ಪತ್ತಿನ
ಸಹಕಾರ ಸಂಘ ನಿ. ಚಿಟಗುಪ್ಪ
ತಾ. ಚಿಟಗುಪ್ಪ ಜಿಲ್ಲೆ ಬೀದರ.

# ಗವಿಸಿದ್ದೇಶ್ವರ ಜಾತ್ರಾ ಮಹೋತ್ಸವ: ಡಿ. 30 ರಂದು ಪೂರ್ವಭಾವಿ ಸಭೆ



ಮಲ್ಲಮ್ಮ ನುಡಿ ವಾರ್ತೆ
( ವೀರಯ್ಯ ವಿ ಹಿರೇಮಠ)

ಕೊಪ್ಪಳ : 2025ರ ಜನವರಿ 15ರಂದು ನಡೆಯಲಿರುವ ಕೊಪ್ಪಳದ ಶ್ರೀ ಗವಿಸಿದ್ದೇಶ್ವರ ಜಾತ್ರಾ ಮಹೋತ್ಸವ ಯಶಸ್ವಿಗೊಳ್ಳಲು ಮತ್ತು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಜಿಲ್ಲಾಧಿಕಾರಿ ನಲಿನ್ ಅತುಲ್ ಅವರ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆಯನ್ನು ಡಿಸೆಂಬರ್ 30 ರಂದು ಮದ್ಯಾಹ್ನ 12 ಗಂಟೆಗೆ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದು, ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು ಖುದ್ದಾಗಿ ತಪ್ಪದೇ ಸಭೆಗೆ ಹಾಜರಾಗುವಂತೆ ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮನುಸ್ಮೃತಿ ದಹನ ದಿನಾಚರಣೆ




ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ:-ಡಾ.ಬಿ.ಆರ್. ಅಂಬೇಡ್ಕರ್ ಅವರು 1927ರ ಡಿ.25ರಂದು ಮಾಹಾರಾಷ್ಟದ ಮಹಾಡದಲ್ಲಿ ಮನುಸ್ಮೃತಿ ದಹಿಸಿದ ಘಟನೆಯ ಸ್ಮರಣಾರ್ಥವಾಗಿ. ದಲಿತ ಮುಖಂಡರಿಂದ ನಗರದ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಎದುರು ಮನುಸ್ಮೃತಿ ಪ್ರತಿಕೃತಿ ದಹಿಸಿ ಆಕ್ರೋಶ ವ್ಯಕ್ತಪಡಿಸಲಾಯಿತು.


ದಲಿತ ಹಿರಿಯ ಮುಖಂಡರಾದ ನರಸಿಂಗ ಕಾಂಬಳೆ ರವರು ಅಂಬೇಡ್ಕರ್ ವೃತ್ತದಲ್ಲಿ ಮನುಸ್ಮೃತಿಯ ಪ್ರತಿಕೃತಿಯನ್ನು ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಹೊತ್ತಿಸಿದರು. ಈ ವೇಳೆ ಮಾನವ ಬಂಧುತ್ವ ವೇದಿಕೆ ತಾಲೂಕಾ ಸಂಚಾಲಕರಾದ ಪಿಂಟು ಕಾಂಬಳೆ ಮಾತನಾಡಿ 'ಮನುಸ್ಮೃತಿ ಮಹಿಳಾ ವಿರೋಧಿ ಮಾತ್ರವಲ್ಲ, ಮಾನವ ವಿರೋಧಿಯೂ ಹೌದು. ಪುಸ್ತಕಗಳನ್ನು ಅತಿ ಹೆಚ್ಚು ಪ್ರೀತಿಸುವವರು ಡಾ.ಬಿ.ಆರ್.ಅಂಬೇಡ್ಕರ್ ರವರು ಈ ಮನುಸ್ಮೃತಿಯ ಪುಸ್ತಕವನ್ನು ಸುಟ್ಟು ಹಾಕಿದ್ದರು, ಏಕೆಂದರೆ ಈ ದೇಶದ ಮೂಲ ನಿವಾಸಿಗಳನ್ನು ಗುಲಾಮರನ್ನಾಗಿ ಮಾಡುವ ಹುನ್ನಾರ ಅದರಲ್ಲಿ ಅಡಗಿದೆ ಎಂಬುದನ್ನು ಅರಿತಿ-ದ್ದ ಡಾ.ಅಂಬೇಡ್ಕರ್ ಅದನ್ನು ಬಹಿರಂಗವಾಗಿ ದಹಿಸಿದ್ದರು. ದೇಶ ಸ್ವತಂತ್ರಗೊಂಡಾಗ ಸಂವಿಧಾನ ಕೊಟ್ಟು ನಮ್ಮೆಲ್ಲರ ಬಾಳಿಗೆ ಬೆಳಕು ನೀಡಿದ್ದಾರೆ ಎಂದು ಹೇಳಿದರು.

ವಾಯಿಸ್ ಆಫ್ ಅಂಬೇಡ್ಕರ್ ರಾಜ್ಯಾಧ್ಯಕ್ಷ ಸುರೇಶ ಮೋರೆ ಮಾತನಾಡಿ ದೇಶದ ಜನರಿಗೆ ಅಸ್ಪೃಶ್ಯರೆಂಬ ಹಣೆಪಟ್ಟಿ ಕಟ್ಟಿ ಸಾವಿರಾರು ವರ್ಷಗಳಿಂದ ಪಶು-ಪಕ್ಷಿಗಳಿಗಿಂತಲೂ ಕೀಳಾಗಿ ನಡೆಸಿಕೊಂಡ ಮನುಸ್ಮೃತಿಯನ್ನು ದಹಿಸಿ ಡಾ.ಅಂಬೇಡ್ಕರ್ ಪ್ರತಿಭಟನೆ ದಾಖಲಿಸಿದ್ದರು. ಇದೀಗ ನಾವು ಮನುಸ್ಮೃತಿಯ ಪ್ರತಿಕೃತಿ ದಹಿಸುವ ಮೂಲಕ ಮನುಸ್ಮೃತಿಯನ್ನು ಪೋಷಿಸಿಕೊಂಡು ಸಂಘ ಪರಿವಾರದ ವಿಚಾರಧಾರೆಗಳನ್ನು ವಿರೋಧಿಸುತ್ತಿದ್ದೇವೆ' ಎಂದರು.

ಬಿಎಸ್ಪಿ ತಾಲೂಕಾ ಅಧ್ಯಕ್ಷ ಶಂಕರ ಫುಲೆ ಮಾತನಾಡಿ ಈಗ ನಾವು ಮನುಸ್ಮೃತಿ ಪ್ರತಿಕೃತಿ ದಹಿಸುವ ಮೂಲಕ ದೇಶದಲ್ಲಿ ಮುಂದೆ ಬ್ರಾಹ್ಮಣ್ಯಶಾಹಿ ಮನಸ್ಥಿತಿ ಬಿತ್ತಲು ಬಿಡುವುದಿಲ್ಲ ಎಂಬುದರ ಸಂಕೇತವನ್ನು ನೀಡಿದ್ದೇವೆ' ಎಂದರು. ಗ್ರಾಮಕ್ರಾಂತಿ ಸಂಘಟನೆಯ ರಾಜ್ಯಾಧ್ಯಕ್ಷ ಸಂದೀಪ್ ಮುಕಿಂದೆ ಮಾತನಾಡಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ರವರು ಮನುಸ್ಮೃತಿಯನ್ನು ಸುಟ್ಟು, ಹಿಂದುಳಿದ ಜನರು ಮನುಸ್ಮೃತಿಯಿಂದ ಪಡುತ್ತಿರುವ ಕಷ್ಟಗಳನ್ನು, ಶೋಷಣೆಗಳನ್ನು ಇಡೀ ಜಗತ್ತಿಗೆ ತಿಳಿಸಿದರು ಎಂದರು. ಈ ಸಂದರ್ಭದಲ್ಲಿ ದತ್ತಾತ್ರೇಯ ಸೂರ್ಯವಂಶಿ, ದಶರಥ ಕೋಟಮಾಳೆ, ಝುರನಾಥ ಮಾಲೆ, ರವೀಂದ್ರ ಸಿಂಗಾರೆ, ಅಂಬಾರಾಯ ಶೃಂಗೇರಿ, ನಿತ್ಯಾನಂದ ಮಂತಾಳಕರ, ಸಿಕಂದರ್ ಶಿಂಧೆ, ಫಾಳೆಪ್ಪಾ, ಚಂದ್ರಕಾಂತ ಮಂತಾಳಕರ್, ವಿಜಯಕುಮಾರ ಡಾಂಗೆ, ಜೈಭೀಮ ಕೋಲೆ, ಸಾವನ ಗಾಯಕವಾಡ, ಎಂ ಡಿ ರಫೀಕ್, ರಾಜೇಶ ಮೇತ್ರೆ, ಸಾಗರ ರಾಯಗೊಳ್, ದೇವೇಂದ್ರ ಅಟ್ಟೂರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಡಾ. ಚನ್ನಬಸವ ಪಟ್ಟದ್ದೇವರ 135ನೇ ಜಯಂತಿ!ಕನ್ನಡ ರಾಥೋತ್ಸವ!

# ಉರ್ದು ಫಲಕಹಾಕಿ ಕನ್ನಡ ಶಿಕ್ಷಣ ನೀಡಿದು ಡಾ. ಚನ್ನಬಸವ ಪಟ್ಟದ್ದೇವರು:ಡಾ.ನೀಲಾಂಬಿಕಾ



(ಪರಮೇಶ ರಾಂಪುರೆ)
ಮಲ್ಲಮ್ಮ ನುಡಿ ವಾರ್ತೆ

ಕಮಲನಗರ:ಉರ್ದು ಫಲಕಹಾಕಿ ಕನ್ನಡ ಶಿಕ್ಷಣ ನೀಡಿದು ಡಾ. ಚನ್ನಬಸವ ಪಟ್ಟದ್ದೇವರು,ಮಾತ್ರ ಭಾಷೆಯಲ್ಲಿ ಶಿಕ್ಷಣ ನೀಡಿದರೆ ಜ್ಞಾನ ಹೆಚ್ಚಾಗಾಲು ಸಾದ್ಯ ಎಂದು ಅರಿತು ಈ ಭಾಗದಲ್ಲಿ ಶಿಕ್ಷಣ ಕ್ರಾಂತಿ ಮಾಡಿದರು ಎಂದು ಸಾಹಿತಿ ಡಾ.ನೀಲಾಂಬಿಕಾ ಪೊಲೀಸ ಪಾಟೀಲ ಕಲಬುರಗಿ ಅವರು ನುಡಿದರು.

ಪಟ್ಟಣ ಶಾಖಾಮಠದಲ್ಲಿ ಗುರುವಾರ ಶ್ರೀ ಮ.ಘ.ಚ. ಡಾ.ಚನ್ನಬಸವ ಪಟ್ಟದ್ದೇವರ 135ನೇ ಜಯಂತೋತ್ಸವ ನಿಮಿತ್ತ

ಚನ್ನಬಸವೇಶ್ವರ ಜಾತ್ರಾ ಮಹೋತ್ಸವ ಹಾಗೂ ಕನ್ನಡ ರಥೋತ್ಸವ ಕಾರ್ಯಕ್ರಮ ತಮ್ಮ ಅನುಭಾವ ಹಂಚಿಕೊಂಡರು.

ನೂತನ ಅನುಭವ ಮಂಟಪ ಕಟ್ಟಲು ಸ್ವಂತ ಉಸುಕು ಸೋಸಿ ಕಲ್ಲು ಮಣ್ಣು ಕೊಟ್ಟಿ ಎಲ್ಲರಿಗೆ ಪ್ರೇರಣೆ ನೀಡಿದರು. ಕನ್ನಡ ಮತ್ತು ಬಸವಣ್ಣ ಎರಡೂ ಕಣ್ಣು ಇದ್ದಹಾಗೆ, ಅವರ ಜಯಂತಿ ನಿಮಿತ್ತ ಕಮಲನಗರದಲ್ಲಿ "ಕನ್ನಡ" ಹೆಸರಲ್ಲಿ ರಥೋತ್ಸವ ಮಾಡಿರುವುದು ಬಹಳ ಹೆಮ್ಮೆಯ ವಿಚಾರ ಎಂದು ಅಭಿನಂದನೆ ಸಲ್ಲಿಸಿ, ಮಂದೆ ಕಮಲನಗರ ವನ್ನು ಚನ್ನಬಸವನಗರ ಎಂದು ನಾಮಕರಣ ಮಾಡವಂತೆ ಆಶಯ ವ್ಯಕ್ತ ಪಡಿಸಿದರು.

ಜಾತ್ರಾ ಸಮಿತಿಯ ಅಧ್ಯಕ್ಷ ಪ್ರಕಾಶ ಟೋಣ್ಣೆ ಪ್ರಾಸ್ತವಿಕ ನುಡಿ ನುಡಿದರು. ಪೂಜ್ಯ ಡಾ. ಚನ್ನಬಸವ ಪಟ್ಟದ್ದೇವರ ಹುಟ್ಟೂರಾದ ಕಮಲನಗರದಲ್ಲಿ ಕಳೆದ 3 ವರ್ಷದಿಂದ ಜಾತ್ರೆ ಮಾಡುತ್ತಾ ಬಂದಿದ್ದೇವೆ. ಈ ವರ್ಷ ಕನ್ನಡದ ರಥೋತ್ಸವ ವಿಶೇಷವಾಗಿದೆ. ಮುಂದಿನ ವರ್ಷ ಈ ಜಯಂತಿ ಕಾರ್ಯಕ್ರಮ ವನ್ನ 2 ಅಥವಾ 3 ದಿವಸ ನಡೆಸುವ ಉತ್ಸವವನ್ನು ವ್ಯಕ್ತಿಪಡಿಸಿದರು.

ದಿವ್ಯ ಸಾನಿಧ್ಯ ವಹಿಸಿ ಪೂಜ್ಯ ಶ್ರೀ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಅಧ್ಯಕ್ಷರು,ಅನುಭವ ಮಂಟಪ ಮಾತನಾಡಿ,

ಪಟ್ಟದ್ದೇವರ ಜನ್ಮಭೂಮಿಯಲ್ಲಿ ಕಳೆದ ಮೂರು ವರ್ಷದಿಂದ ಚನ್ನಬವೇಶ್ವರ ಜಾತ್ರಾ ಅದ್ದೂ-ರಿಯಾಗಿ ನಡಿಯುತ್ತಿದೆ. ಈ ವರ್ಷ ಕನ್ನಡ ರಥೋತ್ಸವ ಮಾಡಿ ಕಾರ್ಯಕ್ರಮ ಮತ್ತಷ್ಟು ವೈಭವದಿಂದ ಆಚರಣೆ ಮಾಡಲಾಗುತ್ತಿದೆ ಎಂದು ನುಡಿದರು.

ದಿವ್ಯ ಸಮ್ಮುಖ ಪೂಜ್ಯ ಶ್ರೀ ಗುರುಬಸವ ಪಟ್ಟದ್ದೇವರು, ಪೀಠಾಧಿಪತಿಗಳು ಹಿರೇಮಠ ಸಂಸ್ಥಾನ ಭಾಲ್ಕಿ ವಹಿಸಿ ಮಾತನಾಡಿ, ಬಸವತತ್ವದ ಬೆಳಕು ಚನ್ನಬಸವ ಪಟ್ಟದ್ದೇವರು,ಅವರು ಆಶೆಯದಂತೆ ಪ್ರಾರಂಭವಾದ ಹಿರೇಮಠ ಶಿಕ್ಷಣ ಸಂಸ್ಥೆ ಸೊನ್ನೆ ಯಿಂದ 20 ಸಾವಿರ ಮಕ್ಕಳಿಗೆ ಶಿಕ್ಷಣ ನೀಡುತ್ತಿದೆ ಎಂದು ಹೇಳಿದರು. ಕಮಲನಗರ ಭಕ್ತರ ಭಕ್ತಿಯನ್ನು ಕಂಡು ಹರ್ಷ ವ್ಯಕ್ತ ಪಡಿಸಿದರು.

ಗುರುಬಸವ ಪೂಜೆ ಸುರೇಶ ಸೊಲ್ಲಾಪುರೆ ಉಪಾಧ್ಯಕ್ಷರು, ಜಾತ್ರಾ ಸಮಿತಿ, ಹಾಗೂ ಪ್ರಭುರಾವ ಕಳಸೆ ಖಜಾಂಚಿಗಳು, ಜಾತ್ರಾ ಸಮಿತಿ. ಸಾಮಾಜಿಕ ಸೇವೆಗೈದವರಿಗೆ ಸನ್ಮಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಹಿರಿಯರಾದ ಪ್ರಕಾಶ ಮಾನಕರೆ,ಸುರೇಶ ಸೊಲ್ಲಾಪುರೆ, ಇಓ ಮಾನಿಕರಾವ ಪಾಟೀಲ ಪಿ.ಡಿ.ಓ. ರಾಜಕುಮಾರ ತಂಬಾಕೆ ಲಿಂಗಾನಂದ ಮಹಾಜನ, ಸುಭಾಷ ಮಿರ್ಚೆ, ಶಿವಕುಮಾರ ವಡ್ಡೆ, ರಾಜಕುಮಾರ ಶಿವನಕರ, ಪ್ರವೀಣ ಪಾಟೀಲ, ನಾಗೇಶ ಪಾತ್ರೆ, ಅಮರ ಶಿವನಕರ, ರಾಜಕುಮಾರ ಬಿರಾದಾರ, ಮಡಿವಾಳಪ್ಪ ಮಹಾಜನ, ಸಂತೋಷ ಬಿರಾದಾರ,ಡಾ ವಿಶ್ವನಾಥ್ ಚಿಕ್ ಮುರ್ಗೆ,

ಗಣೇಶ್ ಟೋಣ್ಣೆ,ಶಿವರಾಜ್ ಜುಲ್ಫೆ,ನಿತಿನ ಶಿವಣಕರ, ಅವಿನಾಶ ಶಿವನಕರ,ಬಾಲಾಜಿ ತೆಲಂಗೆ,ಪರಮೇಶ ಬಿರಾದಾರ, ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಸಿಪಿಐ ಅಮರಪ್ಪ.ಎಸ್.ಶಿವಬಲ ಅವರ ಮಾರ್ಗದರ್ಶನದಲ್ಲಿ ಪಿಎಸ್ಐ ಚಂದ್ರಶೇಖರ್ ನಿರ್ಣೆ ನೇತೃತ್ವದಲ್ಲಿ, ಭಾಲ್ಕಿ ಉಪ ಭಾಗದ ಪಿಎಸ್ಐ ರಮೇಶ್ ಟೋಕರೆ, ಎಎಸ್ಐ ಸುನೀಲಕುಮಾರ್ ಕೋರೆ, ಎಎಸ್ಐ ಆಡೆಪ್ಪ ರಡ್ಡಿ, ಬೀದರ ಜಿಲ್ಲಾ ಮೀಸಲು ಪಡೆ ಪೊಲೀಸ್ ಬಂದೋಬಸ್ತ್ ನಡೆದರು.

# ಡಾ.ಚನ್ನಬಸವ ಪಟ್ಟದ್ದೇವರ ಭಾವಚಿತ್ರ ಮೆರವಣಿಗೆ

(ಪರಮೇಶ ರಾಂಪುರೆ)
ಮಲ್ಲಮ್ಮ ನುಡಿ ವಾರ್ತೆ

ಡಾ.ಚನ್ನಬಸವ ಪಟ್ಟದ್ದೇವರ ಭಾವಚಿತ್ರ ಮೆರವಣಿಗೆ ಸ್ವಾಗತ ಸಮಿತಿ ಅಧ್ಯಕ್ಷ ಪ್ರಕಾಶ ಟೋಣ್ಣೆ ಚಾಲನೆ ನೀಡಿದರು.

ಸಾರೋಟೆಯಲ್ಲಿ ಭಾಲ್ಕಿ ಉಭಯ ಶ್ರೀಗಳಿಗೆ ಬೃಹತ ಮೆರವಣಿಗೆ ಶನಿ ದೇವರ ಮಂದಿರದಿಂದ ಆರಂಭಗೊಂಡು, ಕೃಷಿ ಉತ್ಪನ್ನ ಮಾರುಕಟ್ಟೆ ಮುಂಭಾಗದಿಂದ ಸಾಗಿ ಮಿನಿ ಬಸ್ ನಿಲ್ದಾಣ, ಸೋನಾಳಮುಖ್ಯ ರಸ್ತೆ, ಪೊಲೀಸಠಾಣೆ, ಚನ್ನಬಸವ ಪಟ್ಟದ್ದೇವರಸ್ಮಾರಕ, ಬಸವೇಶ್ವರ ವೃತ್ತ,ಗ್ರಾಮ ಪಂಚಾಯತ ಕಛೇರಿ, ಅಕ್ಕಮಹಾದೇವಿ ವೃತ್ತದಿಂದ



ಸಾಗಿ ಭಾಲ್ಕಿ ಹಿರೇಮಠ ಸಂಸ್ಥಾನದ ಶಾಖಾ ಮಠಕ್ಕೆ ತಲುಪಿತು. ಮೆರವಣಿಗೆಯಲ್ಲಿ ವಿವಿಧ ಶಾಲೆಯ ಮಕ್ಕಳು ನ್ರತ್ಯ ಮಾಡಿದರು.

ಶರಣ ವೇಷಭೂಷಣ ಎಲ್ಲರ ಗಮನ ಸೆಳೆಯಿತು.

ಮೆರವಣಿಗೆಯುದ್ದಕ್ಕೂ ಕೋಲಾಟ, ಡೊಳ್ಳು ಕುಣಿತ, ಮಹಾರಾಷ್ಟದ ಬಾರ್ಸಿ ಪಟ್ಟಣದ ನ್ಯೂ ಮಹಾರಾಷ್ಟದ ಬ್ಯಾಂಡ್ ಅಂಡ್ ಬ್ಯಾನ್ಜೋ ತಂಡದಿಂದ ಬ್ಯಾಂಡ್ ಛತ್ರಿ ಪ್ರದರ್ಶನ, ಜೈ ಸೇವಾಲಾಲ್ ಬಸವಕಲ್ಯಾಣ ಕಲಾ ತಂಡ ತೀರ್ಥ ತಾಂಡಾದ ಮಹಿಳೆಯರಿಂದ ನೃತ್ಯ, ವಿವಿಧ ಮಹಿಳಾ

ಸಂಘದವರಿಂದ ಭಜನೆ ನಡೆಯಿತು.

# ಕಮಲನಗರದಲ್ಲಿ ಕನ್ನಡ ರಥೋತ್ಸವ

(ಪರಮೇಶ ರಾಂಪುರೆ)
ಮಲ್ಲಮ್ಮ ನುಡಿ ವಾರ್ತೆ

ಕಮಲನಗರ ಪಟ್ಟಣದ ಶಾಖಾ ಮಠದಲ್ಲಿ ಚನ್ನಬಸವೇಶ್ವರ ರಥೋತ್ಸವಕೆ ಜಗದ್ಗುರು ಡಾ. ಸಾರಂಗಧರದೇಶಿಕೇಂದ್ರ ಶ್ರೀಶೈಲ ಮಹಾಸ್ವಾಮಿಗಳು ಚಾಲನೆ ನೀಡಿದರು.

ಚನ್ನಬಸವೇಶ್ವರ ಮಠದ ಜಾತ್ರಾ ಮಹೋತ್ಸವ ಗುರುವಾರ ಸಂಜೆ ಜರುಗಿದ ಮಹಾರಥೋತ್ಸವದೊಂದಿಗೆ ಸಂಪನ್ನಗೊಂಡಿತು. ಗ್ರಾಮ ಸೇರಿದಂತೆ ಸುತ್ತಲಿನ ಸಾವಿರಾರು ಭಕ್ತರು ರಥೋತ್ಸವಕ್ಕೆ ಸಾಕ್ಷಿಯಾದರು.

ರಥೋತ್ಸವದಲ್ಲಿ ಸುಮಂಗಲೇಯರು



ಕುಂಭ ಕಳಸ ಹೊತ್ತು ಸಾಗಿದರೆ, ಡೊಳ್ಳು ಕುಣಿತ, ನೃತ್ಯ ಗಮನ ಸೆಳೆಯಿತು. ಶಾಖಾ ಮಠ ದಿಂದ ಸೋನಾಳ ಉದಗೀರ್ ಮುಖ್ಯ ರಸ್ತೆಯಿಂದ ಹನುಮಾನ್ ಮಂದಿರಕ್ಕೆ ಬಂದು. ಥೆರಿನ ಹಗ್ಗದ ಮೆರವಣಿಗೆ ಯುವಕರ ಜೈ ಘೋಷಣೆ ಕೂಗುತ ಅದ್ದೂ-ರಿಯಾಗಿ ನಡೆಸಿದರು. ನಾಡೋಜ ಡಾ. ಬಸವಲಿಂಗ ಪಟ್ಟದೇವರು, ಭಾಲ್ಕಿ ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದೇವರು, ಮಹಾಲಿಂಗ ಸ್ವಾಮಿಗಳು, ಶಿವಾನಂದ ಸ್ವಾಮಿಗಳು ತಾಲೂಕಿನ ವಿವಿಧ ಗ್ರಾಮದ ಭಕ್ತಾದಿಗಳು ಚನ್ನಬಸವೇಶ್ವರ ರಥೋತ್ಸವದಲ್ಲಿ ಭಾಗವಹಿಸಿದರು.

# ಡಿ.28ಕ್ಕೆ ರಂಗದಂಗಳದಲಿ ಮಾತುಕತೆ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಡಿ.26-ಕಲಬುರಗಿ ರಂಗಾಯಣ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಯೋಗದೊಂದಿಗೆ ಇದೇ ಡಿಸೆಂಬರ್ 28 ರಂದು ಕಲಬುರಗಿ ನಗರದ ಐವಾನ್-ಎ-ಶಾಹಿ ಪ್ರದೇಶದಲ್ಲಿನ

ಹೆಚ್.ಕೆ.ಇ.ಸಂಸ್ಥೆಯ ಬಾಲಕೀಯರ ವಿಜ್ಞಾನ ಮತ್ತು ವಾಣಿಜ್ಯ ಪದವಿ ಪೂರ್ವ ಕಾಲೇಜಿನಲ್ಲಿ "ರಂಗದಂಗಳದಲಿ ಮಾತುಕತೆ" ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ರಾಯಚೂರಿನ ಹಿರಿಯ ರಂಗಕರ್ಮಿ ತಾಯಣ್ಣ ಯರಗೇರಾ ಅವರೊಂದಿಗೆ ರಂಗ ಪಯಣದ ಕುರಿತು ಬಿಚ್ಚು ಮನಸ್ಸಿನ ಮುಕ್ತ ಮಾತುಕತೆ ಕಾರ್ಯಕ್ರಮ ಇದಾಗಿದೆ.

ಕಲಬುರಗಿ ರಂಗಾಯಣದ ನಿರ್ದೇಶಕಿ ಸುಜಾತಾ ಜಂಗಮಶೆಟ್ಟಿ ಅಧ್ಯಕ್ಷತೆಯಲ್ಲಿ ನಡೆಯುವ ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಗುಲಬರ್ಗಾ ವಿ.ವಿ. ನಿವೃತ್ತ ಪ್ರಾಧ್ಯಾಪಕ ಡಾ.ಕೆ.ಲಿಂಗಪ್ಪ ಭಾಗವಹಿಸಲಿದ್ದು, ಹೆಚ್.ಕೆ.ಇ. ಬಾಲಕೀಯರ ವಿಜ್ಞಾನ ಮತ್ತು ವಾಣಿಜ್ಯ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಡಾ.ಉಷಾದೇವಿ ಪಿ. ಪಾಟೀಲ ಅವರು ಉಪಸ್ಥಿತರಿರುವರು.

# ಕೊಪ್ಪಳ ಉಪಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ರಾಷ್ಟ್ರೀಯ ಗಣಿತ ದಿನಾಚರಣೆ




( ವೀರಯ್ಯ ವಿ ಹಿರೇಮಠ)
ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ:ಶ್ರೀನಿವಾಸರಾಮಾನುಜನ್ ಅವರ ಜನ್ಮದಿನದ ಅಂಗವಾಗಿ ಕೊಪ್ಪಳ ಉಪಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ಮಂಗಳವಾರ ರಾಷ್ಟ್ರೀಯ ಗಣಿತ ದಿನಾಚರಣೆಯನ್ನು ಆಚರಿಸಲಾಯಿತು.

ರಾಷ್ಟ್ರೀಯ ಗಣಿತ ದಿನಾಚರಣೆ-ಯ ಅಂಗವಾಗಿ ಗಣಿತದ ಬಗ್ಗೆ ವಿಶೇಷ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಹಿರಿಯ ಗಣಿತ ಉಪನ್ಯಾಸಕಿ ರಾಧಾರಾಣಿ ಅವರು ಅಂಕಗಣಿತ, ಬೀಜಗಣಿತ,ರೇಖಾಗಣಿತದ ಬಗ್ಗೆ, ಗಣಿತ ವಿಷಯಕ್ಕೆ ಶ್ರೀನಿವಾಸ್ ರಾಮಾನುಜನ್ ಅವರ ಕೊಡುಗೆಗಳ ಬಗ್ಗೆ,ಗಣಿತದಲ್ಲಿ ಭಾರತೀಯರ ಕೊಡುಗೆಗಳ ಬಗ್ಗೆ ವಿಸ್ತಾರವಾಗಿ ಉಪನ್ಯಾಸ ನೀಡಿದರು. ಜೀರೋ ಮತ್ತು ಅನಂತದ ಬಗ್ಗೆ ಮಾಹಿತಿ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿಜ್ಞಾನ ಕೇಂದ್ರದ ನೋಡಲ್ ಅಧಿಕಾರಿ ಗವಿಸಿದ್ದೇಶ್ವರಸ್ವಾಮಿ ಬೆಣಕಲ್ ಮಠ ಅವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ವಿಜ್ಞಾನ ಕೇಂದ್ರದ ಕಾರ್ಯಕಾರಿ ಸಮಿತಿಯ ಸದಸ್ಯರು ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಭೌತಶಾಸ್ತ್ರ ಉಪನ್ಯಾಸಕ ಸಿದ್ಧಲಿಂಗೇಶ್ ಹಮ್ಮಿಗಿ, ಡಯಟ್‌ನ ಉಪನ್ಯಾಸಕ ಶೇಖರ್, ಪ್ರಭಾರಿ ಕ್ಷೇತ್ರ ಸಮನ್ವಯ ಶಿಕ್ಷಣಾಧಿಕಾರಿ ಪ್ರಕಾಶ್ ತಗಡಿನಮನಿ, ಕ್ಷೇತ್ರ ಸಮನ್ವಯಾಧಿಕಾರಿಗಳಾದ ಸಯ್ಯದ್ ಮೆಹಬೂಬ್ ಹುಸೇನ್, ಹನುಮರಡ್ಡಿ ಹಳ್ಯಾಳ, ಕನಕಪ್ಪ, ಸರ್ಕಾರಿ ಪ್ರೌಢಶಾಲೆ ಸಹಶಿಕ್ಷಕರ ಸಂಘದ ಕಾರ್ಯದರ್ಶಿ ಶೇಖರ್ ಅಂಕದ್, ಗಣಿತ ವೇದಿಕೆಯ ಕಾರ್ಯದರ್ಶಿ ನಜೀರ್ ಅಹ್ಮದ್, ಗಣಿತ ವೇದಿಕೆಯ ಸಂಚಾಲಕ ಶರಣಬಸನಗೌಡ್ರು, ಕ್ಯೂರೇಟರ್ ಮೈಲಾರಪ್ಪ, ಸಿಬ್ಬಂದಿಗಳಾದ ಫಕೀರಸಾಬ್, ಮಹಾಲಿಂಗಪ್ಪ, ಶಂಕ್ರಪ್ಪ, ಪೂಜಾ, ರಾಜಾಭಕ್ಷಿ, ನಬೀಲ್ ಪಾಷ ಸೇರಿದಂತೆ 59 ಕ್ಕೂ ಹೆಚ್ಚಿನ ಗಣಿತ ಶಿಕ್ಷಕರು ಭಾಗವಹಿಸಿದ್ದರು. ಕಾರ್ಯಕ್ರಮವನ್ನು ವಿಜ್ಞಾನ ಕೇಂದ್ರದ ಶಿಕ್ಷಣ ಸಹಾಯಕ ಫಕೀರಸಾಬ್ ನಿರೂಪಿಸಿದರು, ಗುಳದಳ್ಳಿಯ ಸರ್ಕಾರಿ ಪ್ರೌಢಶಾಲೆಯ ಪ್ರಭಾರಿ ಮುಖ್ಯೋಪಾಧ್ಯಾಯರಾದ ಸುಮಂಗಲಾ ಅವರು ಪ್ರಾರ್ಥಿಸಿದರು, ತಾಂತ್ರಿಕ ಸಹಾಯಕ ಮಹಾಲಿಂಗಪ್ಪ ಸ್ವಾಗತಿಸಿದರು, ತಂತ್ರಜ್ಞ ಶಂಕ್ರಪ್ಪ ವಂದಿಸಿದರು.


# ಇಂದು ಕೊಪ್ಪಳದಲ್ಲಿ ವಾಕ್ ಇನ್ ಇಂಟರ್ವ್ಯೂವ

( ವೀರಯ್ಯ ವಿ ಹಿರೇಮಠ)
ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಿಂದ ವಾಕ್ ಇನ್ ಇಂಟರ್ವ್ಯೂವನ್ನು ಡಿಸೆಂಬರ್ 27 ರಂದು ಬೆಳಿಗ್ಗೆ 10.30 ಗಂಟೆಯಿಂದ ಮಧ್ಯಾಹ್ನ 1.30ರ ವರೆಗೆ ಜಿಲ್ಲಾಡಳಿತ ಭವನದಲ್ಲಿರುವ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಆಯೋಜಿಸಲಾಗಿದೆ.

ಈ ವಾಕ್ ಇನ್ ಇಂಟರ್ವ್ಯೂವದಲ್ಲಿ ಖಾಸಗಿ ಸಂಸ್ಥೆಗಳು ತಮ್ಮಲ್ಲಿನ ಖಾಲಿ ಹುದ್ದೆಗಳಿಗೆ ಪಿಯುಸಿ,ತತ್ಸಮಾನ,ಯಾವುದೇ ಪದವಿ ಅಭ್ಯರ್ಥಿಗಳನ್ನು ನೇರ ಸಂದರ್ಶನದ ಮೂಲಕ ನೇಮಕಾತಿ ಮಾಡಿಕೊಳ್ಳಲಿದ್ದಾರೆ. ಭಾಗವಹಿಸಲು ಯಾವುದೇ ಶುಲ್ಕ ಇರುವುದಿಲ್ಲ ಎಲ್ಲರಿಗೂ ಉಚಿತ ಪ್ರವೇಶವಿರುತ್ತದೆ.

ಈ ವಾಕ್ ಇನ್ ಇಂಟರ್ವ್ಯೂವದಲ್ಲಿ ಭಾಗವಹಿಸುವ ಆಸಕ್ತಿಯುಳ್ಳ 18 ರಿಂದ 30 ವರ್ಷದ ವರೆಗಿನ ಅರ್ಹ ವಿದ್ಯಾರ್ಹತೆಹೊಂದಿದ ನಿರುದ್ಯೋಗಿ ಯುವಕ ಅಭ್ಯರ್ಥಿಗಳು ತಮ್ಮ ವಿದ್ಯಾರ್ಹತೆಯ ಎಲ್ಲ ಪ್ರಮಾಣ




ಪತ್ರಗಳು 3 ಪ್ರತಿಗಳೊಂದಿಗೆ ಮತ್ತು ಆಧಾರ ಕಾರ್ಡಿನ ಪ್ರತಿ, ಬಯೋಡಾಟಾ (ರೆಜುಮ್), ಹಾಗೂ 02 ಪಾಸ್ ಪೋರ್ಟ ಅಳತೆಯ ಭಾವಚಿತ್ರಗಳೊಂದಿಗೆ ಈ ವಾಕ್ ಇನ್ ಇಂಟರ್ವ್ಯೂವಲ್ಲಿ ಭಾಗವಹಿಸಿ, ಉದ್ಯೋಗದ ನೆರವನ್ನು ಪಡೆಯಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಜಿಲ್ಲಾ ಆಡಳಿತ ಭವನ, ಮೊದಲನೇ ಮಹಡಿ, ಕೊಪ್ಪಳ ಇವರನ್ನು ಅಥವಾ ದೂ.ಸಂ: 08539-220859ಗೆ ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಉದ್ಯೋಗಾಧಿಕಾರಿ ಪ್ರಾಣೇಶ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಗ್ರಾಮ ಆಡಳಿತ ಅಧಿಕಾರಿ ಹುದ್ದೆಗಳ ನೇಮಕ:**

# ಜ. 2 & 3 ರಂದು ಮೂಲ ದಾಖಲಾತಿ ಪರಿಶೀಲನೆ




( ವೀರಯ್ಯ ವಿ ಹಿರೇಮಠ)
ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಕೊಪ್ಪಳ ಜಿಲ್ಲೆಯಲ್ಲಿ ಖಾಲಿ ಇರುವ 19 ಗ್ರಾಮ ಆಡಳಿತ ಅಧಿಕಾರಿ ಹುದ್ದೆಗಳನ್ನು ನೇಮಕಾತಿ ಮಾಡುವ ಸಲುವಾಗಿ ರೋಸ್ಟರ್ ಕಮ್ ಮೆರಿಟ್ ಆಧಾರದ ಮೇಲೆ 1:3 ಅನುಪಾತದಲ್ಲಿ ಅಭ್ಯರ್ಥಿಗಳ ಅರ್ಹತಾ ಪಟ್ಟಿಯನ್ನು ಕೊಪ್ಪಳ ಜಿಲ್ಲಾ ವೆಬ್‌ಸೈಟ್ ಞ಺ಠ಼- ಠಿಚಿಟ.ಟುಥಿ.ಟಿ ರಲ್ಲಿ ಪ್ರಕಟಿಸಲಾಗಿದ್ದು, ಅರ್ಹತಾ ಪಟ್ಟಿಯಲ್ಲಿರುವ ಅಭ್ಯರ್ಥಿಗಳ ಮೂಲದಾಖಲಾತಿ ಪರಿಶೀಲನೆಯು ಜನವರಿ 2 ಮತ್ತು 3 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5.30 ರವರೆಗೆ ನಡೆಯಲಿದೆ.

ಅರ್ಹತಾ ಪಟ್ಟಿಯಲ್ಲಿರುವ ಅಭ್ಯರ್ಥಿಗಳ ಮೂಲ ದಾಖಲಾತಿ ಪರಿಶೀಲನೆಯು ಕೊಪ್ಪಳ ಜಿಲ್ಲಾಧಿಕಾರಿಗಳ ಕಚೇರಿಯ ಆಡಿಟೋರಿಯಂ ಹಾಲ್ ನಲ್ಲಿ ನಡೆಯಲಿದ್ದು, ಅಭ್ಯರ್ಥಿಗಳು ಅರ್ಜಿಯಲ್ಲಿ ನಮೂದಿಸಿದ ಸಂಬಂಧಪಟ್ಟ ಮೂಲ ಹಾಗೂ ಒಂದು ಸೆಟ್ ಪತ್ರಾಂಕಿತ ಅಧಿಕಾರಿಯಿಂದ ದೃಢೀಕರಿಸಲ್ಪಟ್ಟ ದಾಖಲಾತಿಗಳೊಂದಿಗೆ ಪರಿಶೀಲನೆಗೆ ಖುದ್ದಾಗಿ ಹಾಜರಾಗಬೇಕು ಎಂದು ಅಪರ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಪೂರ್ಣ ಅರ್ಜಿ ಪುನಃ ಭರ್ತಿಗೆ ಜ.05 ರವರೆಗೆ ಅವಕಾಶ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಡಿ.26ಬಳ್ಳಾರಿ(ನಗರ) ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿ ಖಾಲಿ ಇರುವ ಒಟ್ಟು 64 ಅಂಗನವಾಡಿ ಸಹಾಯಕಿಯರ ಗೌರವಸೇವೆ ಹುದ್ದೆಗಳಿಗೆ ಅಧಿಸೂಚನೆ ಹೊರಡಿಸಿ ಅರ್ಜಿ ಸಲ್ಲಿಸಲು ಕಾಲಾವಕಾಶ ನೀಡಲಾಗಿತ್ತು. ಈಗಾಗಲೇ ಕಾಲಾವಕಾಶ ಮುಗಿದಿದ್ದು, ಅಪೂರ್ಣವಾದ ಅರ್ಜಿಗಳನ್ನು ಪುನಃ ಭರ್ತಿ ಮಾಡಲು ಜ.05 ರವರೆಗೆ ಕಾಲಾವಕಾಶ ನೀಡಲಾಗಿದೆ ಎಂದು ಬಳ್ಳಾರಿ ನಗರ ಶಿಶು ಅಭಿವೃದ್ಧಿ ಯೋಜನಾಧಿಕಾರಿ ತಿಳಿಸಿದ್ದಾರೆ.ಅರ್ಜಿ ಸಲ್ಲಿಸುವಾಗ ವೆಬ್‌ಸೈಟ್‌ನಲ್ಲಿ ಒಟ್ಟು 4 ವಿವಿಧ ಹಂತಗಳಿದ್ದು, ಇದರಲ್ಲಿ ಕೆಲವರಿಗೆ 1ನೇ ಹಂತದಲ್ಲಿಯೇ ಅಪ್ಲಿಕೇಷನ್ ಸಕ್ಸಸ್‌ಫುಲ್ ಅಪ್‌ಲೋಡ್ ಎಂಬ ಮೆಸೇಜ್ ಅವರ ಮೊಬೈಲ್‌ಗೆ ಸ್ವೀಕೃತವಾಗಿರುವುದರಿಂದ ಅರ್ಜಿ ಪೂರ್ಣಗೊಳಿಸಿರುವುದಿಲ್ಲ.

ಸರ್ಕಾರದ ಆದೇಶದನ್ವಯ ಅರ್ಜಿ ಸಲ್ಲಿಸುವ 4 ಹಂತಗಳನ್ನು ಪೂರ್ಣಗೊಳಿಸದೆ ಅಪೂರ್ಣ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಜ.05 ರವರೆಗೆ ಅರ್ಜಿ ಪೂರ್ಣಗೊಳಿಸಲು ವೆಬ್‌ಸೈಟ್ ವಿಳಾಸ: ]ttps://karnemakaone.kar.nic.in/adcd/ ಮೂಲಕ ಅವಕಾಶ ನೀಡಿ ಆದೇಶಿಸಲಾಗಿದೆ.

ಅಭ್ಯರ್ಥಿಗಳು ಮೊದಲನೇ ಹಂತ ಆನ್‌ಲೈನ್‌ನಲ್ಲಿ ಅರ್ಜಿ ನಮೂನೆಯಲ್ಲಿ ಮಾಹಿತಿ ತುಂಬುವುದು. 2ನೇ ಹಂತದಲ್ಲಿ ಭಾವಚಿತ್ರ ಮತ್ತು ಸಹಿ ಅಪ್‌ಲೋಡ್ ಮಾಡಬೇಕು. 3ನೇ ಹಂತದಲ್ಲಿ ದಾಖಲಾತಿ ಅಪ್ಲೋಡ್ ಮಾಡಬೇಕು. 4ನೇ ಹಂತ ಆಧಾರ್ ಸಂಖ್ಯೆ ನಮೂದಿಸಿ, ಇ-ಹಸ್ತಾಕ್ಷರಯೊಂದಿಗೆ ಅರ್ಜಿ ಪೂರ್ಣಗೊಳಿಸಬೇಕು.

ಬಳ್ಳಾರಿ(ನಗರ)ದ ಅಂಗನವಾಡಿ ಸಹಾಯಕಿಯರ ಹುದ್ದೆಗೆ 259 ಅಪೂರ್ಣ ಅರ್ಜಿಗಳು ಸ್ವೀಕೃತವಾಗಿವೆ' ಅಪೂರ್ಣವಾದ ಅರ್ಜಿದಾರರ ಹೆಸರನ್ನು ಆಯಾ ಅಂಗನವಾಡಿ ಕೇಂದ್ರದಲ್ಲಿ ಲಭ್ಯವಿರುತ್ತದೆ, ಕೇಂದ್ರಕ್ಕೆ ಭೇಟಿ ನೀಡಿ ಮಾಹಿತಿ ತೆಗೆದುಕೊಂಡು ಅರ್ಜಿ ಪೂರ್ಣಗೊಳಿಸಬೇಕು ಎಂದು ಬಳ್ಳಾರಿ(ನಗರ) ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

# ಜ.01 ರಂದು ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ ಕಾರ್ಯಕ್ರಮ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಡಿ.26:ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ಜ.01 ರಂದು ಬೆಳಿಗ್ಗೆ 10.30 ಗಂಟೆಗೆ ನಗರದ ಡಾ.ರಾಜ್‌ಕುಮಾರ್ ರಸ್ತೆಯ ಸಾಂಸ್ಕೃತಿಕ ಸಮುಚ್ಛಯ ಆವರಣದ ಹೊಂಗಿರಣದಲ್ಲಿ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.



ವಸತಿ,ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ಬಳ್ಳಾರಿ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಅವರು ಕಾರ್ಯಕ್ರಮ ಉದ್ಘಾಟಿಸುವರು.ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು ಅಧ್ಯಕ್ಷತೆ ವಹಿಸುವರು.

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಹಾಗೂ ಶಾಸಕ ಜೆ.ಎನ್ ಗಣೇಶ್, ಸಂಸದರಾದ ಈ.ತುಕಾರಾಂ, ಕೆ.ರಾಜಶೇಖರ ಬಸವರಾಜ ಹಿಟ್ನಾಳ್, ಡಾ.ಸೈಯದ್ ನಾಸೀರ್ ಹುಸೇನ್, ಶಾಸಕರಾದ ಬಿ.ನಾಗೇಂದ್ರ,ಬಿ.ಎಂ.ನಾಗರಾಜ, ವಿಧಾನಪರಿಷತ್ ಶಾಸಕರಾದ ಡಾ.ಚಂದ್ರಶೇಖರ್ ಬಿ.ಪಾಟೀಲ, ಶಶೀಲ್ ನಮೋಶಿ,ವೈ.ಎಂ.ಸತೀಶ್, ಡಾ.ಬಾಬು ಜಗಜೀವನ್‌ರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಂಡರಗಿ ನಾಗರಾಜ,ಮಹಾನಗರಪಾಲಿಕೆಯ ಮಹಾಪೌರರಾದ ಮುಲ್ಲಂಗಿ ನಂದೀಶ್,ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜೆ.ಎಸ್. ಆಂಜನೇಯಲು ಸೇರಿದಂತೆ ಇತರರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಕೂಡ್ಲಿಗಿ ತಾಲ್ಲೂಕಿನ ಖಾನಹೊಸಳ್ಳಿಯ ಸಾಹಿತಿಗಳು ಹಾಗೂ ನಿವೃತ್ತ ಪ್ರಾಂಶುಪಾಲರಾದ ಡಾ.ವೃಷಭೇಂದ್ರಚಾರ್ಯ ಅರ್ಕಸಾಲಿ ಅವರು ವಿಶೇಷ ಉಪನ್ಯಾಸ ನೀಡುವರು.ಕಾರ್ಯಕ್ರಮದಲ್ಲಿ ಕಂಪ್ಲಿ ತಾಲ್ಲೂಕಿನ ಎಮ್ಮಿಗನೂರಿನ ರಾಜು ತಂಡದಿಂದ ಭಕ್ತಿ ಸಂಗೀತ ಇರಲಿದೆ. ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿವಿ.ಜೆ.,ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಎನ್.ಝುಬೇರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಸೇರಿದಂತೆ ಇತರರು ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.

# ಉಪೇಂದ್ರ ನಾಯಕ್ ರವರಿಂದ ಉಪನ್ಯಾಸ ಕಾರ್ಯಕ್ರಮ



(ವೀರೇಶ್ ಟಕ್ಕಳಕಿ)

ಮಲ್ಲಮ್ಮ ನುಡಿ ವಾರ್ತೆ

ಕೆಂಭಾವಿ "ಡಿ. ದೇವರಾಜ್ ಅರಸು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರ ವಸತಿ ನಿಲಯದ ವಿದ್ಯಾರ್ಥಿಗಳಿಗೆ ಇಂದು ಸಂಜೆ 4 ಗಂಟೆಗೆ ಡಿ. ದೇವರಾಜ್ ಅರಸು ಭವನ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಮಾನವೀಯ ಮೌಲ್ಯಗಳು ಮತ್ತು ನೈತಿಕತೆ ಕುರಿತು ಶ್ರೀ ಪ್ರಭು ಕಾಲೇಜಿನ ಉಪನ್ಯಾಸಕರಾದ ಶ್ರೀ ಉಪೇಂದ್ರ ನಾಯಕ್ ರವರಿಂದ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಉತ್ತಮ ವ್ಯಕ್ತಿತ್ವ ಮತ್ತು ನಡತೆಯೇ ಜೀವನದ ಅಮೂಲ್ಯ ರತ್ನ ಈ ದೇಶದ ಸಂಸ್ಕೃತಿಯ ಪ್ರತೀಕರಾದಂತ ಭಗವಾನ್ ಶ್ರೀರಾಮ , ಕೃಷ್ಣ ಮತ್ತು ಮಹಾಮೇಧಾವಿಗಳಾದ ಡಾಕ್ಟರ್ ಬಿ.ಆರ್. ಅಂಬೇಡ್ಕರ್ ಡಾಕ್ಟರ್ ಎಪಿಜೆ ಅಬ್ದುಲ್ ಕಲಾಂ, ನೇತಾಜಿ ಸುಭಾಷ್ ಚಂದ್ರಬೋಸ್ ಮುಂತಾದ ಮಹಾನ್ ವ್ಯಕ್ತಿಗಳ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಉತ್ತಮ ನಡತೆಯುಳ್ಳ ವ್ಯಕ್ತಿಗಳಾಗುವಂತೆ ಕರೆ ಕೊಟ್ಟರು. ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳಾದ ಶ್ರೀ ತಿಪ್ಪಾರೆಡ್ಡಿ ರವರು ಅಧ್ಯಕ್ಷತೆ ವಹಿಸಿದ್ದರು ಶ್ರೀ ರಮೇಶ್ ರವರು ಸ್ವಾಗತಿಸಿದರು ರಾಜೇಂದ್ರ ಅವರು ವಂದಿಸಿದರು ವಸತಿ ನಿಲಯಗಳ ನಿಲಯ ಪಾಲಕರಾದ ಶ್ರೀಮತಿ ಶಾಂತಾಬಾಯಿ ಶ್ರೀ ವೆಂಕಪ್ಪ ಟಣಕೆದಾರ್ ಶ್ರೀ ಹನುಮೇಗೌಡ ಶ್ರೀ ಮಲ್ಲಿಕಾರ್ಜುನ್ ನಾಯ್ಕೋಡಿ ಶ್ರೀ ನಾಗೇಶ್ ಶ್ರೀಮತಿ ನೀಲಮ್ಮ ಶ್ರೀಮತಿ ರೂಪಾವತಿ ಶ್ರೀಮತಿ ಮಹಾದೇವಿ ಶ್ರೀ ನಾಗಪ್ಪ ಕೊಡೆಕಲ್ ಶ್ರೀ ವೆಂಕಟೇಶ್ ಕುಮಾರಿ ಅನಾರಕಲಿ ಮತ್ತು ವಿದ್ಯಾರ್ಥಿಗಳು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

# ವಿವಿಧ ಮಾರ್ಗಗಳಲ್ಲಿ ವಿದ್ಯುತ್ ವ್ಯತ್ಯಯ

( ವೀರಯ್ಯ ವಿ ಹಿರೇಮಠ)

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಡಿಸೆಂಬರ್ 27ರ ಶುಕ್ರವಾರರಂದು 110 ಕೆ.ವಿ ಎಂ.ಯು.ಎಸ್.ಎಸ್ ಗಿಣಿಗೇರಾ ಸ್ಟೇಷನ್‌ನ ತೃತಿಯ ತ್ರೈಮಾಸಿಕ ತುರ್ತು ನಿರ್ವಹಣೆ ಕಾಮಗಾರಿ (ಮೆಂಟೆನನ್ಸ್) ನಡೆಸುತ್ತಿರುವ ಪ್ರಯುಕ್ತ, ವಿವಿಧ ಮಾರ್ಗಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

110 ಕೆ.ವಿ ಎಂ.ಯು.ಎಸ್.ಎಸ್ ಗಿಣಿಗೇರಾ ಸ್ಟೇಷನ್‌ಗೆ ಒಳಪಡುವ ಎಫ್-8 ಮುಂಡರಗಿ ಎನ್.ಜೆ.ವೈ, ಎಫ್-9 ಲೇಬಗೇರಿ ಎನ್.ಜೆ.ವೈ, ಫೀಡರ್‌ನ ಎಲ್ಲಾ ಲೈನ್‌ಗಳಲ್ಲಿ ಡಿ.27ರಂದು ಬೆಳಿಗ್ಗೆ 10 ಗಂಟೆಯಿಂದ ಸಾಯಂಕಾಲ 5 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದ್ದು, ಸಾರ್ವಜನಿಕರು ಸಹಕರಿಸಬೇಕು.

ವಿದ್ಯುತ್ ನಿರ್ವಹಣೆ ಕೆಲಸವು ಬೇಗನೆ ಮುಕ್ತಾಯಗೊಂಡಲ್ಲಿ, ಯಾವುದೇ ಸಮಯದಲ್ಲಿ ವಿದ್ಯುತ್ ಸರಬರಾಜು ಮಾಡಲಾಗುವುದು. ಆದ್ದರಿಂದ ಸಾರ್ವಜನಿಕರು ಯಾವುದೇ ತರಹದ ವಿದ್ಯುತ್ ದುರಸ್ಥಿ ಕೆಲಸ-ಕಾರ್ಯಗಳನ್ನು ಮಾಡಬಾರದೆಂದು ಈ ಮೂಲಕ ಸೂಚಿಸಲಾಗಿದೆ. ಒಂದು ವೇಳೆ ವಿದ್ಯುತ್ ಅಘಘಾತ ಸಂಬವಿಸಿದ್ದಲ್ಲಿ ಕಂಪನಿಯು ಜವಬ್ದಾರರಾಗಿರುವುದಿಲ್ಲ ಎಂದು ಜೆಸ್ಕಾಂ ಕೊಪ್ಪಳ ಕಾರ್ಯ ಮತ್ತು ಪಾಲನೆ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪತ್ರಿಕೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಾಹೀರಾತಿಗಾಗಿ ಇಂದೇ ಸಂಪರ್ಕಿಸಿ:9449732000

# ಬಾವಿಗೆ ಬಿದ್ದ ಎಮ್ಮೆ ಅಗ್ನಿಶಾಮಕ ದಳದ ಸಿಬ್ಬಂದಿಯಿಂದ ರಕ್ಷಣೆ





(ರಾಜಕುಮಾರಆರ್.ಹಡಪದ)

ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ: ಪಟ್ಟಣದ ಜೋಶಿ ಬಡಾವಣೆಯಲ್ಲಿ ಮಂಗಳವಾರ ಬೆಳಗಿನ ಜಾವ 50 ಆಳದ ಬಾವಿಯೊಳಗೆ ಬಿದ್ದಿದ್ದ ಎಮ್ಮೆಯನ್ನು ಚಿಟಗುಪ್ಪ ಅಗ್ನಿ ಶಾಮಕ ದಳದ ಸಿಬ್ಬಂದಿ ಸತತ 5 ಗಂಟೆಗಳ ಕಾಲ ಕಾರ್ಯಾಚರಣೆ ನಡೆಸಿ ರಕ್ಷಿಸಿದ್ದಾರೆ. ಜೋಶಿ ಓಣಿಯ ನಿವಾಸಿ ಸುಧೀರ್ ಗೌಳಿ ಅವರಿಗೆ ಸೇರಿದ ಎಮ್ಮೆ ರಾತ್ರಿ 10:40 ಘಂಟೆ ಸುಮಾರಿಗೆ ಬಾವಿಯೊಳಗೆ ಬಿದ್ದಿದೆ. ಶಬ್ದ ಬಂದಿದ್ದರಿಂದ ಬಾವಿಯೊಳಗೆ ಎಮ್ಮೆ ಬಿದ್ದ ವಿಚಾರ ಗೊತ್ತಾಗಿದೆ. ರಾತ್ರಿ 11 ಗಂಟೆ ಹೊತ್ತಿಗೆ ಅಗ್ನಿ ಶಾಮಕ ಠಾಣೆಗೆ ಕರೆ ಮಾಡಿ ನೆರವಿಗೆ ಬರುವಂತೆ ಸುಧೀರ್ ಗೌಳಿ ಅವರು ಕೋರಿದ್ದಾರೆ. ಸ್ಥಳಕ್ಕೆ ಬಂದ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಎಮ್ಮೆಯನ್ನು ಸುರಕ್ಷಿತವಾಗಿ ಹೊರತೆಗೆಯಲು ಯಶಸ್ವಿಯಾಗಿದ್ದಾರೆ.'ಎಮ್ಮೆ ಬಿದ್ದಿರುವ ಬಗ್ಗೆ ಮಾಹಿತಿ ಸಿಕ್ಕ ತಕ್ಷಣವೇ ನಾವು 6 ಜನ ಸಿಬ್ಬಂದಿಗಳು ಸ್ಥಳಕ್ಕೆ ಧಾವಿಸಿದ್ದೇವೆ. 50 ಅಡಿ ಆಳದ ಬಾವಿಯಾಗಿದ್ದರಿಂದ ಜೀವಂತವಾಗಿ ಎಮ್ಮೆಯನ್ನು ಹೊರತೆಗೆಯುವುದು ಸವಾಲಿನ ಕೆಲಸವಾಗಿತ್ತು. ಸಿಬ್ಬಂದಿಗಳಾದ ವಸಂತಕುಮಾರ,ವಿಶ್ವನಾಥ,ಗಣಪತಿ, ವೆಂಕಟ ರೆಡ್ಡಿ, ಮಂಜುನಾಥ ಸುಮಾರು 5 ಗಂಟೆಗಳ ಕಾಲ ಕಾರ್ಯಾಚರಣೆ ನಡೆಸಿದ ಪರಿಣಾಮ ಬೆಳಗಿನ ಜಾವ 4 ಗಂಟೆ ಹೊತ್ತಿಗೆ ಎಮ್ಮೆಯನ್ನು ಮೇಲಕ್ಕೆ ಎತ್ತಲು ಸಾಧ್ಯವಾಯಿತು' ಎಂದು ಕಾರ್ಯಾಚರಣೆ ನೇತೃತ್ವ ವಹಿಸಿದ್ದ ಸಹಾಯಕ ಅಗ್ನಿಶಾಮಕ ಠಾಣಾಧಿಕಾರಿ ನಾರಂದ ಮಲ್ಲಮ್ಮ ನುಡಿ ಪತ್ರಿಕೆಗೆ ಮಾಹಿತಿ ನೀಡಿದರು.

# ಕೊಪ್ಪಳ ಉಪಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ರಾಷ್ಟ್ರೀಯ ಗಣಿತ ದಿನಾಚರಣೆ




( ವೀರಯ್ಯ ವಿ ಹಿರೇಮಠ)

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಶ್ರೀನಿವಾಸ ರಾಮಾನುಜನ್ ಅವರ ಜನ್ಮದಿನದ ಅಂಗವಾಗಿ ಕೊಪ್ಪಳ ಉಪಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ಮಂಗಳವಾರ ರಾಷ್ಟ್ರೀಯ ಗಣಿತ ದಿನಾಚರಣೆಯನ್ನು ಆಚರಿಸಲಾಯಿತು.

ರಾಷ್ಟ್ರೀಯ ಗಣಿತ ದಿನಾಚರಣೆ-ಯ ಅಂಗವಾಗಿ ಗಣಿತದ ಬಗ್ಗೆ ವಿಶೇಷ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಹಿರಿಯ ಗಣಿತ ಉಪನ್ಯಾಸಕಿ ರಾಧಾರಾಣಿ ಅವರು ಅಂಕಗಣಿತ, ಬೀಜಗಣಿತ, ರೇಖಾಗಣಿತದ ಬಗ್ಗೆ, ಗಣಿತ ವಿಷಯಕ್ಕೆ ಶ್ರೀನಿವಾಸ್ ರಾಮಾನುಜನ್ ಅವರ ಕೊಡುಗೆಗಳ ಬಗ್ಗೆ, ಗಣಿತದಲ್ಲಿ ಭಾರತೀಯರ ಕೊಡುಗೆಗಳ ಬಗ್ಗೆ ವಿಸ್ತಾರವಾಗಿ ಉಪನ್ಯಾಸ ನೀಡಿದರು. ಜೀರೋ ಮತ್ತು ಅನಂತದ ಬಗ್ಗೆ ಮಾಹಿತಿ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿಜ್ಞಾನ ಕೇಂದ್ರದ ನೋಡಲ್ ಅಧಿಕಾರಿ ಗವಿಸಿದ್ದೇಶ್ವರಸ್ವಾಮಿ ಬೆಣಕಲ್ ಮಠ ಅವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ವಿಜ್ಞಾನ ಕೇಂದ್ರದ ಕಾರ್ಯಕಾರಿ ಸಮಿತಿಯ ಸದಸ್ಯರು ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಭೌತಶಾಸ್ತ್ರ ಉಪನ್ಯಾಸಕ ಸಿದ್ಧಲಿಂಗೇಶ್ ಹಮ್ಮಿಗಿ, ಡಯಟ್‌ನ ಉಪನ್ಯಾಸಕ ಶೇಖರ್, ಪ್ರಭಾರಿ ಕ್ಷೇತ್ರ ಸಮನ್ವಯ ಶಿಕ್ಷಣಾಧಿಕಾರಿ ಪ್ರಕಾಶ್ ತಗಡಿನಮನಿ, ಕ್ಷೇತ್ರ ಸಮನ್ವಯಾಧಿಕಾರಿಗಳಾದ ಸಯ್ಯದ್ ಮೆಹಬೂಬ್ ಹುಸೇನ್, ಹನುಮರಡ್ಡಿ ಹಳ್ಯಾಳ, ಕನಕಪ್ಪ, ಸರ್ಕಾರಿ ಪ್ರೌಢಶಾಲೆ ಸಹಶಿಕ್ಷಕರ ಸಂಘದ ಕಾರ್ಯದರ್ಶಿ ಶೇಖರ್ ಅಂಕದ್, ಗಣಿತ ವೇದಿಕೆಯ ಕಾರ್ಯದರ್ಶಿ ನಜೀರ್ ಅಹ್ಮದ್, ಗಣಿತ ವೇದಿಕೆಯ ಸಂಚಾಲಕ ಶರಣಬಸನಗೌಡ್ರು, ಕ್ಯೂರೇಟರ್ ಮೈಲಾರಪ್ಪ, ಸಿಬ್ಬಂದಿಗಳಾದ ಫಕೀರಸಾಬ್, ಮಹಾಲಿಂಗಪ್ಪ, ಶಂಕ್ರಪ್ಪ, ಪೂಜಾ, ರಾಜಾಭಕ್ಷಿ, ನಬೀಲ್ ಪಾಷ ಸೇರಿದಂತೆ 59 ಕ್ಕೂ ಹೆಚ್ಚಿನ ಗಣಿತ ಶಿಕ್ಷಕರು ಭಾಗವಹಿಸಿದ್ದರು.

ಕಾರ್ಯಕ್ರಮವನ್ನು ವಿಜ್ಞಾನ ಕೇಂದ್ರದ ಶಿಕ್ಷಣ ಸಹಾಯಕ ಫಕೀರಸಾಬ್ ನಿರೂಪಿಸಿದರು, ಗುಳದಳ್ಳಿಯ ಸರ್ಕಾರಿ ಪ್ರೌಢಶಾಲೆಯ ಪ್ರಭಾರಿ ಮುಖ್ಯೋಪಾಧ್ಯಾಯರಾದ ಸುಮಂಗಲಾ ಅವರು ಪ್ರಾರ್ಥಿಸಿದರು, ತಾಂತ್ರಿಕ ಸಹಾಯಕ ಮಹಾಲಿಂಗಪ್ಪ ಸ್ವಾಗತಿಸಿದರು, ತಂತ್ರಜ್ಞ ಶಂಕ್ರಪ್ಪ ವಂದಿಸಿದರು.

# ಪಂಚಾಯತ್ ರಾಜ್ ಇಲಾಖೆಯ ಡಾಟಾ ಆಪರೇಟರ್ ಪಾತ್ರ ತುಂಬಾ ಮುಖ್ಯವಾದದ್ದು : ಸಂತೋಷ್ ಪಾಟೀಲ್

(ವೀರಯ್ಯ ವಿ ಹಿರೇಮಠ)

ಮಲ್ಲಮ್ಮ ನುಡಿ ವಾರ್ತೆ

ಕುಕನೂರ : ತಾಲೂಕ ಪಂಚಾಯತ ವತಿಯಿಂದ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕಂಪ್ಯೂಟರ್ ಪಿತಾಮಹ ಚಾರ್ಲ್ಸ್ ಬ್ಯಾಬೇಜ್ ಅವರ ಹುಟ್ಟು ಹಬ್ಬದ ಪ್ರಯುಕ್ತ ಕಂಪ್ಯೂಟರ್ ಅಪರೇಟರ್ ದಿನಾಚರಣೆಯನ್ನು ಆಯೋಜನೆ ಮಾಡಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ತಾಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳಾದ ಸಂತೋಷ್ ಪಾಟೀಲ್ ಬಿರಾದಾರ್ ಮಾತನಾಡುತ್ತಾ



ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅಡಿಯಲ್ಲಿನ ವಿವಿಧ ಯೋಜನೆಗಳ ಅನುಷ್ಠಾನದ ಮಾಹಿತಿ ಸಾರ್ವಜನಿಕರಿಗೆ ಅಥವಾ ಸರ್ಕಾರಕ್ಕೆ ಸಲ್ಲಿಸಲು ಮತ್ತು ಸರ್ಕಾರದ ಯೋಜನೆಗಳಾದ ಮಹಾತ್ಮಗಾಂಧಿ ನರೇಗಾ ಯೋಜನೆ, ಸ್ವಚ್ಛ ಭಾರತ ಮಿಷನ್, ವಸತಿ ಯೋಜನೆ, ಪಂಚತಂತ್ರ 2.0, ಸಕಾಲ, ಸೇರಿದಂತೆ ಬಾಪೂಜಿ ಸೇವಾ ಕೇಂದ್ರದ ಮೂಲಕ ನೂರಾರು ಸೇವೆಗಳನ್ನು ಜನಸಾಮಾನ್ಯರಿಗೆ ತಲುಪಿಸುವಲ್ಲಿ ಗ್ರಾಮ ಪಂಚಾಯತಿಯ ಡಾಟಾ ಆಪರೇಟರ್ ಪಾತ್ರ ಮುಖ್ಯವಾಗಿದೆ.

ಅದರಂತೆ ಕಂಪ್ಯೂಟರ್ ಅಪರೇಟರ್ ರವರು ಅದೇ ಗ್ರಾಮ ಪಂಚಾಯತಿಯಲ್ಲಿ ಹಲವಾರು ವರ್ಷಗಳಿಂದ ಇರುವುದರಿಂದ ಸ್ಥಳೀಯ ಸಮಸ್ಯೆಗಳನ್ನು ಅರ್ಥೈಸಿಕೊಂಡು ಜನ ಸಾಮಾನ್ಯರಿಗೆ ಉತ್ತಮ ಸೇವೆ ಮಾಡಲು ಇವರಿಂದ ಸಾಧ್ಯವಾಗುತ್ತದೆ.

ಅದರಂತೆ ಕಂಪ್ಯೂಟರ್ ಅಪರೇಟರ್ ಸಹ ಉತ್ತಮ ಆರೋಗ್ಯದಿಂದ ಇರಬೇಕಾದರೆ ಪ್ರತಿನಿತ್ಯ ವ್ಯಾಯಾಮವನ್ನು ಮಾಡಬೇಕು, ಆರೋಗ್ಯ ಇದ್ದರೆ ಮಾತ್ರ ನಾವು ಸರ್ಕಾರದ ಸೇವೆ ಮಾಡಬಹುದು, ಅದಕ್ಕಾಗಿ ಗ್ರಾಮ ಪಂಚಾಯತಿ ಸಿಬ್ಬಂದಿಗಳು ಪ್ರಧಾನ ಮಂತ್ರಿ ಸುರಕ್ಷಾ ಭಿಮಾ ಯೋಜನೆ, ಪ್ರಧಾನ ಮಂತ್ರಿ ಜೀವನ್ ಜ್ಯೋತಿ ಸುರಕ್ಷಾ ಭಿಮಾ ಯೋಜನೆಯ ಸ್ಕೀಮ್ ಗಳಲ್ಲಿ ನೋಂದಣಿ ಮಾಡಿಕೊಳ್ಳಬೇಕು, ಮತ್ತು ಅಟಲ್ ಪೆನ್ ಷನ್, ಪ್ರಧಾನ ಮಂತ್ರಿ ಶ್ರಮ ಯೋಗಿ ಮಾನ್ ಧನ್ ಯೋಜನೆಯಂತಹ ನಿವೃತ್ತಿ ಜೀವನಕ್ಕಾಗಿ ಯೋಜನೆ ಮಾಡಿಕೊಳ್ಳಬೇಕು ಎಂದರು.

ಈ ಒಂದು ಕಾರ್ಯಕ್ರಮದಲ್ಲಿ 15 ಗ್ರಾಮ ಪಂಚಾಯಿತಿಯ ಎಲ್ಲಾ ಡಾಟಾ ಕಂಪ್ಯೂಟರ್ ಅಪರೇಟರ್ ರವರಿಗೆ ಸನ್ಮಾನ ಮಾಡಿ ಗೌರವಿಸಲಾಯಿತು.

ಸ್ಥಳದಲ್ಲಿ ಸಹಾಯಕ ನಿರ್ದೇಶಕ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅಧಿಕಾರಿ ಶರಣಪ್ಪ ಕೆಳಗಿನಮನಿ, ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಾದ ವೈಜನಾಥ್ ಪಾಟೀಲ್, ವೀರನಗೌಡ ಪಾಟೀಲ್, ಪ್ರಕಾಶ್ ರೆಡ್ಡಿ ತಿಮ್ಮಾಪುರ್, ಸಿದ್ದನಗೌಡ ರಬ್ಬನಗೌಡ, ಮಹೇಶ ಗೌಡ ಪಾಟೀಲ್, ಪರಶುರಾಮ್ ನಾಯಕ್, ಸುರೇಶ್ ರಾಠೋಡ್, ನರೇಗಾ ತಾಂತ್ರಿಕ, ಎಮ್.ಐ.ಎಸ್, ಐ.ಇ.ಸಿ ಸಂಯೋಜಕರು, ತಾಪಂ ಸಿಬ್ಬಂದಿಗಳು, ರಾಜೀವ್ ಗಾಂಧಿ ಪೇಲೋ ಸಿಬ್ಬಂದಿಯವರು, ಎಲ್ಲಾ ಹದಿನೈದು ಗ್ರಾಮ ಪಂಚಾಯತಿಯ ಕಂಪ್ಯೂಟರ್ ಅಪರೇಟರಗಳು ಹಾಜರಿದ್ದರು.

## ಗ್ರಾಹಕನಿಗೆ ಹಕ್ಕಿನ ಜೊತೆಗೆ ಜವಾಬ್ದಾರಿಯೂ ಇದೆ -ಕರ್ನಾಟಕ ರಾಜ್ಯ ಆಹಾರ ಆಯೋಗ ಅಧ್ಯಕ್ಷ ಡಾ.ಎಚ್.ಕೃಷ್ಣ

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು, ಡಿಸೆಂಬರ್ 25-ಗ್ರಾಹಕನಿಗೆ ಹಕ್ಕಿನ ಜೊತೆಗೆ ಜವಾಬ್ದಾರಿಯೂ ಇದೆ. ಗ್ರಾಹಕನ ಹಕ್ಕು ಮತ್ತು ಜವಾಬ್ದಾರಿ ಒಂದೇ ನಾಣ್ಯದ ಎರಡು ಮುಖಗಳು ಎಂದು ಕರ್ನಾಟಕ ರಾಜ್ಯ ಆಹಾರ ಆಯೋಗ ಅಧ್ಯಕ್ಷರಾದ ಡಾ.ಎಚ್. ಕೃಷ್ಣ ಅವರು ತಿಳಿಸಿದರು.

ಇತ್ತಿಚೇಗೆ ಕರ್ನಾಟಕ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನ ಶಾಸ್ತ್ರ ಇಲಾಖೆ ವತಿಯಿಂದ ರಾಷ್ಟ್ರೀಯ ಗ್ರಾಹಕರ ದಿನಾಚರಣೆ-2024 ಉದ್ಘಾಟಿಸಿ ಮಾತನಾಡಿದ ಅವರು, ಗ್ರಾಹಕರಿಗೆ ಸುರಕ್ಷತೆಯ ಹಕ್ಕು, ಮಾಹಿತಿ ಪಡೆಯುವ ಹಕ್ಕು, ಆಯ್ಕೆಯ ಹಕ್ಕು, ಆಲಿಸುವ ಹಕ್ಕು, ಕುಂದುಕೊರತೆಗಳನ್ನು ನಿವಾರಿಸಿಕೊಳ್ಳುವ ಹಕ್ಕು, ಗ್ರಾಹಕರ ಶಿಕ್ಷಣದ ಹಕ್ಕಿನ ಜೊತೆಗೆ ಮೂಲಭೂತ ಅಶ್ಯಕತೆಗಳನ್ನು ಪಡೆಯುವ ಹಕ್ಕು, ಮಾಲಿನ್ಯ ಮುಕ್ತ ಪರಿಸರವನ್ನು ಪಡೆಯುವ ಹಕ್ಕುಗಳನ್ನು ಗ್ರಾಹಕರು ಪಡೆದಿರುತ್ತಾರೆ ಎಂದು ಗ್ರಾಹಕರ ಹಕ್ಕುಗಳ ಕುರಿತು ವಿವರಿಸಿದರು.

ಜಿಲ್ಲಾ ಗ್ರಾಹಕರ ದೂರುಗಳ ಪರಿಹಾರ ಸಂಸ್ಥೆ, ರಾಜ್ಯ ಗ್ರಾಹಕರ ದೂರುಗಳ ಪರಿಹಾರ ಸಂಸ್ಥೆ, ರಾಷ್ಟ್ರೀಯ ಗ್ರಾಹಕರ ವಿವಾದಗಳ ಪರಿಹಾರ ಸಂಸ್ಥೆಗಳಿವೆ. ಗ್ರಾಹಕರ ದೂರನ್ನು ದಾಖಲಿಸಬಹುದು. ದೂರುದಾರರ ಹೆಸರು, ವಿಳಾಸ ಮತ್ತು ದೂರಿನ ವಿವರ, ಕಕ್ಷಿದಾರನ ಹೆಸರು, ವಿಳಾಸ ಮತ್ತು ವಿವರ, ನ್ಯೂನತೆಯ ಕುರಿತ ಮಾಹಿತಿ, ದಾಖಲೆಗಳನ್ನು ನೀಡಬೇಕು ಎಂದರು.

ಹಣವನ್ನು ಕೊಟ್ಟು ಸರಕು ಅಥವಾ ಸೇವೆಗಳನ್ನು ಸ್ವಂತ ಅಥವಾ ಅನ್ಯರ ಉಪಯೋಗಕ್ಕಾಗಿ ಖರೀದಿಸುವವರನ್ನು ಗ್ರಾಹಕ ಎಂದು ಕರೆಯುತ್ತಾರೆ. ಆಧುನಿಕ ಮಾರುಕಟ್ಟೆ ಸಿದ್ಧಾಂತವು ಗ್ರಾಹಕರನ್ನು ಮಾರುಕಟ್ಟೆಯ ರಾಜನೆಂದು ಪರಿಗಣಿಸಿದೆ. ಮಾರುಕಟ್ಟೆಯ ಎಲ್ಲಾ ಕಾರ್ಯ ಚಟುವಟಿಕೆಗಳು ಗ್ರಾಹಕನ ಅವಶ್ಯಕತೆಗಳು ಮತ್ತು ಅಭಿಲಾಷೆಗಳನ್ನು ತೃಪ್ತಿಪಡಿಸುವ ಉದ್ದೇಶವನ್ನು ಹೊಂದಿದೆ. ಆದ-ರೆ, ವ್ಯವಹಾರ ಸಂಘಟನೆಗಳು ಹೆಚ್ಚುತ್ತಿರುವ ಪೈಪೋಟಿ, ಮಾರಾಟದ ಪ್ರಮಾಣವನ್ನು ಹೆಚ್ಚಿಸಿಕೊಳ್ಳುವ ಹಾಗೂ ಮಾರುಕಟ್ಟೆಯಲ್ಲಿ ತಮ್ಮ ಪಾಲನ್ನು ವೃದ್ಧಿಸಿಕೊಳ್ಳುವ ಉದ್ದೇಶದಿಂದ ಅನುಚಿತ ವ್ಯಾಪಾರ ಪದ್ಧತಿಗಳಾದ ಕಲಬೆರಕೆ, ಕಾಳಸಂತೆ ವ್ಯಾಪಾರ, ತಪ್ಪು ಮಾಹಿತಿ ನೀಡುವ ಜಾಹೀರಾತು, ಮುಂತಾದವುಗಳಿಂದ ಗ್ರಾಹಕರನ್ನು ವಂಚಿಸುತ್ತಿದ್ದು, ಅವನ ರಕ್ಷಣೆ ಅತ್ಯಗತ್ಯವಾಗಿದೆ. ಗ್ರಾಹಕನೇ ಎಚ್ಚರ ಎಂಬ ಸಿದ್ಧಾಂತಕ್ಕೆ ಬದಲಾಗಿ ಮಾರಾಟಗಾರನೇ ಎಚ್ಚರ ಎಂಬ ಸಿದ್ಧಾಂತವನ್ನು ಅಳವಡಿಸಿಕೊಳ್ಳಲಾಗಿದೆ. ಈ ಸಿದ್ಧಾಂತವು ಗ್ರಾಹಕನನ್ನು ವ್ಯವಹಾರ ಸಂಸ್ಥೆಗಳ ಅನುಚಿತ ವ್ಯಾಪಾರೀ ಪದ್ಧತಿಗಳಿಂದ ಹೇಗೆ ರಕ್ಷಿಸುತ್ತದೆ ಎಂಬುದರ ಬಗ್ಗೆ ಬೆಳಕನ್ನು ಚೆಲ್ಲುತ್ತದೆ ಎಂದರು.

ಗ್ರಾಹಕ ಸಂರಕ್ಷಣಾ ಕಾಯ್ದೆ 2019 ಗ್ರಾಹಕರ ಹಿತಾಸಕ್ತಿಗಳನ್ನು ರಕ್ಷಿಸುವ ಕಾನೂನಾಗಿದೆ. ದೋಷಪೂರಿತ ಉತ್ಪನ್ನಗಳು, ಅತೃಪ್ತಿಕರ ಸೇವೆಗಳ ಕುರಿತು ಗ್ರಾಹಕರಿಗೆ ಈ ಕಾಯಿದೆ ಸುರಕ್ಷತೆಯನ್ನು ಒದಗಿಸುತ್ತದೆ. ಗುಣಮಟ್ಟದ ಆಹಾರ, ಔಷಧಗಳು ಗ್ರಾಹಕರಿಗೆ ಒದಗಿಸುವುದು ರಾಜ್ಯ ಹಾಗೂ ಕೇಂದ್ರ ಸರ್ಕಾರದ ಜವಾಬ್ದಾರಿಯಾಗಿದೆ. ಸರ್ಕಾರವು ಕಾಲಕಾಲಕ್ಕೆ ಶಾಸನಗಳನ್ನು ರಚಿಸುವುದರ ಮೂಲಕ ಗ್ರಾಹಕರ ಹಿತಾಸಕ್ತಿ ಕಾಪಾಡಬೇಕು ಎಂದರು.

ಕಾರ್ಯಕ್ರಮದಲ್ಲಿ ಬಸವಭವನದ ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ನ್ಯಾಯಾಂಗ ಸದಸ್ಯರಾದ ರವಿ ಶಂಕರ್ ಅವರು ಮಾತನಾಡಿ, ತೂಕದಲ್ಲಿ ಮೋಸ, ನಿಗಧಿತ ದರಕ್ಕಿಂತ ಹೆಚ್ಚಿನ ಬೆಲೆ ವಸೂಲಿ, ಕಳಪೆ ಗುಣಮಟ್ಟದ ವಸ್ತುವಿಗೆ ಹೆಚ್ಚಿನ ಬೆಲೆ ವಸೂಲಿ ಹೀಗೆ ಗ್ರಾಹಕರಿಗೆ ಸಂಬಂಧಿಸಿದಂತೆ ನಾನಾ ದೂರುಗಳು ಇರುತ್ತವೆ. ಗ್ರಾಹಕರು ಉತ್ಪನ್ನಗಳು ಅಥವಾ ಸೇವೆಗಳು ಅಥವಾ ಬ್ರ್ಯಾಂಡ್ ಗುಣಮಟ್ಟದ ಬಗ್ಗೆ ಅಹವಾಲುಗಳಿದ್ದಲ್ಲಿ ದೂರು ಸಲ್ಲಿಸಬಹುದು ಮತ್ತು ಅದಕ್ಕೆ ಪರಿಹಾರವನ್ನು ಪಡೆಯಹುದು. ಗ್ರಾಹಕ ನ್ಯಾಯಾಲಯಗಳಿಗೆ ಭೇಟಿ ನೀಡಿ, ದೂರು ಸಲ್ಲಿಸಬಹುದು. ಅದಕ್ಕೆ ಅಗತ್ಯ ದಾಖಲೆಗಳನ್ನು ಒದಗಿಸಬೇಕಾಗುತ್ತದೆ. ಆನ್‌ಲೈನ್ ಮೂಲಕವೂ ದೂರುಗಳನ್ನು ಸಲ್ಲಿಸಬಹುದು ಎಂದರು.

ಸಕ್ಷಮ ದಳ ಮತ್ತು ಐ.ಟಿ. ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಅಪರ ನಿರ್ದೇಶಕರು ಹಾಗೂ ಕರ್ನಾಟಕ ಆಹಾರ ಮತ್ತು ನಾಗಾರಿಕ ಸರಬರಾಜು ನಿಗಮ ನಿಯಮಿತ ವ್ಯವಸ್ಥಾಪಕ ನಿರ್ದೇಶಕರು ಚಂದ್ರಕಾಂತ ಎಂ.ವಿ. ಅವರು ಮಾತನಾಡಿ, ಗ್ರಾಹಕ ಸಹಾಯವಾಣಿಯಲ್ಲಿ ಗ್ರಾಹಕರು ಯಾವುದೇ ಉತ್ಪನ್ನ ಅಥವಾ ಸೇವೆಯು ವಿರುದ್ಧ ತಮ್ಮ ದೂರುಗಳನ್ನು ಸುಲಭವಾಗಿ ಸಲ್ಲಿಸಲು ಅವಕಾಶ ಮಾಡಿಕೊಡುತ್ತದೆ. ಇಲಾಖೆಯು ಶಾಲಾ ಮಕ್ಕಳಿಗೆ ಗ್ರಾಹಕ ಹಕ್ಕುಗಳ ಕುರಿತ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಕುಟುಂಬದ ಹಿರಿಯರು ಗ್ರಾಹಕರ ಹಕ್ಕುಗಳ ಕುರಿತು ಮಕ್ಕಳಿಗೆ ತಿಳಿಸಿಕೊಡಬೇಕು. ಗ್ರಾಹಕರು ಸರಕುಗಳನ್ನು ಖರೀದಿಸುವಾಗ ಸೀಮಿತ ಜ್ಞಾನದಲ್ಲಿ ನಕಲಿ, ಅಸಲಿಯ ಕುರಿತ ಜ್ಞಾನ, ಸಹನೆ ತಾಳ್ಮೆಯಿಂದ ಪರಿಶೀಲಿಸಿ ಖರೀದಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಕಾನೂನು ಮಾಪನಶಾಸ್ತ್ರ ಇಲಾಖೆಯ ನಿಯಂತ್ರಕರು ಶ್ರೀಮತಿ ಅನಿತಾಲಕ್ಷ್ಮಿ ಸೇರಿದಂತೆ ಹಿರಿಯ ಅಧಿಕಾರಿ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಡಿ.29 ರಂದು ರಾಷ್ಟ್ರಕವಿ ಕುವೆಂಪು ಜನ್ಮದಿನದ ಅಂಗವಾಗಿ "ವಿಶ್ವಮಾನವ ದಿನಾಚರಣೆ" ಕಾರ್ಯಕ್ರಮ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಡಿ.26-ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ರಾಷ್ಟ್ರಕವಿ ಕುವೆಂಪು ಜನ್ಮದಿನ ಅಂಗವಾಗಿ "ವಿಶ್ವಮಾನವ ದಿನಾಚರಣೆ" ಕಾರ್ಯಕ್ರಮವನ್ನು ಡಿ.29 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಡಾ.ರಾಜ್‌ಕುಮಾರ್ ರಸ್ತೆಯ ಸಾಂಸ್ಕೃತಿಕ ಸಮುಚ್ಛಯ ಆವರಣದ ಹೊಂಗಿರಣದಲ್ಲಿ ಆಯೋಜಿಸಲಾಗಿದೆ.

ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ಬಳ್ಳಾರಿ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಅವರು ಕಾರ್ಯಕ್ರಮ ಉದ್ಘಾಟಿಸುವರು.

ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು ಅಧ್ಯಕ್ಷತೆ ವಹಿಸುವರು.

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಹಾಗೂ ಶಾಸಕ ಜೆ.ಎನ್ ಗಣೇಶ್, ಸಂಸದರಾದ ಈ.ತುಕಾರಾಂ, ಕೆ.ರಾಜಶೇಖರ ಬಸವರಾಜ ಹಿಟ್ನಾಳ್, ಡಾ.ಸೈಯದ್ ನಾಸೀರ್ ಹುಸೇನ್, ಶಾಸಕರಾದ ಬಿ.ನಾಗೇಂದ್ರ, ಬಿ.ಎಂ.ನಾಗರಾಜ, ವಿಧಾನಪರಿಷತ್ ಶಾಸಕರಾದ ಡಾ.ಚಂದ್ರಶೇಖರ್ ಬಿ.ಪಾಟೀಲ, ಶಶೀಲ್ ನಮೋಶಿ, ವೈ.ಎಂ.ಸತೀಶ್, ಡಾ.ಬಾಬು ಜಗಜೀವನ್‌ರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಂಡರಗಿ ನಾಗರಾಜ, ಮಹಾನಗರ ಪಾಲಿಕೆಯ ಮಹಾಪೌರರಾದ ಮುಲ್ಲಂಗಿ ನಂದೀಶ್, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜೆ.ಎಸ್.ಆಂಜನೇಯಲು ಸೇರಿದಂತೆ ಇತರರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಶ್ರೀಸತ್ಯಂಶಿಕ್ಷಣಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಆಲಂಭಾಷ ಅವರು ವಿಶೇಷ ಉಪನ್ಯಾಸ ನೀಡುವರು.

ಕಾರ್ಯಕ್ರಮದಲ್ಲಿ ರಾಘವೇಂದ್ರ ಗುಡದೂರು ತಂಡದಿಂದ ಸುಗಮ ಸಂಗೀತ ಇರಲಿದೆ.

ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ ವಿ.ಜೆ., ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಎನ್.ಝುಬೇರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಸೇರಿದಂತೆ ಇತರರು ಉಪಸ್ಥಿತರಿರುವರು.

## ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಅಪೂರ್ಣ ಅರ್ಜಿಗಳ ಪುನಃ ಭರ್ತಿಗೆ ಅವಕಾಶ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಡಿ.26-ಜಿಲ್ಲೆಯ ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿನ ಬಳ್ಳಾರಿ (ಗ್ರಾ), ಕುರುಗೋಡು ಮತ್ತು ಕಂಪ್ಲಿ ತಾಲ್ಲೂಕಿನ ವಿವಿಧ ಗ್ರಾಮ ಪಂಚಾಯಿತಿ, ಪಟ್ಟಣ ಪಂಚಾಯಿತಿ, ಪುರಸಭೆ, ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಖಾಲಿ ಇರುವ ಒಟ್ಟು 25 ಅಂಗನವಾಡಿ ಕಾರ್ಯಕರ್ತೆಯರು ಮತ್ತು 58 ಸಹಾಯಕಿಯರ ಗೌರವಸೇವೆಗಳ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಕಾಲಾವಕಾಶ ನೀಡಲಾಗಿತ್ತು. ಈಗಾಗಲೇ ಕಾಲಾವಕಾಶ ಮುಗಿದಿದ್ದು, ಅಪೂರ್ಣವಾದ ಅರ್ಜಿಗಳನ್ನು ಪುನಃ ಭರ್ತಿ ಮಾಡಲು ಜ.05 ರವರೆಗೆ ಕಾಲಾವಕಾಶ ನೀಡಲಾಗಿದೆ ಎಂದು ಬಳ್ಳಾರಿ ಗ್ರಾಮಾಂತರ ಶಿಶು ಅಭಿವೃದ್ಧಿ ಯೋಜನಾಧಿಕಾರಿ ತಿಳಿಸಿದ್ದಾರೆ.

ಅರ್ಜಿ ಸಲ್ಲಿಸುವಾಗ ವೆಬ್‌ಸೈಟ್‌ನಲ್ಲಿ ಒಟ್ಟು 04 ವಿವಿಧ ಹಂತಗಳಿದ್ದು, ಇದರಲ್ಲಿ ಕೆಲವರಿಗೆ ಒಂದನೇ ಹಂತದಲ್ಲಿಯೇ "ಅಪ್ಲಿಕೇಶನ್ ಸಕ್ಸೆಸ್‌ಫುಲ್ ಅಪ್‌ಲೋಡೆಡ್" ಎಂಬ ಮೆಸೇಜ್ ಮೊಬೈಲ್ ಸಂಖ್ಯೆಗಳಿಗೆ ಸ್ವೀಕೃತವಾಗಿರುವುದರಿಂದ ಅರ್ಜಿಗಳನ್ನು ಪೂರ್ಣಗೊಳಿಸಿರುವುದಿಲ್ಲ.

ಬಳ್ಳಾರಿ ತಾಲ್ಲೂಕಿನ ವ್ಯಾಪ್ತಿಯ ಕಾರ್ಯಕತೆ-ೕಯರ ಹುದ್ದೆಗೆ 304 ಅಪೂರ್ಣ ಅರ್ಜಿ ಹಾಗೂ ಸಹಾಯಕಿಯರ ಹುದ್ದೆಗಳಿಗೆ 111 ಅಪೂರ್ಣ ಅರ್ಜಿ, ಕುರುಗೋಡು ತಾಲ್ಲೂಕು ವ್ಯಾಪ್ತಿಯ ಕಾರ್ಯಕತೆ-ೕಯರ ಹುದ್ದೆಗೆ 190 ಹಾಗೂ ಸಹಾಯಕಿಯರ ಹುದ್ದೆಗಳಿಗೆ 128, ಕಂಪ್ಲಿ ತಾಲ್ಲೂಕು ವ್ಯಾಪ್ತಿಯ ಕಾರ್ಯಕರ್ತೆಯರ ಹುದ್ದೆಗೆ 31, ಸಹಾಯಕಿಯರ ಹುದ್ದೆಗಳಿಗೆ 07 ಅಪೂರ್ಣ ಅರ್ಜಿಗಳು ಸ್ವೀಕೃತವಾಗಿರುತ್ತವೆ. ಅಪೂರ್ಣ ಅರ್ಜಿಗಳ ಬಗ್ಗೆ ಮಾಹಿತಿಯನ್ನು ಆಯಾ ಅಂಗನವಾಡಿ ಕೇಂದ್ರಕ್ಕೆ ಭೇಟಿ ನೀಡಿ ಪಡೆಯಬಹುದಾಗಿದೆ.

ಅರ್ಜಿ ಸಲ್ಲಿಸುವ 04 ಹಂತಗಳನ್ನು ಪೂರ್ಣಗೊಳಿಸದೇ ಅಪೂರ್ಣ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಮಾತ್ರ ಜ.05 ರ ವರೆಗೆ ಅರ್ಜಿಗಳನ್ನು ಪೂರ್ಣಗೊಳಿಸಲು ವೆಬ್‌ಸೈಟ್: https://karnemakaone.kar.nic.in/abcd/ ನಲ್ಲಿ ಪೂರ್ಣಗೊಳಿಸಲು ಕಾಲಾವಕಾಶ ನೀಡಲಾಗಿದೆ.

01 ನೇ ಹಂತ: ಆನ್‌ಲೈನ್ ತಂತ್ರಾಂಶದಲ್ಲಿ ನಿಗಧಿತ ಅರ್ಜಿ ನಮೂನೆಯಲ್ಲಿ ಮಾಹಿತಿಯನ್ನು ತುಂಬುವುದು.

02 ನೇ ಹಂತ: ತಮ್ಮ ಭಾವಚಿತ್ರ ಮತ್ತು ಸಹಿ ಅಪ್‌ಲೋಡ್ ಮಾಡುವುದು.

03 ನೇ ಹಂತ: ತಮ್ಮ ದಾಖಲಾತಿಗಳನ್ನು ಅಪ್‌ಲೋಡ್ ಮಾಡುವುದು.

04 ನೇ ಹಂತ: ತಮ್ಮ ಆಧಾರ್ ಸಂ-ಖ್ಯೆ ನಮೂದಿಸಿ, ಇ-ಹಸ್ತಾಕ್ಷರದೊಂದಿಗೆ ಅರ್ಜಿಯನ್ನು ಪೂರ್ಣಗೊಳಿಸುವುದು.

ವಿಶೇಷ ಸೂಚನೆ: ಅರ್ಜಿ ಆಹ್ವಾನಿಸಿದ ಅಧಿಸೂಚನೆಯ ಕೊನೆಯ ದಿನಾಂಕದೊಳಗೆ ಪಡೆಯಲಾದ ದಾಖಲಾತಿಗಳನ್ನು ಮಾತ್ರ ಪರಿಗಣಿಸಲಾಗುವುದು. ಮುಂದುವರೆದು ವಿಸ್ತರಣಾ ದಿನಾಂಕದಲ್ಲಿ ಪಡೆದ ದಾಖಲಾತಿಗಳನ್ನು ಪರಿಗಣಿಸಲಾಗುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಬಳ್ಳಾರಿ (ಗ್ರಾಮಾಂತರ) ಶಿಶು ಅಭಿವೃದ್ಧಿ ಯೋಜನಾ ಕಚೇರಿ ಅಥವಾ ಅಥವಾ ದೂ.08392-266080 ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಬುದ್ಧ, ಬಸವ, ಗಾಂಧಿ ಹಾಗೂ ಅಂಬೇಡ್ಕರ್ ನನಗೆ ಆದರ್ಶ

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು, ಡಿಸೆಂಬರ್ 26-ಬುದ್ಧ, ಬಸವ, ಗಾಂಧಿ ಹಾಗೂ ಅಂಬೇಡ್ಕರ್ ಅವರುಗಳೇ ನನಗೆ ಆದರ್ಶ ಎಂದು ಹಿರಿಯ ಸಾಹಿತಿ, ಚಿಂತಕರು ಹಾಗೂ ಮಾಜಿ ಸಚಿವರಾದ ಡಾ. ಬಿ. ಲಲಿತಾ ನಾಯಕ್ ಅವರು ತಿಳಿಸಿದರು.

ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿಯ ವತಿಯಿಂದ ಮಹಿಳಾ ವಿಶ್ರಾಂತಿ ಕೊಠಡಿ, ರವೀಂದ್ರಕಲಾಕ್ಷೇತ್ರ, ಬೆಂಗಳೂರು ಇಲ್ಲಿ ಕಳತಾವೂರ್ ಮಳಾವ್ – 03(ಸಜ್ಜನರ ಸಲ್ಲಾಪ –03) ಮೀನಾರೋಪಾಮಣೋ(ತಿಂಗಳ ಅತಿಥಿ) ಸಮಾರಂಭದ ತಿಂಗಳ ಅಥಿತಿಯಾಗಿ ಭಾಗವಹಿಸಿ ಮಾತನಾಡಿದ ಅವರು ತಮ್ಮ ಬಾಲ್ಯದ ದಿನಗಳಲ್ಲಿಯೇ ವ್ಯಾಸಂಗದಲ್ಲಿ ಹೆಚ್ಚು ಆಸಕ್ತಿಯಿಂದ ತೊಡಗಿಸಿಕೊಂಡು. ವಿದ್ಯಾಭ್ಯಾಸ ಪೂರ್ಣಗೊಳಿಸಿದ ನಂತರ ಸಂಸಾರಿಕ ತೊಂದರೆಯಿಂದ 8ನೇ ತರಗತಿಗೆ ಶಾಲೆ ಬಿಟ್ಟು ಸಂಸಾರದ ಕೆಲ ಸಂಗತಿಗಳನ್ನೇ ಬರಹ ರೂಪದಲ್ಲಿ ತರಲಾಯಿತು. ಬಹುಮುಖ್ಯವಾಗಿ ವೈಚಾರಿಕ ನೆಲಗಟ್ಟಿನಲ್ಲಿ ಚಿಂತಿಸುತ್ತಾ ಈ ಕುರಿತಾಗಿ ಹೆಚ್ಚು ಬರಹಗಳನ್ನು ಬರೆಯಲು ಉತ್ಸುಕಳಾದೆ ಎಂದು ತಿಳಿಸಿದರು.

ನನ್ನ ಬರಹಕ್ಕೆ ನನ್ನ ತಂದೆ-ಯ ಒತ್ತಾಸೆ ಹಾಗೂ ಮೊದಲ ವೇದಿಕೆಯಾಗಿದ್ದು ಲಂಕೇಶ್ ಹಾಗೂ ಇತರೆ ಪತ್ರಿಕೆಗಳು ಇದ್ದವು ಎಂಬುದನ್ನು ಮರೆಯುವಂತಿಲ್ಲ. ರಾಜಕೀಯ ಕ್ಷೇತ್ರಕ್ಕೆ ಬಂದು ಕೆಲವರ ಪಿತೂರಿಗಳಿಂದ ಅಧಿಕಾರ ಕಳೆದುಕೊಂಡೆ. ನಜೀರ್ ಸಾಭ್ ಅವರು ನನ್ನನ್ನು ಎಂ.ಎಲ್.ಸಿ ಮಾಡಲು ಕಾರಣರಾದರೂ ಆ ನಂತರ ಸಚಿವೆಯಾದೆ. ಈ ಸಂದರ್ಭದಲ್ಲೂ ಕೂಡ ನನಗೆ ಸಾಹಿತ್ಯ ರಚನೆ ಬಗ್ಗೆಯೇ ಹೆಚ್ಚಿನ ತುಡಿತವಿತ್ತು. ಜೊತೆಗೆ ನನ್ನ ಸತ್ಯ ನಿಷ್ಠೆ, ಸರಳ ಜೀವನ ಇವುಗಳು ಸಚಿವೆಯಾಗಿ ಹೆಚ್ಚು ದಿನ ಮುಂದುವರೆಯದಂತೆ ಮಾಡಿದವು. ಆದರೂ ಧೃತಿಗೆಡಲಿಲ್ಲ, ಹಲವು ಬಗೆಯಲ್ಲಿ ಸಮಾಜ ಸೇವೆಗೆ ತೊಡಗಿಸಿಕೊಂಡಿರುವೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಬಂಜಾರಾ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ಅಧ್ಯಕ್ಷರಾದ ಡಾ.ಎ.ಆರ್ ಗೋವಿಂದಸ್ವಾಮಿ ಅವರು ಮಾತನಾಡಿ, ಕಳೆದ ಆರು ತಿಂಗಳಿಂದ ಅಕಾಡೆಮಿಯು ನಿರಂತರ 28ಕ್ಕೂ ಹೆಚ್ಚಿನ ಕಾರ್ಯಕ್ರಮಗಳನ್ನು ರಾಜ್ಯದಾದ್ಯಂತ ನಡೆಸಿದ ಕಾರ್ಯ ಚಟುವಟಿಕೆ ವಿವರಿಸುತ್ತಾ ಪ್ರಸ್ತುತ ಬಂಜಾರ ವಿಶ್ವಕೋಶ(ಎನ್‌ಸೈಕ್ಲೋಪೀಡಿಯಾ) ರಚಿಸುವ ಅಕಾಡೆಮಿ ತೊಡಗಿದ್ದು ನಾಡೋಜ ಪ್ರೊ. ಬರಗೂರು ರಾಮಚಂದ್ರಪ್ಪ ಅವರ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ. ಕಾರ್ಯದಲ್ಲಿ ಪ್ರಥಮ ಸಾಹಿತಿ ಹಾಗೂ ಕಲಾವಿದರ ಬಗ್ಗೆ ಸಾಕ್ಷ್ಯ ಚಿತ್ರ ನಿರ್ಮಾಣವಾಗುತ್ತಿವೆ ಎಂದು ತಿಳಿಸಿದರು.

ರಾಜ್ಯದ ಬಹುತೇಕ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ವಿಚಾರ ಸಂಕಿರಣ ಆಯೋಜಿಸಲಾಗಿದೆ ಹಾಗೂ ಬಂಜಾರ ಯುವಕ ಯುವತಿಯರಿಗೆ ಕಸೂತಿ, ತರಬೇತಿ ಶಿಬಿರಯಶಸ್ವಿ ಆಯೋಜಿಸಲಾಗಿದೆ ಹಾಗೂ ವಿಜಯಪುರದಲ್ಲಿ ಹತ್ತು ದಿನಗಳ ಬಂಜಾರ ಆಭರಣ ತಯಾರಿಕೆ ಕಾರ್ಯಾಗಾರ ನಡೆಸಲಾಗಿದೆ ಬೆಂಗಳೂರು ನಗರದಲ್ಲಿ ಪ್ರತಿ ತಿಂಗಳು ನಾಡಿನ ಸಾಹಿತಿಗಳು ಚಿಂತಕರು ಪ್ರಗತಿಪರರು, ಸಮುದಾಯದ ಎಲೆಮರೆ ಕಾಯಿಗಳು ಮತ್ತು ಗಣ್ಯ ವ್ಯಕ್ತಿಗಳನ್ನು ಕರೆಸಿ ತಿಂಗಳ ಅತಿಥಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಇವುಗಳ ಜೊತೆಗೆ ಅಕಾಡೆಮಿಯು ಬಂಜಾರ ಸಮುದಾಯದ ಸಾಧಕರನ್ನು ಗುರುತಿಸಿ ಅವರಿಗೆ ಪ್ರಶಸ್ತಿ ಗೌರವಗಳನ್ನು ನೀಡುವ, ಕೊಡಿಸುವ ಕೆಲಸವನ್ನು ಮಾಡುತ್ತಿದೆ ಎಂದು ತಿಳಿಸಿದರು.

ಮಾನ್ಯ ಪ್ರಧಾನಮಂತ್ರಿ ಅವರನ್ನು ಬಂಜಾರ ಭಾಷೆಯನ್ನೂ ಪ್ರಸಾರ ಭಾರತೀಯ ಅಕಾಶವಾಣಿ, ದೂರದರ್ಶನ ಹಾಗೂ ಇತರೆ ಕಡೆ ಬೆಳಸಲು ಅವಕಾಶ ಹಾಗೂ ಬಂಜಾರ ಭಾಷೆಗೆ ಸಂವಿಧಾನಿಕ ಸ್ಥಾನ ಮಾನಕ್ಕೆ ಕೋರಲಾಗಿದೆ. ಜೊತೆಗೆ ಬಂಜಾರ ಮ್ಯೂಸಿಯಂ ಹಾಗೂ ಮಾದರಿ ತಾಂಡ ಅಲ್ಲದೆ ಲಿಪಿ ಇಲ್ಲದ ಬಂಜಾರ ಭಾಷೆಯನ್ನು ಆಯಾ ರಾಜ್ಯಗಳ ಪ್ರಾದೇಶಿಕ ಭಾಷೆಯಲ್ಲಿಯೂ ಮತ್ತು ರಾಷ್ಟ್ರಮಟ್ಟದಲ್ಲಿ ನಾಗರೀಕ ಲಿಪಿಯಲ್ಲಿ ಬರೆಯುತ್ತಿದ್ದು, ಅಂತರರಾಷ್ಟ್ರೀಯ ಮಟ್ಟದಲ್ಲಿ ಆಂಗ್ಲ ಭಾಷೆ ಬಳಕೆ ಇದೆ. ಇದನ್ನೇ ಅನೇಕ ಬಂಜಾರ ಭಾಷಾ ತಜ್ಞರು ಅಖೈರು ಗೊಳಿಸಲು ತಮ್ಮ ಸಮರ್ಥನೆ ಹೇಳಿದ್ದಾರೆ. ಈ ನಿಟ್ಟಿನಲ್ಲಿ ಅಕಾಡೆಮಿ ಹೆಚ್ಚಿನ ಸಂಶೋಧನೆ ಮಾಡಲಿದೆ ಮತ್ತು ಅಖೈರು ಗೊಳಿಸಲಿದೆ ಎಂದರು.

ಹಿರಿಯ ಸಾಂಸ್ಕೃತಿಕ ಚಿಂತಕರು ಹಾಗೂ ಮಾನ್ಯ ಮುಖ್ಯಮಂತ್ರಿಗಳ ವಿಶ್ರಾಂತ ಮಾಧ್ಯಮ ಸಲಹೆಗಾರರಾದ ದಿನೇಶ್ ಅಮಿನ್ ಮಟ್ಟು ಮಾತನಾಡಿ, ಲಲಿತನಾಯಕ್ ಸಾಹಿತಿಯಾಗಿ ಗುರುತಿಸಿಕೊಂಡು ಆನಂತರ ರಾಜಕಾರಣಿಯಾದವರು. ಅನುವಾದಕಿ ಕೂಡ ಆಗಿದ್ದರು ಬಿ. ಟಿ. ಲಲಿತಾ ನಾಯಕ ಅವರು ಒಬ್ಬರು ರಾಜ-ಕಾರಣಿ, ಸಾಹಿತಿ, ಪತ್ರಕರ್ತೆ ಅಂತ ತಿಳಿದುಕೊಂಡರೆ ಅಷ್ಟೇ ಅಲ್ಲ, ಎಲ್ಲವನ್ನು ಒಳಗೊಂಡು ಸಾರ್ವಜನಿಕ ಹಿತಕ್ಕಾಗಿ ಯಾವ ಯಾವ ಕ್ಷೇತ್ರದಲ್ಲಿ ಕೆಲಸ ಮಾಡಲು ಸಾಧ್ಯವಾಗುತ್ತದೆಯೋ ಆ ಎಲ್ಲಾ ಕ್ಷೇತ್ರದಲ್ಲಿಯೂ ಅವರು ಕಾಣಿಸಿಕೊಂಡಿದ್ದಾರೆ ಅವರು ಮೊದಲ ಬಾರಿ ಸಚಿವರಾಗಿದ್ದಾಗ ಬಹಳ ದೊಡ್ಡ ಸಂಚು ನಡೆದು ಅದನ್ನು ಕಳೆದುಕೊಳ್ಳಬೇಕಾಯಿತು. ಎಲ್ಲವನ್ನೂ ಕೂಡ ಸಾರ್ವಜನಿಕ ಹಿತಾಶಕ್ತಿಯಲ್ಲಿಯೇ ತೆಗೆದುಕೊಂಡವರು. ನನಗೆ ಆಶ್ಚರ್ಯ ಆಗಿರುವುದು ಏನೆಂದರೆ ಅವರಿಗೆ ರಾಜ್ಯೋತ್ಸವ ಪ್ರಶಸ್ತಿಯಲ್ಲಿ ಅವರ ಹೆಸರು ಕಾಣಿಸಿಕೊಂಡಾಗ, ಅವರಿಗೆ 10 ವರ್ಷದ ಹಿಂದೆಯೇ ರಾಜ್ಯೋತ್ಸವ ಪ್ರಶಸ್ತಿ ಬಂದಿರಬಹುದು ಎಂದು ತಿಳಿದುಕೊಂಡಿದ್ದೆ. ಆದರೆ ಇಲ್ಲಿಯವರೆಗೆ ಬರದಿರುವುದು ಶೋಚನೀಯ, ಪ್ರಸಕ್ತ ಸಾಲಿನಲ್ಲಿ ಬಂಜಾರ ಅಕಾಡೆಮಿಯ ಅಧ್ಯಕ್ಷರ ಹಾಗೂ ಇತರರ ಶಿಫಾರಸ್ಸು, ತಜ್ಞರ ಸಮಿತಿ ಶಿಫಾರಸ್ಸಿನಿಂದ ಪ್ರಶಸ್ತಿ ಸಿಕ್ಕಿದದಕ್ಕಾಗಿ ಅಭಿನಂದಿಸಿದರು.

ಸಮಾರಂಭದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಕೆ. ಎಲ್. ಮುಕುಂದ್ ರಾಜ್, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಮಾನಸ, ಶಿಕ್ಷಣ ತಜ್ಞ ಪ್ರೋ.ಪಾಂಡುನಾಯಕ್, ಪತ್ರಕರ್ತೆ ಮಂಜು ಶ್ರೀ ಅಕಾಡೆಮಿಯ ಸದಸ್ಯ ಸಂಚಾಲಕ ಡಾ. ಉತ್ತಮ್ ರಾಥೋಡ್ ಹಾಗೂ ಇತರೆ ಸದಸ್ಯರು, ದಲಿತ ಕಾರ್ಮಿಕ ಮುಖಂಡರಾದ ಗವಿಕುಮಾರ್, ಸಾಹಿತಿ ಬಾಲುನಾಯಕ್ ಮುಂತಾದವರು ಉಪಸ್ಥಿತರಿದ್ದರು.

## ಐಎಂಎ ಭವನ ನಿರ್ಮಾಣಕ್ಕೆ 50 ಲಕ್ಷ ರೂ. ನೀಡಿದ ಶ್ರೀ ನಾರ ಸೂರ್ಯನಾರಾಯಣ ರೆಡ್ಡಿ"



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ:ತಾಲೂಕಿನ ಸಂಗನಕಲ್ ನಲ್ಲಿರುವ NPR ಪ್ರಕೃತಿ ವ್ಯಾಲಿ ಲೇಔಟ್ ನಲ್ಲಿ ಇಂಡಿಯನ್ ಮೆಡಿಕಲ್ ಅಸೋಸಿಯೇಷನ್ ಸಂಘದ ಬಳ್ಳಾರಿ ಶಾಖೆಯ ಐಎಂಎ ಭವನವನ ಕಟ್ಟಡದ ಭೂಮಿ ಪೂಜೆಯನ್ನು ನೆರವೇರಿಸಲಾಯಿತು.

ಈ ಕಾರ್ಯಕ್ರಮವನ್ನು ಇಂಡಿಯನ್ ಅಸೋಸಿಯೇಷನ್ ನ ಪ್ರಾರ್ಥನೆಯನ್ನು ಮಾಡಿ ವೇದಿಕೆ ಪ್ರಾರಂಭಗೊಂಡಿತು, ಭೂಮಿ ಪೂಜೆಯನ್ನು ಐಎಂಎ ನ ಕರ್ನಾಟಕ ರಾಜ್ಯ ಶಾಖೆಯ ಅಧ್ಯಕ್ಷರಾದ ವಿವಿ ಚಿನಿವಾಲರ್ ಅವರು ಉದ್ಘಾಟಿಸಿ ಮಾತನಾಡಿ, ನನ್ನ ಅಧ್ಯಕ್ಷತೆಯಲ್ಲಿ ಬಳ್ಳಾರಿಯ ನಮ್ಮ ಶಾಖೆಯ ಭವನದ ಕಟ್ಟಡ ಭೂಮಿ ಪೂಜೆ ನಡೆಯುತ್ತಿರುವುದು ತುಂಬಾ ಸಂತೋಷದ ಸಂಗತಿ ಎಂದು ಹರ್ಷ ವ್ಯಕ್ತಪಡಿಸಿದರು.

ಕಾರ್ಯಕ್ರಮದ ವೇದಿಕೆಯಲ್ಲಿ ಗೌರವಾನ್ವಿತ ಅತಿಥಿಗಳಾದ ನಾರಾ ಸೂರ್ಯನಾರಾಯಣ ರೆಡ್ಡಿ ಅವರು ಮಾತನಾಡಿ, ಇಂಡಿಯನ್ ಮೆಡಿಕಲ್ ಅಸೋಸಿಯೇಷನ್ ಭವನದ ಕಟ್ಟಡ ನಿರ್ಮಾಣಕ್ಕಾಗಿ 50 ಲಕ್ಷ ರೂಪಾಯಿಗಳನ್ನು ನೀಡುವುದಾಗಿ ತಿಳಿಸಿ, ಈ ಕಟ್ಟಡ ಕಾಮಗಾರಿ ಅತಿ ಶೀಘ್ರದಲ್ಲಿ ಪೂರ್ಣಗೊಳಿಸಬೇಕು ಹಾಗೂ ಇದರಲ್ಲಿ ಪ್ರತಿಯೊಬ್ಬ ವೈದ್ಯರ ತಮ್ಮಿಂದ ಸಾಧ್ಯವಾದಷ್ಟು ಕಟ್ಟಡ ನಿರ್ಮಾಣಕ್ಕಾಗಿ ಸಹಾಯ ಮಾಡಿ ಎಂದು ಕರೆ ನೀಡಿ ವೇದಿಕೆ ಹಂಚಿಕೊಂಡರು.

ತದನಂತರ ಐಎಂಎ ಭವನಕ್ಕೆ ಉದಾರ ಹೃದಯದಿಂದ ಭೂಮಿಯನ್ನು ಕಿಂಚಿತ್ತು ಲಾಭ ಬಯಸದೆ ದಾನ ಮಾಡಿದ ನಾರಾ ಪ್ರತಾಪ್ ರೆಡ್ಡಿಯವರು ವೇದಿಕೆಯನ್ನು ಹಂಚಿಕೊಂಡು, ಹರ್ಷ ವ್ಯಕ್ತಪಡಿಸಿ ನಾರಾ ಶೈಲಜಾ ರೆಡ್ಡಿ ಅವರ ಜೊತೆಗೆ ಸನ್ಮಾನವನ್ನು ಸ್ವೀಕರಿಸಿದರು.

ಐಎಂಎ ಭವನದ ಕಟ್ಟಡಕ್ಕೆ ಕಾಂಪೌಂಡ್ ಕಟ್ಟಿಸಿ ಕೊಡುತ್ತಿರುವ ಗೋಪಾಲ್ ರೆಡ್ಡಿ ಅವರಿಗೆ ಐಎಂಎ ಶಾಖೆಯ ಬಳ್ಳಾರಿ ಜಿಲ್ಲಾ ಅಧ್ಯಕ್ಷರು ಶ್ರೀನಿವಾಸಲು ಅವರು ವಿಶೇಷವಾಗಿ ಸನ್ಮಾನಿಸಿ ಬಂದಂತ ಗಣ್ಯರಿಗೆ ಅಭಿನಂದನೆಗಳನ್ನು ತಿಳಿಸಿ ಕಾರ್ಯಕ್ರಮದ ಅಂತಿಮದಲ್ಲಿ ಉಪಸ್ಥಿತರಿದ್ದರೆಲ್ಲರೂ ರಾಷ್ಟ್ರಗೀತೆಯನ್ನು ಹಾಡುವ ಮೂಲಕ ಭೂಮಿ ಪೂಜೆ ಮತ್ತು ಶಿಲನ್ಯಾಸದ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಿದರು.

ಈ ಸಂದರ್ಭದಲ್ಲಿ ಐಎಂಎ ಜಿಲ್ಲಾಧ್ಯಕ್ಷರಾದ ಶ್ರೀನಿವಾಸ್, ವಿಮ್ಸ್ ನಿರ್ದೇಶಕ ಗಂಗಾಧರ ಗೌಡ, ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಬಸವ ರೆಡ್ಡಿ, ಅಶ್ವಿನಿ ಕುಮಾರ್ ಸಿಂಗ್, ಸೋಮನಾಥ್, ಮಾಣಿಕ್ ರಾವ್ ತಿಲಕರಣಿ, ರಾಘವೇಂದ್ರ ಸೇರಿದಂತೆ ಹಲವಾರು ವೈದ್ಯರು ಉಪಸ್ಥಿತರಿದ್ದರು.

## ಬಳ್ಳಾರಿಯಲ್ಲಿ ಸಾಹಿತ್ಯ ಸಮ್ಮೇಳನ ಸಂಘಟನೆಗಳ ಒಕ್ಕೂಟದಿಂದ ಸಂಭ್ರಮಾಚರಣೆ




ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಡಿ.25: ಮುಂದಿನ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಬಳ್ಳಾರಿಯಲ್ಲಿ ನಡೆಸಬೇಕೆಂದು ಘೋಷಿಸಿದ ಹಿನ್ನೆಲೆಯಲ್ಲಿ ನಗರದ ಎಲ್ಲಾ ಕನ್ನಡಪರಸಂಘಟನೆಗಳು ರಾಯಲ್ ವೃತ್ತದಲ್ಲಿ ಸಂಭ್ರಮಾಚರಣೆಯನ್ನು ನಡೆಸಿದರು. ಈ ಸಂದರ್ಭದಲ್ಲಿ ನೆರೆದ ಕನ್ನಡಿಗರು ಸಿಹಿ ಹಂಚಿ ಸಂಭ್ರಮಿಸಿ ರಾಜ್ಯದ ಅನೇಕ ಜಿಲ್ಲೆಗಳು ಸಮ್ಮೇಳನದ ಅತಿಥ್ಯಕ್ಕೆ ಒಲವು ತೋರಿಸಿರು ಆದರೂ ಸಹ 66 ವರ್ಷಗಳ ನಂತರ ಮತ್ತೆ ಬಳ್ಳಾರಿಗೆ ಈ ಸಮ್ಮೇಳನದ ಅವಕಾಶ ನೀಡಿರುವುದು ಬಳ್ಳಾರಿ ಜಿಲ್ಲೆಯ ಎಲ್ಲಾ ಕನ್ನಡಪರ ಮನಸ್ಸುಗಳಿಗೆ ಅತ್ಯಂತ ಸಂತೋಷವನ್ನುಂಟು ಮಾಡಿದೆ ಎಂದು ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಿಷ್ಠಿ ರುದ್ರಪ್ಪ ತಿಳಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ಏಕೀಕರಣ ರಕ್ಷಣಾ ಸೇನೆ ಸಮಿತಿಯ ಪಿ.ಶೇಖರ್, ಪಾಲಿಕೆ ಸದಸ್ಯ ಪಿ.ಗಾದೆಪ್ಪ, ಉಪ್ಪಾರ ಸಮಾಜದ ರಾಜ್ಯ ಉಪಾಧ್ಯಕ್ಷ ಸಿದ್ದೇಶ್ ಊಳೂರು ಸೇರಿದಂತೆ ಹಲವಾರು ಸಂಘಟನೆಯ ಮುಖಂಡರು ಉಪಸ್ಥಿತರಿದ್ದರು.

## ಡಿಜಿಟಲ್ ಅರೆಸ್ಟ್ ಇಲ್ಲವೇ ಇಲ್ಲ ಸಾಮಾನ್ಯ ಜ್ಞಾನ ಬೇಕು



ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು,ಡಿ.25-ದೇಶದ ಕಾನೂನು, ಸಂವಿಧಾನದಲ್ಲಿ ಡಿಜಿಟಲ್ ಅರೆಸ್ಟ್ ಎನ್ನುವ ವಿಧಾನವೇ ಇಲ್ಲ. ಮುಂಬಯಿ ಸೇರಿದಂತೆ ಎಲ್ಲಿಯೂ ಯಾವುದೇ ತನಿಖಾ ಸಂಸ್ಥೆಗಳು ಡಿಜಿಟಲ್ ಅರೆಸ್ಟ್ ಮಾಡುವುದಿಲ್ಲ ಇದರ ಬಗ್ಗೆ ಜನರಿಗೆ ಸಾಮಾನ್ಯ ಜ್ಞಾನ ಇರಬೇಕಾಗುತ್ತದೆ ಎಂದು ನಗರ ಪೊಲೀಸ್ ಆಯುಕ್ತ ಬಿ.ದಯಾನಂದ್ ತಿಳಿಸಿದ್ದಾರೆ.

ಯಾವುದೇ ತನಿಖಾ ಸಂಸ್ಥೆಗಳು ಡಿಜಿಟಲ್ ಅರೆಸ್ಟ್ ಮಾಡುವುದಿಲ್ಲ. ಡಿಜಿಟಲ್ ಅರೆಸ್ಟ್ ಬೆದರಿಕೆ ಕರೆಗಳ ಕುರಿತು ಸಾರ್ವಜನಿಕರು ತಿಳಿದುಕೊಳ್ಳಬೇಕು ಇಲ್ಲವೇ ಹತ್ತಿರದ ಪೊಲೀಸ್ ಠಾಣೆಗಳಿಗೆ ಮಾಹಿತಿಯನ್ನು ನೀಡಬೇಕು ಎಂದು ಕಮೀಷನರ್ ತಿಳಿಸಿದರು.

ಕಾನೂನಿನ ಪ್ರಕಾರ, ಯಾವುದೇ ವ್ಯಕ್ತಿಗೆ ನೋಟಿಸ್ ನೀಡಿ ಅಥವಾ ನೇರವಾಗಿ ಅವರನ್ನು ಭೇಟಿಯಾಗಿ ವಶಕ್ಕೆ ಪಡೆದು ಬಳಿಕ ಬಂಧಿಸುವ ಪದ್ಧತಿಯಿದೆ. ಬಂಧಿಸಿದ ಆರೋಪಿಯನ್ನು 24 ಗಂಟೆಗಳೊಳಗಾಗಿ ನ್ಯಾಯಾಲಯದ ಮುಂದೆ ಹಾಜರುಪಡಿಸಬೇಕು ಎಂಬ ಕಠಿಣ ಕಾನೂನಿದೆ. ಆದ-ರೆ ಡಿಜಿಟಲ್ ಅರೆಸ್ಟ್ ಎಂಬ ಪದ್ಧತಿ ನಮ್ಮ ಕಾನೂನಿನಲ್ಲಿ ಇಲ್ಲ ಎಂದು ಸ್ಪಷ್ಟಪಡಿಸಿದರು.

ಸಾರ್ವಜನಿಕರು ಸ್ವಲ್ಪ ಮಟ್ಟಿನ ಕಾನೂನಿನ ಅರಿವು ಹೊಂದಿದರೆ ವಂಚಕರ ಜಾಲದಲ್ಲಿ ಸಿಲುಕುವ ಪ್ರಮೇಯವೇ ಬರುವುದಿಲ್ಲ. ಅನುಮಾನಾಸ್ಪದ ಕರೆಗಳು ಬಂದಾಗ ಸಮೀಪದ ಪೊಲೀಸ್ ಠಾಣೆಗೆ ಒಂದು ಕರೆ ಮಾಡಿದರೂ ಸಹ ಸೂಕ್ತ ಮಾಹಿತಿ ನೀಡಲಾಗುತ್ತದೆ ಎಂದು ತಿಳಿಸಿದರು. **ಸ್ಥಳೀಯ ಪೊಲೀಸರಿಗೆ ತಿಳಿಸಿ:**

ಸರ್ಕಾರದ ಯಾವುದೇ ತನಿಖಾ ಸಂಸ್ಥೆಗಳು ವಿಡಿಯೋ ಕರೆಯ ಮೂಲಕ ತನಿಖೆ ಕೈಗೊಳ್ಳುವುದಿಲ್ಲ. ಮೊದಲು ನೋಟಿಸ್ ನೀಡಿ ಇಲ್ಲವೇ ನೇರವಾಗಿ ಬಂದು ತನಿಖಾ ಸಂಸ್ಥೆಗಳು ತನಿಖೆ ನಡೆಸುತ್ತವೆ. ಆದ್ದರಿಂದ ಮೊಬೈಲ್ ಕರೆಗಳ ಮೂಲಕ ಯಾರಾದರೂ ಸಂಪರ್ಕಿಸಿ ಡಿಜಿಟಲ್ ಅರೆಸ್ಟ್ ಎಂದು ಬೆದರಿಕೆ ಹಾಕಿದರೆ ಜನರು ಎಚ್ಚೆತ್ತುಕೊಂಡು ಸ್ಥಳೀಯ ಪೊಲೀಸರಿಗೆ ತಿಳಿಸುವುದು ಸೂಕ್ತ" ಎಂದರು. **109 ಕೋಟಿ ವಂಚಕರ ಪಾಲು!** 2024ರ ನವೆಂಬರ್ ಅಂತ್ಯಕ್ಕೆ ರಾಜ್ಯದಲ್ಲಿ ಒಟ್ಟು 641 ಡಿಜಿಟಲ್ ಅರೆಸ್ಟ್ ಪ್ರಕರಣಗಳು ವರದಿಯಾಗಿದ್ದು, 109 ಕೋಟಿ ರೂ. ವಂಚಕರ ಪಾಲಾಗಿದೆ. ಆ ಪೈಕಿ ಬೆಂಗಳೂರಲ್ಲೇ 480 ಪ್ರಕರಣಗಳು ವರದಿಯಾಗಿದ್ದು, 42.4 ಕೊಟಿ ರೂ ಹಣವನ್ನು ವಂಚಕರು ಲೂಟಿ ಮಾಡಿದ್ದಾರೆ. ವಂಚಕರ ಪಾಲಾದ ಹಣದಲ್ಲಿ ಕೇವಲ 9 ಕೋಟಿ ರೂ ಮಾತ್ರ ವಾಪಸ್ ಜಪ್ತಿ ಮಾಡುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

ಟೆಕ್ಕಿಗೆ 11 ಕೋಟಿ ವಂಚನೆ: ಇತ್ತೀಚಿಗೆ ನಗರದ ಸಾಫ್ಟ್‌ವೇರ್ ಉದ್ಯೋಗಿಯೊಬ್ಬರಿಗೆ ವಂಚಕರು ಬೆದರಿಸಿ ಒಂದು ತಿಂಗಳ ಕಾಲ ಡಿಜಿಟಲ್ ಅರೆಸ್ಟ್ ಜಾಲದಲ್ಲಿ ಬೀಳಿಸಿ, ಅವರಿಂದ 11.83 ಕೋಟಿ ರೂ ವರ್ಗಾಯಿಸಿಕೊಂಡು ಮೋಸ ಮಾಡಿರುವ ಘಟನೆ ನಡೆದಿತ್ತು.

ಹಣ ಕಳೆದುಕೊಂಡ ವಿಜಯ್ ಕುಮಾರ್ ಎಂಬವರು ನೀಡಿದ್ದ ದೂರಿನನ್ವಯ ಈಶಾನ್ಯ ವಿಭಾಗದ ಸಿಇಎನ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ಇಲ್ಲಿಯವರೆಗೆ ರಾಜ್ಯದಲ್ಲಿ ವರದಿಯಾದ ಅತ್ಯಧಿಕ ಮೊತ್ತ ಕಳೆದುಕೊಂಡ ಡಿಜಿಟಲ್ ಅರೆಸ್ಟ್ ಪ್ರಕರಣ ಇದಾಗಿದೆ ಎಂದು ಹೇಳಿದರು.

# ಕೊರತೆಗಳು ನೆಪವಾಗದೇ ಜೀವನ ಪಥವಾಗಬೇಕು-ಸಿದ್ದಲಿಂಗಪ್ಪ ಬೀಳಗಿ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಡಿ.26-ಜೀವನದಲ್ಲಿ ಎದುರಾಗುವ ಸಮಸ್ಯೆ ಮತ್ತು ಕೊರತೆಗಳನ್ನು ಸವಾಲಿನಂತೆ ಎದುರಿಸುವವರು ಮಾತ್ರ ಸಾಧಕರೆನಿಸಿಕೊಳ್ಳಲು ಸಾಧ್ಯ ಎಂದು ನಿವೃತ್ತ ಉಪನ್ಯಾಸಕ, ಹಿರಿಯ ಲೇಖಕ ಸಿದ್ದಲಿಂಗಪ್ಪ ಬೀಳಗಿ ಅಭಿಪ್ರಾಯ ಪಟ್ಟಿದ್ದಾರೆ.

ಜಿಲ್ಲೆಯ ಹುನಗುಂದ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಏರ್ಪಡಿಸಲಾಗಿದ್ದ ಪಾಲಕರ ಸಭೆ ಮತ್ತು ಫಲಿತಾಂಶ ಸುಧಾರಣೆ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿ ಮಾತನಾಡಿದ ಅವರು, ಶಿಸ್ತು ಬದ್ಧತೆ ಮತ್ತು ಗುರಿ ಇಲ್ಲದ ಜೀವನ ಅರ್ಥಹೀನವಾದುದಾಗಿದ್ದು ಸ್ಪಷ್ಟ ಗುರಿ ಮತ್ತು ನಿರಂತರ ಅಧ್ಯಯನದಿಂದ ನಾವಿಟ್ಟುಕೊಂಡ ಗುರಿ ತಲುಪಬಹುದು ಎಂದರು.

ಪರೀಕ್ಷೆಗಳನ್ನು ಭಯದಿಂದ ಎದುರಿಸುವ ಬದಲು ಹಬ್ಬದಂತೆ ಸ್ವಾಗತಿಸಬೇಕು. ಕೀಳರಿಮೆ ಕಿತ್ತೆಸೆದಾಗ ಮಾತ್ರ ಯಶಸ್ಸಿನ ಶಿಖರವನ್ನು ಏರಬಹುದು. ಮಕ್ಕಳ ಶೈಕ್ಷಣಿಕ ಪ್ರಗತಿಯಲ್ಲಿ ಪಾಲಕರ ಪಾತ್ರವೂ ಮಹತ್ತರವಾಗಿದ್ದು ಪಾಲಕರಾದವರು ಮಕ್ಕಳ ಅಧ್ಯಯನಕ್ಕೆ ಪೂರಕವಾದ ವಾತಾವರಣ ಕಲ್ಪಿಸಿಕೊಡುವುದರೊಂದಿಗೆ ಅವರ ಫಲಿತಾಂಶ ಹೆಚ್ಚಳಕ್ಕೆ ಸಹಕರಿಸಬೇಕೆಂದರು.

ಕಲಾ ವಿಭಾಗದ ಪರವಾಗಿ ಛಾಯಾ ಪುರಂದರೆ, ವಿಜ್ಞಾನ ವಿಭಾಗದ ಪರವಾಗಿ ಎಚ್.ಟಿ.ಅಗಸಿಮುಂದಿನ ಮತ್ತು ವಾಣಿಜ್ಯ ವಿಭಾಗದ ಪರವಾಗಿ ಶ್ರೀಧರ ಕಾವಲಿ ವಿದ್ಯಾರ್ಥಿಗಳ ಪ್ರಗತಿ ಕುರಿತು ಮಾತನಾಡಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾಲೇಜು ಅಭಿವೃದ್ಧಿ ಸಮಿತಿಯ ಹಿರಿಯ ಸದಸ್ಯ ಚಂದ್ರಶೇಖರ ಚಟ್ಟಿಹಾಳ ಅವರು, ವಿದ್ಯಾರ್ಥಿ ಜೀವನ ಅದರಲ್ಲೂ ಪಿಯುಸಿ ಹಂತದಲ್ಲಿರುವ ತಾವು ಸತತ ಅಧ್ಯಯನ ಮಾಡಿ ತಮ್ಮ ಬದುಕನ್ನು ರೂಪಿಸಿಕೊಳ್ಳಬೇಕೆಂದರು.

ಪಾಲಕರ ಪರವಾಗಿ ಜಗದೀಶ ಹೊಸಮನಿ, ರಾಜಮುನ್ನಿ ಕಡಿವಾಲ ಮತ್ತು ಹನಮಪ್ಪ ಕಮತರ ವಿದ್ಯಾರ್ಥಿಗಳ ಪರವಾಗಿ ವಾಹೀದ್ ಕಡಿವಾಲ ಮಾತನಾಡಿದರು. ಕಾಲೇಜು ಅಭಿವೃದ್ಧಿ ಸಮಿತಿಯ ಸದಸ್ಯರಾದ ಮುತ್ತಣ್ಣ ಗಂಜಿಹಾಳ, ಅಶ್ವಿನಿ ಹುಚನೂರ, ಉಪನ್ಯಾಸಕಿ ಛಾಯಾ ಪುರಂದರೆ, ಪಿ.ಬಿ.ಧುತ್ತರಗಿ ಟ್ರಸ್ಟಿನ ಅಧ್ಯಕ್ಷ ಎಸ್ಕೆ.ಕೊನೆಸಾಗರ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಪಿ.ಬಿ.ಧುತ್ತರಗಿ ಟ್ರಸ್ಟಿಗೆ ಅಧ್ಯಕ್ಷರಾಗಿ ಆಯ್ಕೆಯಾದ ಎಸ್.ಕೆ.ಕೊನೆಸಾಗರ ಮತ್ತು ವಿಶೇಷ ಉಪನ್ಯಾಸ ನೀಡಿದ ಸಿದ್ದಲಿಂಗಪ್ಪ ಬೀಳಗಿ ಅವರನ್ನು ಕಾಲೇಜಿನ ಪರವಾಗಿ ಸನ್ಮಾನಿಸಲಾಯಿತು.

ಸೇವಂತಿ ಬೆಣಗಿ ಪ್ರಾರ್ಥಿಸಿದರು, ಪ್ರಭಾರ ಪ್ರಾಚಾರ್ಯ ಶರಣಪ್ಪ ಹೂಲಗೇರಿ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಐ.ಎಚ್.ನಾಯಕ ವಂದಿಸಿದರು. ಡಾ.ಎನ್.ವಾಯ್.ನದಾಫ್ ನಿರೂಪಿಸಿದರು.

# ಧುತ್ತರಗಿ ಟ್ರಸ್ಟ್ ಅಧ್ಯಕ್ಷ ಕೊನೆಸಾಗರಗೆ ಸನ್ಮಾನ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಡಿ.26-ಪಿ.ಬಿ.ಧುತ್ತರಗಿ ಟ್ರಸ್ಟ್‌ನ ನೂತನ ಅಧ್ಯಕ್ಷ ಎಸ್.ಕೆ.ಕೊನೆಸಾಗರ ಅವರನ್ನು ಜಿಲ್ಲೆಯ ಹುನಗುಂದ ನಗರದ ಲೇಖಕರ ಬಳಗದಿಂದ ಸತ್ಕರಿಸಲಾಯಿತು. ಹಿರಿಯ ಲೇಖಕ ಸಿದ್ದಲಿಂಗಪ್ಪ ಬೀಳಗಿ, ಶರಣಪ್ಪ ಹೂಲಗೇರಿ ಮತ್ತು ಲೇಖಕಿ ದಾನೇಶ್ವರಿ ಸಾರಂಗಮಠ ಅಭಿನಂದಿ ಮಾತನಾಡಿ, ತಾಲೂಕಿನ ಹಿರಿಯ ಲೇಖಕ ಮತ್ತು ರಂಗಕರ್ಮಿಯಾದ ಕೊನೆಸಾಗರ ಅವರು ಧುತ್ತರಗಿ ಅವರ ಸಮೀಪವರ್ತಿಗಳು, ಕಳೆದ ನಾಲ್ಕು ದಶಕಗಳಿಂದ ರಂಗ ಸಂಘಟನೆ ಮಾಡಿದ ಅನುಭವ ಉಳ್ಳವರು. ಇವರಿಂದ ಟ್ರಸ್ಟ್ ಚಟುವಟಿಕೆಗಳು ಸಮರ್ಪಕವಾಗಿ ನಡೆಯುತ್ತವೆ ಎಂದು ಶುಭ ಹಾರೈಸಿದರು.

ಲೇಖಕ ಬಳಗದ ಡಾ.ಶ್ರೀಶೈಲ ಗೋಲಗೊಂಡ, ಡಾ.ಮುರ್ತುಜಾ ಒಂಟಿ, ಬಸವರಾಜ ಬನ್ನಟ್ಟಿ, ಸಿ.ಎಂ.ತುಂಬಗಿ, ವ್ಯಾಸತೀರ್ಥ ಜೋಶಿ, ಎಂ.ಡಿ.ಚಿತ್ತರಗಿ, ಮಹಾಂತೇಶ ಮಠ, ಶಿವಬಸವ ಅಂಗಡಿ, ಜಗದೀಶ ಹಾದಿಮನಿ, ಶಶಿ ದರಗಾದ, ಸುಮಿತ್ರಾ ಚಿನ್ನಾಪುರ, ಭಾರತಿ ಮಡಿವಾಳರ ಮತ್ತು ಎಸ್.ಎಚ್.ಮುಕ್ಕಣ್ಣವರ ಉಪಸ್ಥಿತರಿದ್ದರು.

# ಸಾರ್ವಜನಿಕ ಭವನಗಳು ಸಾಮಾಜಿಕ ಕಾರ್ಯಕ್ಕೆ ಬಳಕೆಯಾಗಲಿ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಡಿ.26-ಸಾರ್ವಜನಿಕರ ಉಪಯೋಗಕ್ಕಾಗಿ ನಿರ್ಮಿಸಲಾಗುವ ಸಮುದಾಯ ಭವನಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಸಂಸದ ಪಿ.ಸಿ.ಗದ್ದಿಗೌಡರ ಹೇಳಿದ್ದಾರೆ.

ತಾಲೂಕಿನ ಹಳ್ಳೂರ ಗ್ರಾಮದಲ್ಲಿ ಬುಧವಾರ ಜರುಗಿದ ಜನಪ್ರತಿನಿಧಿಗಳ ಅನುದಾನದಲ್ಲಿ 18 ಲಕ್ಷ ರೂ.ಗಳ ವೆಚ್ಚದಲ್ಲಿ ನಿರ್ಮಿಸಲಾಗಿರುವ ಸಿದ್ದೇಶ್ವರ ಸಾರ್ವಜನಿಕ ಸಮುದಾಯ ಭವನ(ಕಲ್ಯಾಣ ಮಂಟಪ)ದ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಅವರು ಮಾತನಾಡಿದರು.

ಮದುವೆ-ಮುಂಜಿವೆ, ಸಭೆ, ಸಮಾರಂಭಗಳನ್ನು ನಡೆಸಲು ಸಮುದಾಯ ಭವನಗಳು ಬಹಳಷ್ಟು ಉಪಯೋಗವಾಗುತ್ತವೆ. ಹೀಗಾಗಿ ಅವುಗಳನ್ನು ಸಾರ್ವಜನಿಕರು ಶುಚಿಯಾಗಿಟ್ಟುಕೊಂಡು ಸಮಾಜ ಉಪಯೋಗಿ ಕಾರ್ಯಗಳಿಗೆ ಬಳಕೆ ಮಾಡಿಕೊಳ್ಳಬೇಕು ಎಂದು ಗದ್ದಿಗೌಡರ ಹೇಳಿದರು.


ಸಮುದಾಯ ಭವನ ಉದ್ಘಾಟಿಸಿದ ಮಾಜಿ ಶಾಸಕ ವೀರಣ್ಣ ಚರಂತಿಮಠ ಮಾತನಾಡಿ, ಗ್ರಾಮೀಣ ಪ್ರದೇಶಗಳಲ್ಲಿ ಸಾಮಾಜಿಕ ಕಾರ್ಯಕ್ರಮಗಳನ್ನು ನಡೆಸಲು ಸಮುದಾಯ ಭವನಗಳು ಸಹಕಾರಿಯಾಗುತ್ತವೆ. ಯಾವುದೇ ಕಾರಣಕ್ಕೂ ಅವುಗಳ ದುರುಪಯೋಗವಾಗಬಾರದು ಎಂದರು.

ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಮಾತನಾಡಿ, ಸರ್ಕಾರ ಹಾಗೂ ಜನಪ್ರತಿನಿಧಿಗಳ ಅನುದಾನದಲ್ಲಿ ನಿರ್ಮಿಸಲಾಗುವ ಸಮುದಾಯ ಭವನಗಳನ್ನು ಸಾರ್ವಜನಿಕರು ತಮ್ಮ ಸ್ವಂತ ಆಸ್ತಿಯಂತೆ ರಕ್ಷಿಸಿ ಸದುಪಯೋಗಪಡಿಸಿಕೊಳ್ಳಬೇಕು ಎಂದು ಹೇಳಿದರು.

ಕೊಣ್ಣೂರ-ಹಳ್ಳೂರಿನ ಡಾ.ವಿಶ್ವಪ್ರಭು ಶಿವಾಚಾರ್ಯ ಸ್ವಾಮೀಜಿ, ಬಸವಲಿಂಗ ಸ್ವಾಮೀಜಿ ಹಾಗೂ ಪೂಜ್ಯ ಗ್ಯಾನಪ್ಪಜ್ಜನವರು ಸಾನಿಧ್ಯ ವಹಿಸಿದ್ದರು. ಗ್ರಾಪಂ ಅಧ್ಯಕ್ಷೆ ಮಲ್ಲವ್ವ ಮಾದರ, ತಾಪಂ ಮಾಜಿ ಸದಸ್ಯರಾದ ವೆಂಕಟೇಶ ಕುಲಕರ್ಣಿ ಹಾಗೂ ಆರ್.ಪಿ.ಸುನಗದ, ಗ್ರಾಪಂ ಸದಸ್ಯ ಬಿ.ಟಿ.ಮೇಟಿ, ಎಂ.ಎಂ.ದೊಡ್ಡನಗೌಡರ, ಮಲ್ಲನಗೌಡ ಅರೆಸೀಮಿ, ಸುರೇಶ ಕೊಣ್ಣೂರ, ರಾಜು ಮುದೇನೂರ, ಎಸ್.ಎಸ್.ಜಿಗಳೂರ ಮತ್ತಿತರರು ಅತಿಥಿಗಳಾಗಿದ್ದರು.

### ಸತ್ಯಾತ್ಮತೀರ್ಥರಿಗೆ ವಿಪ್ರ ಸಮಾಜದಿಂದ ದೇಣಿಗೆ ಹಸ್ತಾಂತರ

# ಧರ್ಮ ಬೆಳೆಸಲು ಸಂಕುಚಿತ ಮನೋಭಾವದಿಂದ ಹೊರಬನ್ನಿ




ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ: ಮನೆ, ಮನೆಗಳಲ್ಲಿ ಧರ್ಮ ಬೆಳೆಯಬೇಕೆಂದರೆ ಅದರ ಬಗ್ಗೆ ಇರುವ ಸಂಕುಚಿತ ಮನೋಭಾವದಿಂದ ಹೊರಬರಬೇಕೆಂದು ಯುವಾತ್ಮ ಸಂಘಟನೆಯ ಮಾರ್ಗದರ್ಶಕ ಪಂ.ವಿದ್ಯಾಧೀಶಾಚಾರ್ಯ ಗುತ್ತಲ ಹೇಳಿದರು.

ಶ್ರೀಸತ್ಯಾತ್ಮತೀರ್ಥ ಶ್ರೀಪಾದಂಗಳವರ ಬಾಗಲಕೋಟೆ ಭೇಟಿ ಪ್ರಯುಕ್ತ ಶ್ರೀಗಳ ಉಪಸ್ಥಿತಿಯಲ್ಲಿ ಜರುಗಿದ ಯುವಗೋಷ್ಠಿಯಲ್ಲಿ ಅವರು ವಿಶೇಷ ಪ್ರವಚನ ನೀಡಿ, ಮಕ್ಕಳು, ಮೊಮ್ಮಕ್ಕಳಲ್ಲಿ ಧರ್ಮದ ಬಗ್ಗೆ ಭಯ ಹುಟ್ಟಿಸುವ ಕೆಲಸವಾಗಬಾರದು ಅದರ ಬದಲಾಗಿ ಧರ್ಮಾಚರಣೆಗೆ ಇರುವ ಸುಲಭದ ಉಪಾಯಗಳ ಬಗ್ಗೆ ತಿಳಿಹೇಳಬೇಕೆಂದು ಕರೆ ನೀಡಿದರು.

ಧರ್ಮವನ್ನು ಇಂದು ಸಂಕುಚಿತ ಭಾವದಿಂದ ಕಾಣಲಾಗುತ್ತಿದೆ. ಪೂಜೆ ಮಾಡುವುದೊಂದೇ ಧರ್ಮವಲ್ಲ ಸಮಾಜದ ಅಭಿವೃದ್ಧಿ, ಕಲ್ಯಾಣ, ಪರೋಪಕಾರದ ಗುಣಗಳನ್ನು ಮೈಗೂಡಿಸಿಕೊಳ್ಳಬೇಕೆಂದು ಅವರು ಸಲಹೆ ಮಾಡಿದಲ್ಲದೇ, ಮನೆಗಳಲ್ಲಿ ನಿತ್ಯ ಸಂಧ್ಯಾವಂದನೆ ಮಾಡಬೇಕು. ಅದರಿಂದ ದೂರವಾಗಿ ದೇವರು ಯಾಕೆ ಬೇಕು ಎಂದು ಕೇಳುವಷ್ಟರ ಮಟ್ಟಿಗೆ ಸಮಾಜ ಸಂಕುಚಿತ ಭಾವಕ್ಕೆ ತೆರಳಬಾರದು. ಧರ್ಮ ರಕ್ಷಣೆಗೆ ಯುವಶಕ್ತಿಯ ಲೇಪನವಾಗಬೇಕಿದೆ ಎಂದರು.

ಉತ್ತರಾದಿಮಠಾಧೀಶರಾದ ಶ್ರೀಸತ್ಯಾತ್ಮತೀರ್ಥ ಶ್ರೀಪಾದಂಗಳವರು ಭಾಗವತದ ಕುರಿತಾಗಿ ಪ್ರವಚನ ನೀಡಿದರು. ಆತ್ಮಾಶ್ರಮದ ರಾಘವೇಂದ್ರಾಚಾರ್ಯ ರಾಚೂರಿ ಅವರೂ ಪ್ರವಚನ ನೀಡಿದರು. ಶ್ರೀಗಳಿಗೆ ಬಾಗಲಕೋಟೆ ವಿಪ್ರ ಸಮಾಜದಿಂದ ಸಂಗ್ರಹಿಸಿದ ದೇಣಿಗೆಯನ್ನು ಸಮರ್ಪಿಸಲಾಯಿತು.

ಆನಂದತೀರ್ಥಾಚಾರ್ಯ ನಾಗಸಂಪಿಗೆ, ರಘೋತ್ತಮಾಚಾರ್ಯ ನಾಗಸಂಪಿಗೆ, ವಿಜಯೇಂದ್ರಾಚಾರ್ಯ ಕಂಚಿ, ವಾದಿರಾಜಾಚಾರ್ಯ ಕಂಚಿ, ಭೀಮಸೇನಾಚಾರ್ಯ ಪಾಂಡುರಂಗಿ, ಬಿಂದುಮಾಧವಾಚಾರ್ಯ ನಾಗಸಂಪಿಗೆ, ವಿಜಯೇಂದ್ರಾಚಾರ್ಯ ನಾಗಸಂಪಿಗೆ, ವಿಜಯೇಂದ್ರಾಚಾರ್ಯ ಯತ್ನಟ್ಟಿ, ನವೀನಾಚಾರ್ಯ ಜೋಶಿ, ಆದಿಶೇಷಾಚಾರ್ಯ ಯಲಗೂರ, ಉಡುಪಿ ಕೃಷ್ಣಾಚಾರ್ಯ ಗುಮಾಸ್ತೆ, ಸಮಾಜದ ಮುಖಂಡರು ಉಪಸ್ಥಿತರಿದ್ದರು.

# ಹಳ್ಳೂರಿನಲ್ಲಿ ಜಂಗೀ ಕುಸ್ತಿ-ಗಜಾನನಿಗೆ 10 ತೊಲಿ ಬೆಳ್ಳಿ ಕಡಗ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಡಿ.26-ತಾಲೂಕಿನ ಸುಕ್ಷೇತ್ರ ಹಳ್ಳೂರ ಗ್ರಾಮದಲ್ಲಿ ನಂದಿ ಬಸವಣ್ಣ ದೇವರ ಜಾತ್ರೆಯ ಅಂಗವಾಗಿ ಬುಧವಾರ ಜರುಗಿದ ಜಂಗೀ ಕುಸ್ತಿಯಲ್ಲಿ ಹನಗಂಡಿಯ ಗಜಾನನ ಅಂತಿಮ ಕುಸ್ತಿಯಲ್ಲಿ ಪ್ರಥಮ ಸ್ಥಾನ ಪಡೆದು 10 ತೊಲಿ ಬೆಳ್ಳಿ ಕಡಗ ತನ್ನದಾಗಿಸಿಕೊಂಡನು.

ದೇವಸ್ಥಾನದ ಬಳಿಯ ಹೊಲದಲ್ಲಿ ಮಾಡಲಾಗಿದ್ದ ಕುಸ್ತಿಯ ಕಣದಲ್ಲಿ ಬಾಲಕರಿಂದ ಹಿಡಿದು ದೊಡ್ಡವರವರೆಗೂ ಕುಸ್ತಿ ಪಟುಗಳು ತಮ್ಮ ಎದುರಾಳಿ ಪೈಲ್ವಾನರ ಜೊತೆ ಕುಸ್ತಿ ಕಾಳಗ ನಡೆಸಿ ಪ್ರೇಕ್ಷಕರನ್ನು ರಂಜಿಸಿದರು.

ರಾಜ್ಯ ಹಾಗೂ ಮಹಾರಾಷ್ಟ್ರದ ಕುಸ್ತಿ ಪೈಲ್ವಾನರು ಕಾಳಗದಲ್ಲಿ ಭಾಗವಹಿಸಿದ್ದರು. ಕೊನೆಯ ಕುಸ್ತಿಯಲ್ಲಿ ಹನಗಂಡಿಯ ಗಜಾನನ ಜಡ್ರಾಮಕುಂಟಿಯ ಪೈಲ್ವಾನ ಮಾಳಿಂಗರಾಯನನ್ನು ಪಟ್ಟುಹಾಕಿ ನೆಲಕ್ಕುರುಳಿಸಿ ಜಯದ ಕೇಕೆ ಹಾಕಿದನು. ಜಯ ಸಾಧಿಸಿದ ಗಜಾನನಿಗೆ ಬಸವಣ್ಣ ದೇವಸ್ಥಾನ ಸಮಿತಿಯಿಂದ 10 ತೊಲಿ ಬೆಳ್ಳಿಯ ಕಡಗ ಹಾಗೂ ನಗದ ಬಹುಮಾನ ನೀಡಲಾಯಿತು.

ಮಹಾರಾಷ್ಟ್ರದ ಜತ್ತ, ಬೆಳಗಾವಿ, ದಾವಣಗೆರೆ, ಚಿಕ್ಕೋಡಿ, ಇಂಡಿ, ಮಹಾಲಿಂಗಪುರ, ತೇರದಾಳ, ಚಡಚಣ ಮತ್ತಿತರೆಡೆಗಳಿಂದ ನೂರಾರು ಕುಸ್ತಿ ಪೈಲ್ವಾನರು ಆಗಮಿಸಿ ಕುಸ್ತಿಯಲ್ಲಿ ಪಾಲ್ಗೊಂಡರು.

ದೇವಸ್ಥಾನ ಸಮಿತಿಯ ಅಧ್ಯಕ್ಷ ಮಹಾಂತೇಶ ಮಣಿನಾಗರ, ಉಪಾಧ್ಯಕ್ಷ ವಿನೋದ ಮೇಟಿ, ಸದಸ್ಯರಾದ ರಾಮನಗೌಡ ಪಾಟೀಲ, ಶಂಕರಪ್ಪ ಅಮರಪ್ಪಗೌಡರ, ಬಸವರಾಜ ಅಥಣಿ, ಮುದಿಗೌಡ ಕಿರಸೂರ, ಶರಣಪ್ಪ ಮೇಟಿ, ಐಯ್ಯನಗೌಡ ಪೋಲಿಸಗೌಡರ, ಶಿವಣ್ಣ ಮಣಿನಾಗರ ಮತ್ತಿತರರು ಇದ್ದರು.

# ನಿರಂತರ ಪರಿಶ್ರಮ, ಪ್ರಯತ್ನದಿಂದ ಕನಸು ನನಸು-ಜಾನಕಿ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಡಿ.26-ವಿದ್ಯಾರ್ಥಿಗಳು ನಿರಂತರ ಪರಿಶ್ರಮ ಮತ್ತು ಪ್ರಯತ್ನದಿಂದ ಎಂತಹ ಕನಸುಗಳನ್ನು ನನಸು ಮಾಡಿಕೊಳ್ಳಬಹುದಾಗಿದೆ ಎಂದು ಜಿಲ್ಲಾಧಿಕಾರಿ ಜಾನಕಿ ಕೆ.ಎಂ ಹೇಳಿದರು.

ಬಾದಾಮಿ ತಾಲೂಕಿನ ಚಿರ್ಲಕೊಪ್ಪ ಜವಾಹರ ನವೋದಯ ವಿದ್ಯಾಲಯದಲ್ಲಿ ಜಿಲ್ಲಾ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡ ಮಾರ್ಗದರ್ಶನ ಮತ್ತು ವೃತ್ತಿ ಸಮಾಲೋಚನೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕೌಶಲ್ಯ ಕಲಿಕೆಯಿಂದ ಸ್ವಾವಲಂಬನೆ, ಸಾಮಾಜಿಕ ಭದ್ರತೆ ಹಾಗೂ ಆತ್ಮ ವಿಶ್ವಾಸ ಮೂಡುತ್ತದೆ ಎಂದರು.

ಜೀವನದಲ್ಲಿ ನಾಯಕತ್ವ ಗುಣಗಳನ್ನು ಬೆಳೆಸಿಕೊಳ್ಳುವ ಮನೋಭಾವ ಹೊಂದಬೇಕು. ವಿದ್ಯಾರ್ಥಿಗಳು ತಮ್ಮಲ್ಲಿರುವ ಕೌಶಲ್ಯವನ್ನು ಹೊರತೆಗೆದು ಅದರಿಂದ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಬಹುದಾಗಿದೆ. ಇದರೊಂದಿಗೆ ಭವಿಷ್ಯದ ಯಶಸ್ಸಿಗೆ ಇಂದಿನಿಂದ ತಯಾರಿ ನಡೆಸುವುದು ಅವಶ್ಯವಾಗಿದೆ ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಹಿರೇಮಠ ಮಾತನಾಡಿ, ಪದವಿ ಪೂರ್ವ ಶಿಕ್ಷಣದ ನಂತರದಲ್ಲಿ ವಿದ್ಯಾರ್ಥಿಗಳು ಹಲವಾರು ವೃತ್ತಿಪರ ಕೋರ್ಸಗಳನ್ನು ಆಯ್ಕೆ ಮಾಡಿಕೊಳ್ಳುವದರೊಂದಿಗೆ ಜ್ಞಾನದಿಂದ ಮಾತ್ರವಲ್ಲದೇ ಕೌಶಲ್ಯವನ್ನು ರೂಪಿಸಿಕೊಳ್ಳುವದರಿಂದ ಜೀವನದಲ್ಲಿ ಯಶಸ್ಸನ್ನು ಕಾಣಬಹುದೆಂದು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿದರು.

ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿ ಶ್ರೀನಿವಾಸ ಕುಲಕರ್ಣಿ ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಕಲಿಕಾ ಮತ್ತು ವೃತ್ತಿಜೀವನದಲ್ಲಿ ಆಲಿಸುವಿಕೆ ಮತ್ತು ಸಂವಹನ ಕೌಶಲ್ಯವು ಅತ್ಯವಶ್ಯಕವಾಗಿದ್ದು, ಇದರೊಂದಿಗೆ ತಮ್ಮ ಭವಿಷ್ಯದಲ್ಲಿ ತಾವು ಏನಾಗಬೇಕೆಂಬುದರ ಬಗ್ಗೆ ಯೋಜನೆಯನ್ನು ಹಾಕಿಕೊಳ್ಳಬೇಕು. ಯೋಜನೆಗೆ ತಕ್ಕಂತೆ ತಯಾರಿಯನ್ನು ನಡೆಸಬೇಕು. ಇದಕ್ಕೆ ಪೂರಕವಾಗಿ ಅಭ್ಯಾಸ ಮಾಡಿ ಜೊತೆಗೆ ಭಾಗವಹಿಸುವಿಕೆ ಮುಖ್ಯವಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜವಾಹರ ನವೋದಯ ವಿದ್ಯಾಲಯದ ಪ್ರಾಚಾರ್ಯ ಎಸ್.ಎಸ್.ಆಸಾರಿ, ದೈಹಿಕ ಶಿಕ್ಷಣ ಶಿಕ್ಷಕ ಎಂ.ಡಿ.ಮಠಪತಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಡಿ.28 ವಿವಿಧೆಡೆ ವಿದ್ಯುತ್ ವ್ಯತ್ಯಯ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಡಿ.26-ಬಾಗಲಕೋಟೆ ವಿಭಾಗ ವ್ಯಾಪ್ತಿಯ ವಿವಿಧ ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ ತ್ರೈಮಾಸಿಕ ನಿರ್ವಹಣೆ ಕಾರ್ಯ ಕೈಗೊಳ್ಳುವ ನಿಮಿತ್ತ ಇಳಕಲ್ಲ, ಹುನಗುಂದ ಕೂಡಲಸಂಗಮ ಮತ್ತು ರಾಂಪೂರ ವಿದ್ಯುತ್ ಉಪ ಕೇಂದ್ರಗಳಲ್ಲಿ ಡಿಸೆಂಬರ 28 ರಂದು ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆವರೆಗೆ ವಿದ್ಯುತ್ ಉಪ ಕೇಂದ್ರಗಳಿಂದ ಹೊರಡುವ 11 ಕೆವಿ ಮಾರ್ಗ, ಇ.ಎಚ್.ಟಿ, ಐ.ಪಿ.ಪಿ ಮತ್ತು ಗ್ರಾಹಕರಿಗೆ ವಿದ್ಯುತ್ ಸರಬರಾಜುವಿನಲ್ಲಿ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಬಾಗಲಕೋಟೆ ಹೆಸ್ಕಾ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹುನಗುಂದ 110 ಕೆವಿ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ 110 ಕೆವಿ ಜೆ.ಎಸ್.ಡಬ್ಲೂ ಲೈನ್, 110 ಕೆವಿ ಕೆಬಿಜೆಎನ್‌ಎಲ್ ಲೈನ್, 110 ಕೆವಿ ಕೂಡಲ ಸಂಗಮ, 33 ಕೆವಿ ಕರಡಿ, ಅಮೀನಗಡ, 33 ಕೆವಿ ಮೈತ್ರಾ ಅದ್ವೈರ್ ಸೋಲಾರ ಲಿಮಿಟೆಡ್, ಎಫ್-1 ಎನ್.ಜೆ.ವಾಯ್ ಕಡಿವಾಳ, ಎಫ್-2 ಎನ್.ಜೆ.ವಾಯ್ ಚಿತ್ತವಾಡಗಿ, ಎಫ್-3 ಟೌನ್, ಎಫ್-4 ಎಸ್.ವಿ.ಎಂ, ಎಫ್-6 ನಾಗೂರ, ಎಫ್-7 ಇದ್ದಲಗಿ, ಎಫ್-8 ಇಂಡ್ಸ್ಟ್ರಿಸ್, ಎಫ್-9 ವಾಟರ್ ಸಪ್ಲಾಯ್, ಎಫ್-10 ಅಮರಾವತಿ, ಎಫ್-11 ಧನ್ನೂರ ಎನ್.ಜೆ.ವಾಯ್ ಮಾರ್ಗ.

ಇಲಕಲ್ಲ 110 ಕೆವಿ ವಿ ಕೇಂದ್ರದಿಂದ ಹೊರಡುವ 110 ಕೆವಿ ಅವಡಾ ಸೋಲಾರ ಎನರ್ಜಿ ಪ್ರೈವೆಟ್ ಲಿಮಿಟೆಡ್, 33 ಕೆವಿ ಕಂದಗಲ್ಲ, ಪೇಸ್ ವಾಟರ್ ಲಿಮಿಟೆಡ್, ಗುಡೂರ, ಬಂಡರಗಲ್ಲ, ಎಫ್-1 ದಿಂದ ಎಫ್ 15 ಕ್ರಮವಾಗಿ ಪಂಪ್ ಹೌಸ್, ಇಲಕಲ್ಲ, ವಜ್ಜಲ್, ಬೂದಿಹಾಳ, ಗುಗ್ಗಲಮರಿ ಎನ್‌ಜೆವಾಯ್, ತುಂಬ ಎನ್‌ಜೆವಾಯ್, ಗಾಯತ್ರಿ, ಫಾಯರ್ ಸ್ಟೇಷನ್, ಹೊಸೂರ, ಹನಮನಾಳ, ದುರ್ಗಾ, ಉಪನಾಳ, ಜೆಮ್, ಬಲಕುಂದಿ, ಜೈನ್ ಮತ್ತು ಕೂಡಲ ಸಂಗಮದ 110 ವಿವಿ ಕೇಂದ್ರದಿಂದ ಹೊರಡುವ ಎಫ್-2 ದಿಂದ ಎಫ್-12 ವರೆಗೆ ಕ್ರಮವಾಗಿ ಕೆಂಗಲ್, ಎನ್.ಜೆ.ವಾಯ್, ಕಟಗೂರ, ಬೊಮ್ಮಣಗಿ, ಮ್ಯಾಗೇರಿ, ಡೊಮನಾಳ, ಸಂಗಮ, ಗಂಜಿಹಾಳ, ಮೆದನಾಪೂರ, ವರಗಾದಿನ್ನಿ, ಬಿಸಲದಿನ್ನಿ.

ರಾಂಪೂರ 110 ಕೆವಿ ವಿವಿ ಕೇಂದ್ರದಿಂದ ಹೊರಡುವ ಸೋಲಾರಸಿಸ್ ಸೋಲಾರ ಪಾವರ್ ಪ್ರೈವೆಟ್ ಲಿಮಿಟೆಡ್, 33 ಕೆವಿ ತಿಮ್ಮಾಪೂರ, ಎ.ಆರ್.ಬಿ.ಸಿ ವಾಟರ್ ಸಪ್ಲಾಯ್, ಎಫ್-2 ದಿಂದ ಎಫ್-12 ವರೆಗೆ ಕ್ರಮವಾಗಿ ದೇವಲಾಪೂರ ಐಪಿ, ಬೆಣ್ಣೂರ ಐಪಿ, ಎನ್.ಜೆ.ವಾಯ್, ಬಸವನಗರ ಎನ್.ಜೆ.ವಾಯ್, ಬೇವೂರ ಐಪಿ, ಮನಹಳ್ಳಿ ಐಪಿ, ರಾಂಪೂರ ಎನ್‌ಜೆವಾಯ್, ಸೀತಿಮನಿ ಎನ್‌ಜೆವಾಯ್, ಮಸ್ತಿಹಾಳ ಐಪಿ, ಗುಳಬಾಳ ಐಪಿ, ಕೆ.ಬಿ.ಜೆ.ಎಲ್ ಸೋಲಾರ ಮಾರ್ಗದಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

# ತರಕಾರಿ ಬೆಳೆ, ನರ್ಸರಿ ತರಬೇತಿಗೆ ಅರ್ಜಿ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಡಿ.26-ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದ ಕೆನರಾ ಬ್ಯಾಂಕ್ ದೇಶಪಾಂಡೆ ಆರ್‌ಸೆಟಿ ತರಬೇತಿ ಸಂಸ್ಥೆಯಲ್ಲಿ 18 ರಿಂದ 45 ವಯಸ್ಸಿನ ಗ್ರಾಮೀಣ ಭಾಗದ ನಿರುದ್ಯೋಗಿ ಯುವಕ, ಯುವತಿಯರಿಗಾಗಿ 2025 ರ ಜನವರಿ 16 ರಿಂದ 10 ದಿನಗಳ ಉಚಿತ ತರಕಾರಿ ಬೆಳೆಗಳ ನರ್ಸರಿ ತರಬೇತಿ ಮತ್ತು ಫೆಬ್ರವರಿ 3 ರಿಂದ 13 ದಿನಗಳ ಉಚಿತ ವಾಣಿಜ್ಯ ತೋಟಗಾರಿಕೆ ತರಬೇತಿ ನೀಡುವ ಸಲುವಾಗಿ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು ಜನವರಿ 14, 2025 ರೊಳಗಾಗಿ ತರಬೇತಿಗೆ ಹೆಸರನ್ನು ನೋಂದಾಣಿಸಲು ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗಾಗಿ ನಿರ್ದೇಶಕರು, ಕೆನರಾ ಬ್ಯಾಂಕ್ ದೇಶಪಾಂಡೆ ಆರ್‌ಸೆಟ್ ಸಂಸ್ಥೆ, ಹಳಿಯಾಳ, ಉತ್ತರ ಕನ್ನಡ ಜಿಲ್ಲೆ ಮೊಬೈಲ್ ಸಂಖ್ಯೆ 9980510717, 9483455489 ಗೆ ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

## 1 ಕೋಟಿ ಪರಿಹಾರಕ್ಕೆ ಆಗ್ರಹ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಡಿ.26: ಕಡಿದು ಬಿದ್ದ ವಿದ್ಯುತ್ ತಂತಿ ಸ್ಪರ್ಶದಿಂದ ಸಂತ್ರಸ್ತಳಾದ ನಗರದ ಭಾಗ್ಯಶ್ರೀ ಕುಟುಂಬಕ್ಕೆ 1 ಕೋಟಿ ರೂ ಪರಿಹಾರ ನೀಡುವಂತೆ ಸೃಷ್ಟಿ ಸೋಶಿಯಲ್ ವೆಲ್‌ಫೇರ್ ಟ್ರಸ್ಟ್ ಅಧ್ಯಕ್ಷ ಕಿಶೋರ.ಆರ್ ಗಾಯಕವಾಡ ಅವರು ಇಂದು ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು. ಭಾಗ್ಯಶ್ರೀ ಕುಟುಂಬದ ಒಬ್ಬರಿಗೆ ಸರಕಾರಿ ಉದ್ಯೋಗ ನೀಡಬೇಕು. ಭಾಗ್ಯಶ್ರೀ ಅವರ ಮಕ್ಕಳ ವ್ಯಾಸಂಗದ ವೆಚ್ಚವನ್ನು ಸರಕಾರ ಭರಿಸಬೇಕು. ಇದೇ ರೀತಿಯ ಅವಘಡಗಳು ಸಂಭವಿಸದಂತೆ ಮಹಾನಗರ ಪಾಲಿಕೆ ಮತ್ತು ಜೆಸ್ಕಾಂ ಅಗತ್ಯ ತುರ್ತುಕ್ರಮ ಕೈಗೊಳ್ಳಬೇಕು ಎಂದು ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.

# ಡಿ.29 ಗೆಜೆಟೆಡ್ ಪ್ರೊಬೇಷನರ್ಸ್ ಹುದ್ದೆಗೆ ಪರೀಕ್ಷೆ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಡಿ.26-ಜಿಲ್ಲೆಯಲ್ಲಿ ಸ್ಥಾಪಿಸಲಾದ 18 ಪರೀಕ್ಷಾ ಕೇಂದ್ರಗಳಲ್ಲಿ ಡಿಸೆಂಬರ 29 ರಂದು ಕೆ.ಪಿ.ಎಸ್.ಸಿ ಆಯೋಗವು ಅಧಿಸೂಚಿಸಿರುವ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆ ನಡೆಯಲಿದ್ದು, ಪರೀಕ್ಷೆ ಶಾಂತ ಹಾಗೂ ಸುಗಮವಾಗಿ ನಡೆಸಲು ಅಗತ್ಯ ಸಿದ್ದತೆ ಮಾಡಿಕೊಳ್ಳುವಂತೆ ಜಿಲ್ಲಾಧಿಕಾರಿ ಜಾನಕಿ ಕೆ.ಎಂ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಇತ್ತೀಚೆಗೆ ಜರುಗಿದ ಸ್ಪರ್ಧಾತ್ಮಕ ಪರೀಕ್ಷೆಯ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಬಾಗಲಕೋಟೆ ನಗರದಲ್ಲಿ ಇರುವ ಸರ್ಕಾರಿ ಮತ್ತು ಖಾಸಗಿ ಶಾಲಾ, ಕಾಲೇಜುಗಳನ್ನು ಪರೀಕ್ಷಾ ಕೇಂದ್ರಗಳನ್ನಾಗಿ ಕೆಪಿಎಸ್‌ಸಿ ಆಯೋಗದವರು ಆಯ್ಕೆ ಮಾಡಿದ್ದಾರೆ. ಒಟ್ಟು 18 ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಒಟ್ಟು 6601 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಎರಡು ಅವಧಿಯಲ್ಲಿ ಪರೀಕ್ಷೆ ನಡೆಯಲಿದೆ. ಬೆಳಿಗ್ಗೆ 10 ರಿಂದ ಮಧ್ಯಾಹ್ನ 12 ವರೆಗೆ, ಎರಡನೇ ಅವಧಿ ಮಧ್ಯಾಹ್ನ 2 ರಿಂದ ಸಂಜೆ 4 ವರೆಗೆ ನಡೆಯಲಿದೆ ಎಂದು ತಿಳಿಸಿದರು.

ಪ್ರಶ್ನೆ ಪತ್ರಿಕೆ ಬಂಡಲ್‌ಗಳನ್ನು ಜಿಲ್ಲಾ ಖಜಾನೆಯಿಂದ ಪಡೆದು ಪರೀಕ್ಷಾ ಕೇಂದ್ರಗಳಿಗೆ ತಲುಪಿಸಲು ಒಟ್ಟು 6 ಮಾರ್ಗಾಧಿಕಾರಿಗಳನ್ನು ನೇಮಕ ಮಾಡಲಾಗಿದ್ದು, ಸಮಯಕ್ಕೆ ಸರಿಯಾಗಿ ಪರೀಕ್ಷಾ ಕೇಂದ್ರಗಳಿಗೆ ತಲುಪಿಸುವ ಕಾರ್ಯವಾಗಬೇಕು. ಮಾರ್ಗಾಧಿಕಾರಿಗಳೊಂದಿಗೆ ಪೋಲೀಸ್ ಸಿಬ್ಬಂದಿಗಳನ್ನು ಸಹ ನೇಮಿಸಲು ಕ್ರಮಕೈಗೊಳ್ಳಲಾಗುವುದು. ಪ್ರತಿಯೊಂದು ಪರೀಕ್ಷಾ ಕೇಂದ್ರಕ್ಕೆ ಒಬ್ಬರಂತೆ ಸ್ಥಾನಿಕ ಜಾಗೃತ ದಳದ ಅಧಿಕಾರಿಗಳನ್ನು ನೇಮಿಸಲಾಗಿದೆ ಎಂದು ಡಿಸಿ ತಿಳಿಸಿದರು.

ಪ್ರತಿಯೊಂದು ಪರೀಕ್ಷಾ ಕೇಂದ್ರಗಳಿಗೆ ಅಗತ್ಯ ಬಂದೋಬಸ್ತವಾಗಿ ಪೋಲೀಸ್ ಪೇದೆಗಳನ್ನು ನಿಯೋಜಿಸಲಾಗುತ್ತಿದೆ. ಮೂರು ಪರೀಕ್ಷಾ ಕೇಂದ್ರಗಳಿಗೆ ಒಬ್ಬರಂತೆ ಎ ವೃಂದದ ಅಧಿಕಾರಿಗಳನ್ನು ವೀಕ್ಷಕರನ್ನಾಗಿ ನೇಮಿಸಿ ಆದೇಶಿಸಲಾಗುತ್ತಿದೆ. ಪರೀಕ್ಷಾ ಕೇಂದ್ರದ ಸುತ್ತಮುತ್ತಲೂ 200 ಮೀಟರ್ ಪ್ರದೇಶವನ್ನು ನಿಷೇಧಿತ ಪ್ರದೇಶವೆಂದು ಘೋಷಿಸಲಾಗುತ್ತಿದೆ ಎಂದು ತಿಳಿಸಿದರು.

ಸಿಸಿಟಿವಿ, ಬಾಡಿ ಕ್ಯಾಮರಾ, ಜಾಮರ, ಪ್ರಿಸ್ಕಿಂಕ್, ಫೇಸ್ ರಿಕಾಗ್ನಾಷನ್ ಕಾರ್ಯವನ್ನು ಕೆ.ಪಿ.ಎಸ್.ಸಿ ಇಲಾಖೆ ನೇಮಕಗೊಳಿಸಿದ ಏಜೆನ್ಸಿಯವರು ಮಾಡುತ್ತಿದ್ದಾರೆ. ಈ ಕಾರ್ಯ ಸಮರ್ಪಕವಾಗಿ ನಿರ್ವಹಿಸಿದ ಬಗ್ಗೆ ನಿಗಧಿಗೊಳಿಸಿದ ನಮೂನೆಯಲ್ಲಿ ಭರ್ತಿ ಮಾಡಿ ಮುಖ್ಯ ಅಧೀಕ್ಷಕರು ಹಾಗೂ ಸ್ಥಳೀಯ ನಿರೀಕ್ಷಣಾಧಿಕಾರಿಗಳು ಜಂಟಿಯಾಗಿ ಪರಿಶೀಲನೆ ಮಾಡಿ ದೃಢೀಕರಿಸುವ ಕಾರ್ಯವಾಗಬೇಕು ಎಂದರು.

ಪರೀಕ್ಷಾ ಕೇಂದ್ರ ಸಂಖ್ಯೆ 1 ರಲ್ಲಿ 120 ವಿಕಲಚೇತನ ಅಭ್ಯರ್ಥಿಗಳು ಹಾಗೂ 20 ಅಂಧ ಪರೀಕ್ಷಾರ್ಥಿಗಳು (ಸ್ಕ್ರೈಬ್) ಸಹಾಯಕರೊಂದಿಗೆ ಪರೀಕ್ಷೆಗೆ ಹಾಜರಾಗಲಿದ್ದು, ಅವರಿಗೆ ಮುಖ್ಯ ಅಧೀಕ್ಷಕರು ನಿಯಮಾನುಸಾರ ಅಗತ್ಯ ಕ್ರಮಕೈಗೊಳ್ಳಬೇಕು. ಬೆಂಚ್ ಮಾರ್ಕ ಹೊರಡಿಸಿದ ವಿಕಲಚೇತನರಿಗೆ ಪ್ರತಿ ಗಂಟೆಗೆ 20 ನಿಮಿಷದಂತೆ ಹೆಚ್ಚುವರಿ ಕಾಲಾವಕಾಶವನ್ನು ನಿಯಮಾನುಸಾರ ನೀಡಲು ಕ್ರಮವಹಿಸಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿ ಅಮರನಾಥ ರೆಡ್ಡಿ, ಅಪರ ಜಿಲ್ಲಾಧಿಕಾರಿ ಪರಶುರಾಮ ಶಿನ್ನಾಳಕರ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎಂ.ವಿವೇಕಾನಂದ, ಖಜಾನೆ ಇಲಾಖೆಯ ಉಪನಿರ್ದೇಶಕ ಶರಣಬಸಪ್ಪ ಕುಂಬಾರ, ಪರೀಕ್ಷಾ ನೋಡಲ್ ಅಧಿಕಾರಿ ಎಚ್.ಜಿ.ಮಿರ್ಜಿ, ಶಾಲಾ ಶಿಕ್ಷಣ ಇಲಾಖೆಯ ಹಾಲವರ ಸೇರಿದಂತೆ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು ಉಪಸ್ಥಿತರಿದ್ದರು.

# ರಾಜ್ಯ ಸಾರಿಗೆ ನೌಕರರು ಡಿ . 31 ರಿಂದ ಅನಿರ್ದಿಷ್ಟ ಮುಷ್ಕರಕ್ಕೆ ಕರೆ..!




(ಎಂ.ರಫೀಕ್ ಪಟೇಲ್)

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ;ರಾಜ್ಯದ ನಾಲ್ಕು ಸಾರಿಗೆ ನಿಗಮಗಳ ನೌಕರರ ವೇತನ ಪರಿಷ್ಕರಣೆ ಮಾಡುವುದು ಸೇರಿ ಅನೇಕ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಒತ್ತಾಯಿಸಿ ಡಿಸೆಂಬರ್ 31ರಂದು ರಾಜ್ಯದಂತ ಸಾರಿಗೆ ಬಸ್ ಗಳನ್ನು ಬಂದ್ ಮಾಡಿ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲಾಗುವುದು ಎಂದು ರಾಜ್ಯ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಅಧ್ಯಕ್ಷ ದೇವಿಂದ್ರಪ್ಪ ಮ್ಯಾಗೇರಿ ಇಂದು ತಿಳಿಸಿದರು

ಈಗಾಗಲೇ ಹಿಂದಿನ ವೇತನ 38 ತಿಂಗಳ ಬಾಕಿ ಹಣ ಕೂಡ ಬಂದಿಲ್ಲ ಹೀಗಾಗಿ ಅಂದು ಎಲ್ಲಾ ಸಾರಿಗೆ ನೌಕರರು ಅನಿರ್ದಿಷ್ಟಾವಧಿ ಮುಷ್ಕರದಲ್ಲಿ ಪಾಲ್ಗೊಳ್ಳಲಿದ್ದಾರೆ ಕೂಡಲೇ ಸರಕಾರ ನಮ್ಮ ಅನೇಕ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಒತ್ತಾಯಿಸಿದರು.

2023 ಡಿಸೆಂಬರ್ 31ರ ಮೂಲವೇತನದ ಪ್ರಕಾರ ಶೇಕಡ 25% ರಷ್ಟು ಹೆಚ್ಚಳ ಮಾಡಿ 2024 ಜನವರಿ ಒಂದರಿಂದ ವೇತನ ಶ್ರೇಣಿಗಳನ್ನು ಸಿದ್ಧಪಡಿಸು ತಕ್ಕದ್ದು 2020.ಜ.1 ರಿಂದ ಆಗಿರುವ ಶೇಕಡ 15ರಷ್ಟು ವೇತನ ಹೆಚ್ಚಳದ 38 ತಿಂಗಳ ಭಾಗ್ಯ ಹಣ ವಿಳಂಬವಿಲ್ಲದೆ ವರ್ತಿಸಬೇಕು ಶಕ್ತಿ ಯೋಜನೆಯ ಸಂಪೂರ್ಣ ಅನುದಾನವನ್ನು ರಾಜ್ಯದ ನಾಲ್ಕು ಸಾರಿಗೆ ನಿಗಮಗಳಿಗೆ ಪಾವತಿಸಬೇಕು ಎಂದು ಹೇಳಿದರು .

2000 23 ಆ. 8.ರಂದು ಜಂಟಿ ಕ್ರಿಯಾ ಸಮಿತಿಯಿಂದ ಸಲ್ಲಿಸಿರುವ ಬೇಡಿಕೆಗಳಲ್ಲಿ ಇತ್ಯರ್ಥವಾಗದೆ ಬಾಕಿ ಉಳಿದಿರುವ ಅನೇಕ ಬೇಡಿಕೆಗಳನ್ನು ಈಡೇರಿಸಬೇಕು ನೌಕರರು ಪ್ರಸಕ್ತ ಪಡೆಯುತ್ತಿರುವ ವಿವಿಧ ಬಟ್ಟೆಗಳನ್ನು ಆಯ್ದು ಪಟ್ಟು ಹೆಚ್ಚಳ ಮಾಡಬೇಕು ವೇದಿಕೆ ಸೌಲಭ್ಯ ಕಲ್ಪಿಸಬೇಕು ಎಲ್ಲ ನೌಕರರಿಗೂ ಪ್ರತಿ ತಿಂಗಳು ಹೊರರೋಗಿ ಚಿಕಿತ್ಸೆ ವೆಚ್ಚಕ್ಕಾಗಿ 2,000 ನೀಡಬೇಕು ಎಲ್ಲ ನೌಕರರಿಗೆ ಉಚಿತ ಔಷಧ ಪೂರೈಸಬೇಕು ಇಎಸ್ಐ ಮಾದರಿಯಲ್ಲಿ ಆಡಳಿತ ವರ್ಗದವರಿಂದ ನೌಕರರ ಮೂಲವೇತನ ಶೇ. 4.5 ವಂತಿಗೆ ಸಂಗ್ರಹಿಸಿ ಟ್ರಸ್ಟ್ ರಚಿಸಿ ಈ ಮೂಲಕ ಸಾರಿಗೆ ನೌಕರರಿಗೆ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಉಚಿತ ಚಿಕಿತ್ಸೆ ನೀಡುವಂತೆ ಯೋಜನೆ ರೂಪಿಸಬೇಕು ಎಂದು ಒತ್ತಾಯಿಸಿದರು..

ಇದೇ ಸಂದರ್ಭದಲ್ಲಿ ದೇವಿಂದ್ರಪ್ಪ ಮ್ಯಾಗೇರಿ ರಾಜ್ಯ ಸಾರಿಗೆ ನೌಕರರ ಸಂಘದ ಜಿಲ್ಲಾ ಅಧ್ಯಕ್ಷರು

ಶಿವಾನಂದ ಸ್ವಾಮಿ ಎ ಐ ಟಿ ಯು ಸಿ ಕಂಟಪ್ಪ. ಎ ಐ ಟಿ ಯು ಸಿ ಕಾರ್ಯಕರ್ತರು

ಆರ್ ಬಿ ದೇಸಾಯಿ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿಗಳು

ಬಸವರಾಜ್ ತಿಪ್ರೆಡ್ಡಿ ವಲಯದ ಮುಖ್ಯ ಉಪಾಧ್ಯಕ್ಷರು ಹಾಗೂ ಅನೇಕ ಸಂಘಟನಾ ಕಾರ್ಯಕರ್ತರು ಹಾಜರಿದ್ದರು.

ಬೀದರ್ ಜಿಲ್ಲೆಯ ರಾಜಣ್ಣ, ಡಾ. ಆರತಿಗೆ ಪ್ರಶಸ್ತಿ

# ರಾಜ್ಯಮಟ್ಟದ ವೈಜ್ಞಾನಿಕ ಸಮ್ಮೇಳನ ನಾಳೆಯಿಂದ





ಮಲ್ಲಮ್ಮ ನುಡಿ ವಾರ್ತೆ

ಬೀದರ.ಡಿ.26:–:ಬೆಂಗಳೂರಿನ ಬಾಗಲೂರು ವಿ.ಜೆ. ಇಂಟರ್ ನ್ಯಾಷನಲ್ ಶಾಲಾ ಮೈದಾನದಲ್ಲಿ ಡಿ. 28 ಮತ್ತು 29 ರಂದು ರಾಜ್ಯಮಟ್ಟದ ನಾಲ್ಕನೇ ವೈಜ್ಞಾನಿಕ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್‌ನ ರಾಜ್ಯ ಸಂಯೋಜಕ ದಾನಿ ಬಾಬುರಾವ್ ತಿಳಿಸಿದ್ದಾರೆ.

ಚಿತ್ರನಟಿ ಉಮಾಶ್ರೀ ಸರ್ವಾಧ್ಯಕ್ಷತೆಯಲ್ಲಿ ನಡೆಯಲಿರುವ ಸಮ್ಮೇಳನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ. ಉಪಮುಖ್ಯಮಂತ್ರಿ, ಕೇಂದ್ರ, ರಾಜ್ಯದ ಸಚಿವರು, ಜನಪ್ರತಿನಿಧಿಗಳು, ವಿಜ್ಞಾನಿಗಳು ಹಾಗೂ ಗಣ್ಯರು ಪಾಲ್ಗೊಳ್ಳಲಿದ್ದಾರೆ ಎಂದು ಹೇಳಿದ್ದಾರೆ.

ಸಮ್ಮೇಳನದಲ್ಲಿ ವಿವಿಧ ಗೋಷ್ಠಿಗಳು ಜರುಗಲಿವೆ. ವಿಜ್ಞಾನ ವಸ್ತು ಪ್ರದರ್ಶನ, ನಾಟಕ ಪ್ರದರ್ಶನ, ಹಾಸ್ಯ ಸಂಜೆ, ಕರಕುಶಲ, ಆಹಾರ ಮೇಳಗಳು ಇರಲಿವೆ ಎಂದು ತಿಳಿಸಿದ್ದಾರೆ.

ಸಮ್ಮೇಳನದ ನಿಮಿತ್ತ ನೀಡಲಾಗುವ ರಾಜ್ಯಮಟ್ಟದ ಎಚ್. ಎನ್. ಪ್ರಶಸ್ತಿಗೆ ಜಿಲ್ಲೆಯ ರಾಜಣ್ಣ ಪಿ. ಹುಡಗಿಕರ್ ಹಣಕುಣಿ ಹಾಗೂ ರಾಜ್ಯಮಟ್ಟದ ಚೈತನ್ಯಶ್ರೀ ಪ್ರಶಸ್ತಿಗೆ ಡಾ. ಆರತಿ ರಘು ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಹೇಳಿದ್ದಾರೆ.

ಸಮ್ಮೇಳನದಲ್ಲಿ ವಿವಿಧೆಡೆಯಿಂದ ಬರುವವರಿಗೆ ಉಪಾಹಾರ, ಊಟ ಹಾಗೂ ವಸತಿ ಸೌಲಭ್ಯ ಇರಲಿದೆ. ಜಿಲ್ಲೆಯ ಜನ ಸಮ್ಮೇಳನದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದ್ದಾರೆ.

# ಶೂದ್ರರು, ಮಹಿಳೆಗೆ ಘನತೆ ತಂದವರು ಅಂಬೇಡ್ಕರ್: ಕೆ.ನೀಲಾ




ಮಲ್ಲಮ್ಮ ನುಡಿ ವಾರ್ತೆ

ಬೀದರ.ಡಿ.26:–'ದೇಶದಲ್ಲಿನ ಶೂದ್ರರು ಮತ್ತು ಮಹಿಳೆಯರನ್ನು ಮನುಷ್ಯರಾಗಿ ಕಂಡು ಅವರಿಗೆ ಘನತೆಯ ಬಂದು ತಂದುಕೊಟ್ಟ ಕೀರ್ತಿ ಡಾ.ಬಿ.ಆರ್. ಅಂಬೇಡ್ಕರ್ ಅವರಿಗೆ ಸಲ್ಲುತ್ತದೆ' ಎಂದು ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಘಟಕದ ಉಪಾಧ್ಯಕ್ಷೆ ಕೆ.ನೀಲಾ ತಿಳಿಸಿದರು.

ಭಾರತೀಯ ಬೌದ್ಧ ಮಹಾಸಭೆಯ ತಾಲ್ಲೂಕು ಹಾಗೂ ಜಿಲ್ಲಾ ಘಟಕದ ಸಹಯೋಗದಲ್ಲಿ ನಗರದ ಚನ್ನಬಸವ ಪಟ್ಟದ್ದೇವರು ರಂಗಮಂದಿರದಲ್ಲಿ ಬುಧವಾರ ಏರ್ಪಡಿಸಿದ್ದ ಮಹಿಳಾ ವಿಮೋಚನಾ ದಿನಾಚರಣೆ ಹಾಗೂ ಸಮತಾ ಸೈನಿಕ ದಳದ ಸಮಾವೇಶದಲ್ಲಿ ಭಾಗವಹಿಸಿ ಮಾತನಾಡಿದರು.

ನಿಕೃಷ್ಟವಾಗಿ ಕಾಣುತ್ತಿದ್ದ ಶೂದ್ರರಿಗೆ ಸ್ವಾಭಿಮಾನ ಬದುಕು ಸಿಕ್ಕಿದ್ದು ಅಂಬೇಡ್ಕರ್ ಅವರಿಂದ. ಮಹಿಳೆಯರನ್ನು ಅಮಾನುಷವಾಗಿ ಎರಡನೇ ದರ್ಜೆ ಪ್ರಜೆಯಾಗಿ ಕಾಣುತ್ತಿದ್ದರು. ಅವರಿಗೆ ಪುರುಷರಷ್ಟೇ ಸಮಾನ ಅವಕಾಶಗಳನ್ನು ಕಲ್ಪಿಸಿ, ಮುಖ್ಯವಾಹಿನಿಗೆ ಬರಲು ಕಾರಣಕರ್ತರಾದವರು ಬಾಬಾ ಸಾಹೇಬರು ಎಂದು ಹೇಳಿದರು.

ಮಹಾಸಭೆಯ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯೆ ವೈಶಾಲಿ ಮೋರೆ ಉದ್ಘಾಟಿಸಿ, ಈ ದೇಶಕ್ಕೆ ಅಂಬೇಡ್ಕರ್ ಅವರು ಕೊಟ್ಟಿರುವ ಕೊಡುಗೆ ಅಮೋಘವಾದುದು. ತಳಸಮುದಾಯದವರು ಎಂದೂ ಅವರನ್ನು ಮರೆಯಬಾರದು. ಅವರು ಹಾಕಿಕೊಟ್ಟ ದಾರಿಯಲ್ಲಿ ಮುನ್ನಡೆಯಬೇಕೆಂದು ಹೇಳಿದರು.

ಭಂತೆ ಧಮ್ಮಕೀರ್ತಿ, ಭಂತೆ ಸಂಘ ಸೇವಕ ಸಾನ್ನಿಧ್ಯ ವಹಿಸಿದ್ದರು. ಭಾರತೀಯ ಬೌದ್ಧ ಮಹಾ ಸಭೆಯ ಜಿಲ್ಲಾ ಅಧ್ಯಕ್ಷ ಆಯುಷ್ಮಾನ ರಾಜಪ್ಪ ಗುನ್ನಳಿಕರ್, ಜಿಲ್ಲಾ ಉಪಾಧ್ಯಕ್ಷೆ ಮಂಜುಳಾ ಭಾವಿದೊಡ್ಡಿ, ರಾಷ್ಟ್ರೀಯ ಸಂಘಟಕ ಮಲ್ಲಿಕಾರ್ಜುನ ಭಾಲ್ಕೆ, ರಾಜ್ಯ ಘಟಕದ ಅಧ್ಯಕ್ಷ ಮನೋಹರ ಮೋರೆ, ರಾಜ್ಯ ಪ್ರಧಾನ ಕಾರ್ಯದರ್ಶಿ ದೇವೇಂದ್ರ ಭಾಲ್ಕೆ, ರಾಜ್ಯ ಉಪಾಧ್ಯಕ್ಷ ಜಗನ್ನಾಥ ಕಾಂಬಳೆ, ತಾಲ್ಲೂಕು ಅಧ್ಯಕ್ಷ ಶಿವಕುಮಾರ್ ಸದಾಫುಲೆ, ನಿವೃತ್ತ ಪ್ರಾಚಾರ್ಯ ವಿಠಲದಾಸ್ ಪ್ಯಾಗೆ ಹಾಜರಿದ್ದರು.

# ಗ್ರಾಮದ ಅಭಿವೃದ್ಧಿಯಲ್ಲಿ ಸದಸ್ಯರ, ಅಧಿಕಾರಿಗಳ ಪಾತ್ರ ಹಿರಿದು



ಮಲ್ಲಮ್ಮ ನುಡಿ ವಾರ್ತೆ

(ಮಲ್ಲಪ್ಪಾ ಟಿ ಹಾಸಗೊಂಡ)

ಭಾಲ್ಕಿ: ಗ್ರಾಮ ಪಂಚಾಯಿತಿಯ ಪ್ರಗತಿಯಲ್ಲಿ ಸರ್ವ ಸದಸ್ಯರ, ಅಧಿಕಾರಿಗಳ ಯೋಜನೆ, ಸಹಕಾರ ಪಾತ್ರ ಹಿರಿದು ಎಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಚಂದ್ರಕಾಂತ ಪುಲೆ ಹೇಳಿದರು.

ತಾಲ್ಲೂಕಿನ ಹಲಬರ್ಗಾದಲ್ಲಿ ಗ್ರಾಮ ಪಂಚಾಯಿತಿ ಕಾರ್ಯದರ್ಶಿಯಾಗಿ ಬಡ್ತಿ ಪಡೆದಿರುವ ಅನಿತಾ ಕೆಪ್ಪೆ ಅವರು ಅಭಿನಂದನಾ ಸಮಾರಂಭದಲ್ಲಿ ಅವರನ್ನು ಸದಸ್ಯರೊಂದಿಗೆ ಸನ್ಮಾನಿಸಿ ಮಾತನಾಡಿದರು.

ಎಲ್ಲ ಗ್ರಾಮಗಳು ಅಭಿವೃದ್ಧಿ ಪಥದಲ್ಲಿ ಸಾಗಿದಾಗ ಮಾತ್ರ ದೇಶದ ತ್ವರಿತ, ಗುಣಾತ್ಮಕ ಪ್ರಗತಿ ಆಗಲು ಸಾಧ್ಯ. ನಮ್ಮ ಗ್ರಾಮ ಪಂಚಾಯಿತಿಯಲ್ಲಿ ಅನಿತಾ ಅವರು ತುಂಬಾ ದಕ್ಷತೆಯಿಂದ ಡಿಇಒ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಈಗ ಪಂಚಾಯಿತಿ ಕಾರ್ಯದರ್ಶಿಯಾಗಿ ಬಡ್ತಿ ಹೊಂದಿರುವುದು ನಮಗೆಲ್ಲರಿಗೂ ಸಂತಸದ ತಂದಿದೆ ಎಂದು ತಿಳಿಸಿದರು.

ಸಿದ್ದಗಂಗಾ ಮಠದ ಹಳೇ ವಿದ್ಯಾರ್ಥಿಗಳ ಹಾಗೂ ಹಿತೈಷಿಗಳ ಸಂಘದ ಜಿಲ್ಲಾಧ್ಯಕ್ಷ ಶಿವಕುಮಾರ ಪಾಟೀಲ ತೇಗಂಪೂರ ಮಾತನಾಡಿ, ಎಲ್ಲರೂ ತಮ್ಮ ತಮ್ಮ ಕರ್ತವ್ಯಗಳನ್ನು ಅಚ್ಚುಕಟ್ಟಾಗಿ, ಜವಾಬ್ದಾರಿಯಿಂದ ನಿರ್ವಹಿಸಿದಾಗ ಮಾತ್ರ ಹುದ್ದೆಯ ಘನತೆ ಹೆಚ್ಚುತ್ತದೆ. ಸಾರ್ವಜನಿಕರ ಪ್ರೀತಿಯನ್ನು ಗಳಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಗ್ರಾಮ ಪಂಚಾಯಿತಿ ಸದಸ್ಯರಾದ ಶೋಭಾವತಿ ಶ್ರೀಮಾಳೆ, ರಜನಿಕಾ ಪಾಟೀಲ, ಶಿವಕಾಂತ ಮಹಾರುದ್ರ ದೊಡ್ಡಿ, ಅಂಜನಾ ಪಾಟೀಲ, ಕಾವೇರಿ ಪಾಟೀಲ, ಲಕ್ಷ್ಮಿ, ಮಾರುತಿ ಸೂರ್ಯವಂಶಿ, ಮಂಜುನಾಥ್ ಪಾಟೀಲ, ಪಿಂಟು ಠಾಕೂರ್, ಮಹೇಶ ಪಾಟೀಲ ಸೇರಿದಂತೆ ಇತರರು ಇದ್ದರು.

# ಆನ್‌ಲೈನ್ ಔಷಧ ಮಾರಾಟ ತಡೆಗೆ ಆಗ್ರಹ



ಮಲ್ಲಮ್ಮ ನುಡಿ ವಾರ್ತೆ

ಬೀದರ.ಡಿ.26:–ಆನ್‌ಲೈನ್ ಮೂಲಕ ಔಷಧ ಮಾರಾಟ ತಡೆಗೆ ಕ್ರಮ ಕೈಗೊಳ್ಳಬೇಕು ಎಂದು ಬೀದರ್ ಜಿಲ್ಲಾ ಔಷಧ ವ್ಯಾಪಾರಿಗಳ ಸಂಘ ಆಗ್ರಹಿಸಿದೆ.

ಕೋವಿಡ್ ವೇಳೆ ನೀಡಿದ್ದ ವಿಶೇಷ ಅನುಮತಿಯನ್ನು ಆನ್‌ಲೈನ್ ಔಷಧ ಮಾರಾಟ ವೇದಿಕೆಗಳು ದುರುಪಯೋಗ ಪಡೆಸಿಕೊಳ್ಳುತ್ತಿವೆ ಎಂದು ಸಂಘದ ಅಧ್ಯಕ್ಷ ಶಿವರಾಜ ಪಾಟೀಲ ಹಾಗೂ ಪ್ರಧಾನ ಕಾರ್ಯದರ್ಶಿ ಮಹಮ್ಮದ್ ಖಾಲೇದ್ ಷರೀಫ್ ಆರೋಪಿಸಿದ್ದಾರೆ.

ಸ್ವಿಗ್ಗಿ ಹಾಗೂ ಇತರ ಆನ್‌ಲೈನ್ ವೇದಿಕೆಗಳು ಔಷಧಕ್ಕೆ ಸಂಬಂಧಿಸಿದ ಕೇಂದ್ರ ಸರ್ಕಾರದ ನಿಯಮಗಳನ್ನು ಉಲ್ಲಂಘಿಸುತ್ತಿವೆ. ಯಾವುದೇ ಸುರಕ್ಷತಾ ಕ್ರಮಗಳನ್ನು ಅನುಸರಿಸದೆ ಔಷಧಗಳನ್ನು ಮನೆ ಬಾಗಿಲಿಗೆ ಪೂರೈಸುತ್ತಿವೆ. ಇದು, ರೋಗಿಗಳು ಹಾಗೂ ಸಾರ್ವಜನಿಕರ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ ಎಂದು ಆಪಾದಿಸಿದ್ದಾರೆ.

ಆನ್‌ಲೈನ್ ಮೂಲಕ ಔಷಧ ಮಾರಾಟವನ್ನು ಕೂಡಲೇ ತಡೆಯಬೇಕು. ಆನ್‌ಲೈನ್ ಔಷಧ ಮಾರಾಟಕ್ಕೆ ನೀಡಿದ್ದ ಪರವಾನಗಿಯನ್ನು ವಾಪಸ್ ಪಡೆಯಬೇಕು. ಇಲ್ಲವಾದಲ್ಲಿ ಆಲ್ ಇಂಡಿಯಾ ಆರ್ಗನೈಝೇಷನ್ ಆಫ್ ಕೆಮಿಸ್ಟ್ ಆ್ಯಂಡ್ ಡ್ರಗ್ಗಿಸ್ಟ್ ಹಾಗೂ ಕರ್ನಾಟಕ ಸ್ಟೇಟ್ ಕೆಮಿಸ್ಟ್ ಆ್ಯಂಡ್ ಡ್ರಗ್ಗಿಸ್ಟ್ ಅಸೋಸಿಯೇಷನ್‌ನ 12.40 ಲಕ್ಷ ಸದಸ್ಯರು ಹೋರಾಟ ನಡೆಸುವುದು ಅನಿವಾರ್ಯವಾಗಲಿದೆ ಎಂದು ಎಚ್ಚರಿಸಿದ್ದಾರೆ.

# ಋಣಾನುಬಂಧ ವಧು ವರರ ಕೇಂದ್ರ ಸಮಾಜಕ್ಕೆ ಒಳ್ಳೆಯ ಸೇತುವೆಯಾಗಬೇಕು ಚನ್ನಪ್ಪ ಆನೆಗುಂದಿ




(ಮಲ್ಲಿಕಾರ್ಜುನ್ ಮಳಿಕೇರಿ)

ಮಲ್ಲಮ್ಮ ನುಡಿ ವಾರ್ತೆ

ನಗರದ ಶಹಾಪೂರ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ವಧು ವರರ ನೂತನವಾಗಿ ಋಣಾನುಬಂಧ ಎಂಬ ವಧು ವರರ ಕೇಂದ್ರ ಉದ್ಘಾಟನೆ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಋಣಾನುಬಂಧ ಎಂಬ ವಾಕ್ಯದೊಂದಿಗೆ ಈ ವಧು–ವರರ ಕೇಂದ್ರ ಶಹಾಪೂರಿನಲ್ಲಿ ಉದ್ಘಾಟನೆಯಾಗಿರೋದು ನಮ್ಮೆಲ್ಲರ ಖುಷಿ ವಿಚಾರ.

ಆಧುನಿಕ ಜಗತ್ತಿನಲ್ಲಿ ವಧು ವರರ ಕೇಂದ್ರ ಒಳ್ಳೆಯ ಸಮಾಜದಲ್ಲಿ ಗಂಡು ಮತ್ತು ಹೆಣ್ಣಿನ ನಡುವೆ ಮದುವೆ ಮಾಡಿಸುವ ವಿಚಾರ ಬರೀ ವ್ಯವಹಾರಿಕವಾಗಿದೆ ಋಣಾನುಬಂಧ ಎಂಬ ವ್ಯಾಕ್ಯದೊಂದಿಗೆ ಬಡವರಿಗೆ ಹಾಗೂ ರೈತರ ಮಕ್ಕಳಿಗೆ ವಧು ಹುಡುಕುವುದು ಕೊಳ್ಳುವುದು ಒಂದು ದೊಡ್ಡ ನಮ್ಮ ದೇಶದ ಸಮಸ್ಯೆಯಾಗಿದ್ದು ಋಣಾನುಬಂಧ ಎಂಬ ವಧು–ವರರ ಕೇಂದ್ರವನ್ನು ಬರಿ ವ್ಯವಹಾರಿಕವಾಗಿ ಮಾಡದೆ ಗಂಡು ಮತ್ತು ಹೆಣ್ಣಿನ ನಡುವೆ ಸಮ ಸಮಾಜದೊಂದಿಗೆ ಸೇತುವೆ ಮಾಡಿಕೊಡುವುದರ ಮುಖಾಂತರ ಬರೀ ಶ್ರೀಮಂತರಿಗೆ ಮಾತ್ರ ವಧುವಿನ ವಿಚಾರಗಳನ್ನು ಅರಿಯದೆ ವಿವಾಹ ಮಾಡಿಸುವುದು ದೊಡ್ಡ ವಧು ಹಾಗೂ ವರವಿನ ಸಂಪೂರ್ಣ ಮಾಹಿತಿ ಕಲೆಹಾಕಿ ವ್ಯಕ್ತಿತ್ವ ಮನುಷ್ಯನಿಗೆ ಬೇಕಾಗುವ ಮಾನವೀಯ ಮೌಲ್ಯಗಳನ್ನು ಸಹ ಬಹಳ ಅವಶ್ಯವಾಗಿರುತ್ತದೆ ಎಂದು ಚನ್ನಪ್ಪ ಆನೆಗುಂದಿ ಹೇಳಿದರು.

ದಿವ್ಯ ಸಾನಿಧ್ಯ ವಹಿಸಿದ್ದ ಶರಣು ಬಿ ಗದ್ದುಗೆ ಅವರ ನೇತೃತ್ವದಲ್ಲಿ ಕಾರ್ಯಕ್ರಮ ನೋಡಿಬಂತು.

ಸಾವಿರ ಸುಳ್ಳು ಹೇಳಿ ಒಂದು ಕಲ್ಯಾಣ ಕಾರ್ಯಕ್ರಮ ಮಾಡಬೇಕು ಋಣಾನುಬಂಧ ವಧು ವರರ ಕೇಂದ್ರ ನಮ್ಮೆಲ್ಲರ ಸಂಪೂರ್ಣ ಸಹಕಾರ ಇರುತ್ತದೆ. ಶಹಪುರ್ ನಗರಕ್ಕೆ ಇದು ಬಹಳ ಅವಶ್ಯಕತೆ ಇದ್ದು ಇಂತಹ ಅವಕಾಶಗಳನ್ನು ನಾವೆಲ್ಲರೂ ಭೀಮರಾಯ ಪೂಜಾರಿಯವರಿಗೆ ಬೆನ್ನೆಲುಬಾಗಿ ನಿಂತು ಸಹಾಯ ಸಹಕಾರ ನಾವೆಲ್ಲರೂ ನಿಡೋಣ ಎಂದು ಹೇಳಿದರು. ಕಾರ್ಯಕ್ರಮದ ಕೇಂದ್ರಬಿಂದುಗಳಾದ ನಾರಾಯಣ್ ಸಗರ್ ಹಿರಿಯ ಪತ್ರಕರ್ತರು ಇಂತಹ ಯುವಕರಿಗೆ ನಾವೆಲ್ಲರೂ ಪ್ರೋತ್ಸಾಹಿಸಿ ಮಾರ್ಗದರ್ಶನ ನೀಡೋಣ ಎಂದು ನುಡಿದರು.

ಗುಂಡಣ್ಣ ತುಂಡಗಿ. ಶಿವಣ್ಣ ಇಜೆರಿ. ಋಣಾನುಬಂಧ ವಧು ವರರ ಕೇಂದ್ರದ ಅಧ್ಯಕ್ಷರಾದ ಭೀಮರಾಯ ಪೂಜಾರಿ.ಸವಿತಾ ಪೂಜಾರಿ. ಶಿರಸಮ್ಮ ವಿಶ್ವಕರ್ಮ. ಮಹದೇವಮ್ಮ.ಸುಭಾಷ್ ಹೊತಪೇಟೆ. ಪ್ರದೀಪ್ ಅಣಬಿ. ಈಗ ಹಲವರು ಉಪಸ್ಥಿತರಿದ್ದರು

# ವಿದ್ಯುತ್ ವ್ಯತ್ಯಯ ಉಂಟಾಗಲಿದೆ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ಡಿಸೆಂಬರ್ 26, –ಗುರುಮಠಕಲ್‌ನ 110ಕೆವಿ ಸಬ್‌ಸ್ಟೇಷನ್‌ನಲ್ಲಿ 3ನೇ ತ್ರೈಮಾಸಿಕ ನಿರ್ವಹಣೆ ಕಾಮಗಾರಿಯನ್ನು ನಿರ್ವಹಿಸುತ್ತಿರುವ ಹಿನ್ನೆಲೆ 2024ರ ಡಿಸೆಂಬರ್ 28 ರಂದು ಶನಿವಾರ ರಂದು ಬೆಳಿಗ್ಗೆ 9 ರಿಂದ ಸಂಜೆ 4 ಗಂಟೆಯವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಯಾದಗಿರಿ ಕಾರ್ಯ ಮತ್ತು ಪಾಲನಾ ವಿಭಾಗ ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ ಕಾರ್ಯನಿರ್ವಾಹಕ ಅಭಿಯಂತರರು (ವಿ) ರಾಘವೇಂದ್ರ ಅವರು ತಿಳಿಸಿದ್ದಾರೆ.

# ಅಮಿತ್ ಶಾ ಕ್ಯಾಬ್ ನೆಟ್ ನಿಂದ ವಜಾ ಮಾಡಿ ಬಸವರಾಜ ನಾಟೇಕರ್ ಆಗ್ರಹ.



(ಮಲ್ಲಿಕಾರ್ಜುನ್ ಮಳಿಕೇರಿ)

ಮಲ್ಲಮ್ಮ ನುಡಿ ವಾರ್ತೆ

ಶಹಪುರ್ . ಪ್ರೊಫೆಸರ್ ಬೈಕ್ ಕೃಷ್ಣಪ್ಪ ಸ್ಥಾಪಿತ. ಕರ್ನಾಟಕ ದಲಿತ ಸಂಘರ್ಷ ಸಮಿತಿ ವತಿಯಿಂದ ಅಮಿತ್ ಶಾ ವಿರುದ್ಧ ಪ್ರತಿಭಟನೆ.

ಕೇಂದ್ರ ಗೃಹ ಸಚಿವರಾದ ಅಮಿತ್ ಷಾ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಬಗ್ಗೆ ಹಗುರವಾಗಿ ಮಾತನಾಡಿರುವ ಅಮಿತ್ ಶಾ ಅವರೇ ನೀವು ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಂವಿಧಾನ ಬರೆದೆ ಇದ್ದರೆ ನೀವು ಗುಜುರಿ ಅಂಗಡಿಯಲ್ಲಿ ವ್ಯಾಪಾರ ಮಾಡಿಕೊಂಡೇ ಇರಬೇಕಾಗಿತ್ತು. ದುರದೃಷ್ಟಕರ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಬಗ್ಗೆ ಈ ರೀತಿಯಾಗಿ ಹಗುರವಾಗಿ ಮಾತನಾಡಿರುವುದು ನಾಡಿನ ಜನತೆ ಖಂಡಿಸುತ್ತೇವೆ ಕೂಡಲೇ ರಾಜೀನಾಮೆ ತೆಗೆದು ಕೊಂಡು ಇವರನ್ನು ಗಡಿಪಾರು ಮಾಡುವಂತೆ ಆಗ್ರಹಿಸಿ ತಾಲೂಕ ದಂಡಾಧಿಕಾರಿಗಳು ಮುಖಾಂತರ ಪ್ರಧಾನ ಮಂತ್ರಿಗಳಿಗೆ ಹಾಗೂ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಲಾಯಿತು.

ಹಂಪಮ್ಮ ಹುಲಿಮನಿ. ಭೀಮರಾಯ ರಾಜಪುರ್. ಶಿವಲೀಲಾ ಪಾಟೀಲ್. ಮಲ್ಲಿಕಾರ್ಜುನ್. ಭೀಮರಾಯ ಸೈದಾಪುರ್. ಶರಣಪ್ಪ ಕದರಪುರ್. ಬಸವರಾಜ ಕೊಡಮನಹಳ್ಳಿ. ಹೀಗೆ

# ಲಿಂಗಸುಗೂರ ಶಿಶು ಅಭಿವೃದ್ಧಿ ಯೋಜನೆ:ಅಪೂರ್ಣ ಅರ್ಜಿಗಳು ಪೂರ್ಣಗೊಳಿಸಲು ಜ 5 ರ ವರೆಗೆ ಕಾಲಾವಧಿ

ಮಲ್ಲಮ್ಮ ನುಡಿ ವಾರ್ತೆ

ಲಿಂಗಸುಗೂರು :ಲಿಂಗಸುಗೂರ ಶಿಶು ಅಭಿವೃದ್ಧಿ ಯೋಜನೆ ವ್ಯಾಪ್ತಿಯಲ್ಲಿನ ವಿವಿಧ ಗ್ರಾಮ ಪಂಚಾಯತ/ಪುರಸಭೆ/ಪಟ್ಟಣ ಪಂಚಾಯತಿ/ವ್ಯಾಪ್ತಿಯಲ್ಲಿ ಖಾಲಿ ಇರುವ 18 ಅಂಗನವಾಡಿ ಕಾರ್ಯಕರ್ತೆ ಮತ್ತು 51 ಅಂಗನವಾಡಿ ಸಹಾಯಕಿಯರ ಗೌರವ ಸೇವೆ ಹುದ್ದೆಗಳಿಗೆ ದಿನಾಂಕ:–30.08.2024 ರಿಂದ 29.09.2024ರ ವರೆಗೆ ಅಭ್ಯರ್ಥಿಗಳಿಗೆ ಅರ್ಜಿ ಸಲ್ಲಿಸಲು ಕಾಲಾವಕಾಶ ನೀಡಲಾಗಿತ್ತು ಪ್ರಸ್ತುತ ಅರ್ಜಿ ಸಲ್ಲಿಸುವ ಕಾಲಾವಧಿ ಮುಗಿದಿದ್ದು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವಾಗ ಒಟ್ಟು 4 ವಿವಿಧ ಹಂತಗಳಿದ್ದು ಇದರಲ್ಲಿ ಕೆಲವರಿಗೆ ಒಂದನೇ ಹಂತದಲ್ಲಿಯೇ "Application Successfully Uploded" ಎಂಬ ಮೆಸೇಜ್ ಅವರಗಳ ಮೊಬೈಲ್‌ಗೆ ಸ್ವೀಕೃತವಾಗಿರುವುದರಿಂದ ಅರ್ಜಿಗಳನ್ನು ಪೂರ್ಣಗೊಳಿಸಿರುವುದಿಲ್ಲ ಯೋಜನೆಯಲ್ಲಿ ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ 400 ಅಪೂರ್ಣ ಅರ್ಜಿಗಳು ಹಾಗೂ ಅಂಗನವಾಡಿ ಸಹಾಯಕಿಯರ ಹುದ್ದೆಗೆ 256 ಅಪೂರ್ಣ ಅರ್ಜಿಗಳು ಸ್ವೀಕೃತವಾಗಿರುತ್ತವೆ.

ದಿನಾಂಕ:– 20.12.2024ರ ಸರ್ಕಾರದ ಆದೇಶದಲ್ಲಿ ಅರ್ಜಿ ಸಲ್ಲಿಸುವ ನಾಲ್ಕು ಹಂತಗಳನ್ನು ಪೂರ್ಣಗೊಳಿಸದೇ ಅಪೂರ್ಣ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಮಾತ್ರ ದಿನಾಂಕ:–26.12.2024 ರಿಂದ 05.01.2025 ರವರೆಗೆ ಅರ್ಜಿಗಳನ್ನು ಪೂರ್ಣಗೊಳಿಸಲು ವೆಬ್‌ಸೈಟ್‌ನಲ್ಲಿ ಇಲಾಖಾ ವತಿಯಿಂದಲೇ ಅವಕಾಶ ನೀಡಿ ಆದೇಶಿಸಿಲಾಗಿರುತ್ತದೆ, ಅಪೂರ್ಣ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಿಗೆ ಅರ್ಜಿಗಳನ್ನು ಪೂರ್ಣಗೋಳಿಸಲು ದಿನಾಂಕ: 26.12.2024 ರಿಂದ 05.01.2025 ರವರೆಗೆ ಸಂಜೆ 5:30 ರವರೆಗೆ ಕಾಲಾವಕಾಶ ನಿಗದಿಪಡಿಸಿದೆ.ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

# ವಿದ್ಯುತ್ ವ್ಯತ್ಯಯ ಉಂಟಾಗಲಿದೆ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ಡಿಸೆಂಬರ್ 26, ಸೈದಾಪೂರ 110ಕೆವಿ ಸಬ್ ಸ್ಟೇಷನ್‌ನಲ್ಲಿ 3ನೇ ತ್ರೈಮಾಸಿಕ ನಿರ್ವಹಣೆ ಕಾಮಗಾರಿಯನ್ನು ನಿರ್ವಹಿಸುತ್ತಿರುವ ಹಿನ್ನೆಲೆ 2024ರ ಡಿಸೆಂಬರ್ 29 ರಂದು ಭಾನುವಾರ ರಂದು ಬೆಳಿಗ್ಗೆ 9 ರಿಂದ ಸಂಜೆ 4 ಗಂಟೆಯ ವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಯಾದಗಿರಿ ಕಾರ್ಯ ಮತ್ತು ಪಾಲನಾ ವಿಭಾಗ ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ ಕಾರ್ಯನಿರ್ವಾಹಕ ಅಭಿಯಂತರರು (ವಿ) ರಾಘವೇಂದ್ರ ಅವರು ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರ

**ಪ್ರವಾಸೋದ್ಯಮ ಇಲಾಖೆ**

**ಉಪ ನಿರ್ದೇಶಕರ ಕಛೇರಿ, ಪ್ರವಾಸೋದ್ಯಮ ಇಲಾಖೆ, ಸಾರ್ವಜನಿಕ ಉದ್ಯಾನವನ ಕಲಬುರಗಿ ವಿಭಾಗ ಕಲಬುರಗಿ–585 103.** e-mail:ddtourismglb@gmail.com ದೂ: 08472–277848

ಸಂಖ್ಯೆ:ಪ್ರಇ/ಉನಿಕ/ಆಡಳಿತ/04/2022–23 ದಿನಾಂಕ:26.12.2024.

**:: ಅಲ್ಪಾವಧಿ ಇ–ಟೆಂಡರ್ ಅಧಿಸೂಚನೆ ::**

ಕಲಬುರಗಿ ಜಿಲ್ಲೆಯ ಪ್ರವಾಸಿ ತಾಣಗಳ ಪ್ರಚಾರಕ್ಕೆ ಸಂಬಂಧಿಸಿದಂತೆ ಕಾಫಿಟೇಬಲ್ ಬುಕ್ ಹಾಗೂ ಜಿಲ್ಲೆಯ ಸಮಗ್ರ ಮಾಹಿತಿಯ ಕರಪತ್ರ ಮುದ್ರಿಸುವ (Tender No: RD/2024-25/IND0217) ಮತ್ತು ಕಲಬುರಗಿ ಜಿಲ್ಲೆಯಲ್ಲಿ ಸೈನೇಜ್‌ಗಳ ಅಳವಡಿಕೆ, ಪ್ರವಾಸಿ ತಾಣದ ಮಾಹಿತಿಯ ಕ್ಯೂಆರ್ ಕೋಡ್ ಅಳವಡಿಸುವ ಹಾಗೂ ಪ್ರಸ್ತುತ ಇರುವ ಹೋರ್ಡಿಂಗ್ಸ್‌ಗಳಿಗೆ ಸ್ಟಿಕರಿಂಗ್ ಅಳವಡಿಸುವ (Tender No: RD/2024-25/IND0216) ಟೆಂಡರ್‌ಗಳನ್ನು ಕೆ.ಟಿ.ಪಿ.ಪಿ ಕಾಯ್ದೆ 1999 ರ ನಿಯಮ 2000 ರನ್ವಯ ಅಲ್ಪಾವಧಿ ದ್ವಿ– ಲಕೋಟೆ ಪದ್ಧತಿಯನ್ವಯ ಇ–ಪ್ರಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ.

1) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ: ದಿನಾಂಕ: **04.01.2025 ಸಂಜೆ 5:30 ಗಂಟೆಗೆ,** 2) ಟೆಂಡರ್‌ಗೆ ಸಂಬಂಧಿಸಿದ ಸ್ಪಷ್ಟೀಕರಣ ಪಡೆಯಲು ಕೊನೆಯ ದಿನಾಂಕ: **03.01.2025 ಸಂಜೆ 5:30 ಗಂಟೆಗೆ** 3) ಮಾದರಿ ಸಾಮಗ್ರಿಗಳನ್ನು ಸಲ್ಲಿಸುವ ಕೊನೆ ದಿನಾಂಕ : **06.01.2025 ಸಂಜೆ 5:30 ಗಂಟೆಗೆ,** 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ ದಿನಾಂಕ: **08.01.2025 ಬೆಳಿಗ್ಗೆ 11:00 ಗಂಟೆಗೆ,** 5) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: **ದಿನಾಂಕ: 10.01.2025 ಬೆಳಿಗ್ಗೆ 11:00 ಗಂಟೆಗೆ**

ಇ.ಎಂ.ಡಿ ಮೊತ್ತ ಮತ್ತು ಹೆಚ್ಚಿನ ವಿವರಗಳನ್ನು https://kppp.karnataka.gov.in ಪೋರ್ಟಲನಲ್ಲಿ ಹಾಗೂ ಕೆಳ ಸಹಿದಾರರ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ಟೆಂಡರ್‌ಗೆ ಸಂಬಂಧಿಸಿದ ಎಲ್ಲಾ ಹೆಚ್ಚುವರಿ ಅಧಿಸೂಚನೆಗಳನ್ನು, ಬದಲಾವಣೆಗಳನ್ನು ಮತ್ತು ತಿದ್ದುಪಡಿಗಳನ್ನು https://kppp.karnataka.gov.in ಜಾಲತಾಣದಲ್ಲಿ ಮಾತ್ರ ಪ್ರಕಟಿಸಲಾಗುವುದು.

**ಸಹಿ/– ಉಪ ನಿರ್ದೇಶಕರು**
**ಪ್ರವಾಸೋದ್ಯಮ ಇಲಾಖೆ ಕಲಬುರಗಿ ವಿಭಾಗ ಕಲಬುರಗಿ.**

ವಾ.ಸಾ.ಸಂ.ಇ/ಕಲಬುರಗಿ/778/ಕೆ.ಎಸ್.ಎಂ.ಸಿ.&ಎ/2024–25

Printed, Published and Owned by : Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad - 585330.
Editor: Ramesh Reddy. Office Ph. No: +91 9449732000.